ಶನಿವಾರ, ಮೇ 8, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 128 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೋವಿಡ್ ಪಿಡುಗಿನ ಮಧ್ಯೆ ಬಂದಿರುವ 'ಅಮ್ಮಂದಿರ ದಿನ' (ಮೇ 9)ದ ಹಿನ್ನೆಲೆಯಲ್ಲಿ ದುಡಿಯುವ ತಾಯಂದಿರು ಎದುರಿಸುತ್ತಿರುವ ಸವಾಲುಗಳ ನೋಟ ಇಲ್ಲಿದೆ

ಚರ್ಚೆ
ಜನರ ಹಿತ, ಪ್ರಾದೇಶಿಕ ಅಸ್ಮಿತೆಯನ್ನು ಕಾಯಲು ಸಾಧ್ಯವಿರುವುದು ಪ್ರಾದೇಶಿಕ ಪಕ್ಷಗಳಿಗೋ ರಾಷ್ಟ್ರೀಯ ಪಕ್ಷಗಳಿಗೋ? 7

ಮುಂಬೈ: ಕೋವಿಡ್ ಎರಡನೇ ಅಲೆ ನಿಯಂತ್ರಣಕ್ಕೆ 'ವಾರ್ ರೂಂ' ಸಹಕಾರಿ 8

ಮಳೆ: ಸಿಡಿಲು ಬಡಿದು ಇಬ್ಬರು ಸಾವು 4

ಸೆನ್ಸೆಕ್ಸ್	ನಿಫ್ಟಿ	₹/$
49,206 ▲	14,823 ▲	73.51 ▲

ಬೆಳಿಗ್ಗೆ 10ರ ಬಳಿಕ ರಸ್ತೆಗಿಳಿದರೆ ಕಠಿಣ ಕ್ರಮ • ಅಂತರ ಜಿಲ್ಲಾ ಪ್ರಯಾಣ ನಿರ್ಬಂಧ

10ರಿಂದ 14 ದಿನ ಲಾಕ್‌ಡೌನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ನಿಯಂತ್ರಣಕ್ಕೆ ಸಿಗದಂತೆ ಏರುಗತಿ ಕಂಡಿರುವ ಬೆನ್ನಲ್ಲೇ, ಪರಿಸ್ಥಿತಿಯನ್ನು ಹದ್ದುಬಸ್ತಿಗೆ ತರಲು ಮುಂದಾಗಿರುವ ಸರ್ಕಾರ ಮೇ 10 ರಿಂದ ಮೇ 24 ರವರೆಗೆ ರಾಜ್ಯದಾದ್ಯಂತ ಲಾಕ್‌ಡೌನ್ ಘೋಷಿಸಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಂಪುಟ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯಡಿಯೂರಪ್ಪ, 'ಕರ್ಫ್ಯೂ ವಿಧಿಸಿರುವುದು ಹೆಚ್ಚಿನ ಪರಿಣಾಮ ಬೀರಿಲ್ಲ. ಸಾರ್ವಜನಿಕರು ನಿಯಮ ಉಲ್ಲಂಘಿಸಿ ಓಡಾಡುತ್ತಿರುವುದು ಗಮನಕ್ಕೆ ಬಂದಿದೆ. ಮೇ 10 ರ ಬೆಳಿಗ್ಗೆ 6 ಗಂಟೆಯಿಂದ ಮೇ 24 ರ ಬೆಳಿಗ್ಗೆ 6 ರವರೆಗೆ ಲಾಕ್‌ಡೌನ್ ಘೋಷಿಸಲಾಗಿದೆ' ಎಂದರು. 'ಹಾಲು, ಹಣ್ಣು, ತರಕಾರಿ, ಮಾಂಸ, ದಿನಸಿ ಪದಾರ್ಥಗಳನ್ನು ಬೆಳಿಗ್ಗೆ 6 ರಿಂದ 10 ಗಂಟೆಯವರೆಗೆ ಮಾರಾಟ ಮಾಡಲು ಅವಕಾಶವಿದೆ. ಬೆಳಿಗ್ಗೆ 10 ಗಂಟೆಯ ಬಳಿಕ ಓಡಾಡಿದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

'ತಳ್ಳುಗಾಡಿಗಳಲ್ಲಿ ತರಕಾರಿ ಮಾರಾಟ ಮಾಡಲು ಅವಕಾಶ ನೀಡಲಾಗಿದೆ. ಆದ್ದರಿಂದ ತಮ್ಮ ಮನೆಗಳ ಮುಂದೆಯೇ ಹಣ್ಣು-ತರಕಾರಿಗಳನ್ನು ಖರೀದಿಸಬಹುದು. ಆಸ್ಪತ್ರೆಗೆ ಮತ್ತು ಚಿಕಿತ್ಸೆಗೆ ಹೋಗುವವರನ್ನು ಹೊರತುಪಡಿಸಿ ಬೇರೆ ಯಾವುದೇ ವಾಹನಗಳ ಸಂಚಾರಕ್ಕೂ ಅವಕಾಶ ನೀಡುವುದಿಲ್ಲ' ಎಂದು ಯಡಿಯೂರಪ್ಪ ಹೇಳಿದರು.

'ಕಟ್ಟಡ ನಿರ್ಮಾಣ, ರಸ್ತೆ ಕಾಮಗಾರಿ ಚಟುವಟಿಕೆಗಳಿಗೆ ಅವಕಾಶ ನೀಡಲಾಗಿದೆ. ಅದಕ್ಕಾಗಿ ನಿರ್ಬಂಧಿತ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಆದ ಕಾರಣ ಕಾರ್ಮಿಕರು ಯಾರೂ ಹಳ್ಳಿಗಳಿಗೆ ಹೋಗಬಾರದು' ಎಂದು ಮನವಿ ಮಾಡಿದರು.

ಯಾವುದಕ್ಕೆಲ್ಲ ಅವಕಾಶ

- ಆಹಾರ, ಹಣ್ಣು-ತರಕಾರಿ, ದಿನಸಿ, ಮೀನು-ಮಾಂಸ, ಪ್ರಾಣಿಗಳ ಆಹಾರಗಳನ್ನು (ಬೆಳಿಗ್ಗೆ 6 ರಿಂದ 10 ವರೆಗೆ ಮಾತ್ರ ಮಾರಾಟ ಮಾಡುವುದು), ನ್ಯಾಯಬೆಲೆ ಅಂಗಡಿ ತೆರೆಯಲು ಅವಕಾಶವಿದೆ. 24x7 ಎಲ್ಲ ಬಗೆಯ ಹೋಂ ಡೆಲಿವರಿಗೆ ಅವಕಾಶ
- ಬೆಳಿಗ್ಗೆ 6 ರಿಂದ 10 ರವರೆಗೆ ಮದ್ಯದಂಗಡಿಯಿಂದ ಪಾರ್ಸೆಲ್ ಒಯ್ಯಬಹುದು.
- ತಳ್ಳುವ ಗಾಡಿಗಳಲ್ಲಿ ಬೆಳಿಗ್ಗೆ 6ರಿಂದ ಸಂಜೆ 6 ರವರೆಗೆ ಹಣ್ಣು ತರಕಾರಿ ಮಾರಬಹುದು
- ಹಾಲಿನ ಬೂತ್‌ಗಳು ಮತ್ತು ಹಾಪ್‌ಕಾಮ್ಸ್‌ಗಳು ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ತೆರೆಯಬಹುದು.
- ಆಹಾರ ಸಂಸ್ಕರಣಾ ಘಟಕಗಳು, ಬ್ಯಾಂಕ್, ವಿಮಾ ಕಚೇರಿಗಳು, ಎಟಿಎಂಗಳು, ದೂರಸಂಪರ್ಕ, ಇಂಟರ್‌ನೆಟ್ ಸೇವೆ
- ಇ-ಕಾರ್ಮರ್ಸ್‌ನವರು ಮನೆಗಳಿಗೆ ವಸ್ತುಗಳನ್ನು ತಲುಪಿಸಲು ಅವಕಾಶ
- ಕೋಲ್ಡ್ ಸ್ಟೋರೇಜ್, ಗೋದಾಮು ಸೇವೆಗಳು
- ವಿಮಾನ ಸಂಚಾರ ಮತ್ತು ರೈಲಿನ ಕಾರ್ಯಾಚರಣೆ ಇದೆ. ಇದರ ಮೂಲಕ ಬಂದವರು ಟಿಕೆಟ್ ತೋರಿಸಿ, ತಮ್ಮ ಮನೆಗಳಿಗೆ ತಾವೇ ಮಾಡಿಕೊಂಡ ಖಾಸಗಿ ವಾಹನ, ಆಟೋ, ಕ್ಯಾಬ್ ಮೂಲಕ ಹೋಗಬಹುದು
- ಅಗತ್ಯ ವಸ್ತುಗಳ ಉತ್ಪಾದನಾ ಘಟಕಗಳು, ಸಾರ್ವಜನಿಕ ಮತ್ತು ಖಾಸಗಿ ರಂಗದ ಉದ್ಯಮಗಳು ಕೋವಿಡ್ ಮಾರ್ಗಸೂಚಿ ಅನುಸರಿಸಿ ಕಾರ್ಯನಿರ್ವಹಿಸಬಹುದು.
- ಕೋವಿಡ್ ನಿಯಮ ಪಾಲಿಸಿ ನಿರ್ಮಾಣ ಕಾಮಗಾರಿಗಳನ್ನು ನಡೆಸಬಹುದು. ಕಾರ್ಮಿಕರಿಗೆ ವಾಸ್ತವ್ಯಕ್ಕೆ ಸ್ಥಳದಲ್ಲಿಯೇ ವ್ಯವಸ್ಥೆ ಮಾಡಬಹುದು.
- ಮದುವೆಗಳಿಗೆ ಅವಕಾಶ ಇದ್ದು, 50 ಜನ ಮೀರುವಂತಿಲ್ಲ.
- ಅಂತ್ಯಕ್ರಿಯೆಗೆ 5 ಕ್ಕಿಂತ ಹೆಚ್ಚು ಜನ ಸೇರುವಂತಿಲ್ಲ
- ಆಸ್ಪತ್ರೆಗಳು, ಆಯುಷ್ ಮತ್ತು ವೆಟರ್ನರಿ ಆಸ್ಪತ್ರೆಗಳು, ಕ್ಲಿನಿಕ್‌ಗಳು, ಔಷಧದ ಅಂಗಡಿಗಳು, ಲ್ಯಾಬ್‌ಗಳು, ಜನೌಷಧಿ ಕೇಂದ್ರಗಳು, ರಕ್ತ ನಿಧಿಗಳು
- ಕೃಷಿ ಚಟುವಟಿಕೆಗಳು
- ಅಂಗವಿಕಲರು, ಬುದ್ಧಿಮಾಂದ್ಯರು, ಹಿರಿಯ ನಾಗರಿಕರ ಆರೈಕೆ ವ್ಯವಸ್ಥೆ

ಏನೆಲ್ಲ ಇರುವುದಿಲ್ಲ

- ಮೆಟ್ರೊ ಸೇವೆ
- ತುರ್ತು ಸಂದರ್ಭ ಹೊರತುಪಡಿಸಿ ಟ್ಯಾಕ್ಸಿ, ಕ್ಯಾಬ್, ಆಟೋಗಳಿಗೆ ಹಾಗೂ ನಾಗರಿಕರ ಓಡಾಟ
- ಶಾಲಾ-ಕಾಲೇಜು ಮತ್ತು ಶಿಕ್ಷಣ ಸಂಸ್ಥೆಗಳು, ಕೋಚಿಂಗ್ ಸೆಂಟರ್‌ಗಳು ನಡೆಯುವಂತಿಲ್ಲ. ಆನ್‌ಲೈನ್ ತರಗತಿಗಳಿಗಷ್ಟೇ ಅವಕಾಶ
- ಹೋಟೆಲ್, ರೆಸ್ಟೋರೆಂಟ್ ಮತ್ತು ಆತಿಥ್ಯ ಸೇವೆಗಳು. (ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಂದ ಪಾರ್ಸೆಲ್ ಒಯ್ಯಬಹುದು)
- ಸಿನಿಮಾ ಹಾಲ್, ಶಾಪಿಂಗ್ ಮಾಲ್, ಜಿಮ್ನಾಷಿಯಂ, ಕ್ರೀಡಾ ಕಾಂಪ್ಲೆಕ್ಸ್, ಈಜುಕೊಳ
- ಸಾಮಾಜಿಕ, ರಾಜಕೀಯ, ಧಾರ್ಮಿಕ, ಮನರಂಜನೆಗಾಗಿ ಜನರನ್ನು ಸೇರಿಸುವುದು ನಿಷೇಧ.

ಕಾರ್ಯ ನಿರ್ವಹಿಸುವ ಸರ್ಕಾರಿ ಕಚೇರಿಗಳು:

- ಆರೋಗ್ಯ, ವೈದ್ಯಕೀಯ ಶಿಕ್ಷಣ, ಪೊಲೀಸ್, ಹೋಮ್ ಗಾರ್ಡ್, ಅಗ್ನಿಶಾಮಕ,ಕಂದಾಯ ವಿದ್ಯುತ್, ನೀರು, ನೈರ್ಮಲ್ಯ
- ಬಿಬಿಎಂಪಿ, ಎಲ್ಲ ನಗರ ಸ್ಥಳೀಯ ಸಂಸ್ಥೆಗಳು

ಕಟ್ಟುನಿಟ್ಟಿನ ಕ್ರಮಗಳೇನು?

- ಸಾರ್ವಜನಿಕರು ರಸ್ತೆಗೆ ಬರುವಂತಿಲ್ಲ
- ಖಾಸಗಿ ಮತ್ತು ಸರ್ಕಾರಿ ಬಸ್‌ಗಳು, ವಾಹನಗಳು ಸಂಚಾರ ಇಲ್ಲ.
- ಅಂತರ ಜಿಲ್ಲೆ ಮತ್ತು ಅಂತರ ರಾಜ್ಯಗಳ ವಾಹನ ಸಂಚಾರವಿಲ್ಲ. ತುರ್ತು ಸಂದರ್ಭದಲ್ಲಿ ಮಾತ್ರ ಅವಕಾಶ ನೀಡಲಾಗುವುದು
- ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿ, ಹೈಕೋರ್ಟ್ ನ್ಯಾಯಮೂರ್ತಿಗಳು, ಅಧಿಕಾರಿಗಳು ಸಿಬ್ಬಂದಿ ಗುರುತಿನ ಚೀಟಿ ಇಟ್ಟುಕೊಂಡರೆ ಮಾತ್ರ ಸಂಚಾರಕ್ಕೆ ಅವಕಾಶ

ರಾಜ್ಯಕ್ಕೆ ಆಮ್ಲಜನಕ ಹೆಚ್ಚಳ ತಡೆ ಕೇಂದ್ರದ ಯತ್ನಕ್ಕೆ ಸೋಲು

ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಕ್ಕೆ 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಪಾಲಿನ ವೈದ್ಯಕೀಯ ಆಮ್ಲಜನಕವನ್ನು ದಿನಕ್ಕೆ 1,200 ಟನ್‌ಗೆ ಹೆಚ್ಚಿಸುವುದನ್ನು ತಡೆಯುವ ಕೇಂದ್ರದ ಪ್ರಯತ್ನಕ್ಕೆ ಸೋಲಾಗಿದೆ. ಕರ್ನಾಟಕಕ್ಕೆ ಪ್ರತಿ ದಿನ ಪೂರೈಸುವ ಆಮ್ಲಜನಕದ ಪಾಲನ್ನು 1,200 ಟನ್‌ಗೆ ಹೆಚ್ಚಿಸುವಂತೆ ಕೇಂದ್ರಕ್ಕೆ ಕರ್ನಾಟಕ ಹೈಕೋರ್ಟ್ ಬುಧವಾರ ಆದೇಶ ನೀಡಿತ್ತು. ಈ ಆದೇಶಕ್ಕೆ ತಡೆ ಕೊಡುವಂತೆ ಕೇಂದ್ರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿತ್ತು. ಹೈಕೋರ್ಟ್ ಆದೇಶದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಸ್ಪಷ್ಟವಾಗಿ ಹೇಳಿದೆ.

ಕೋವಿಡ್-19ರ ಎರಡನೇ ಅಲೆಯಿಂದ ಕರ್ನಾಟಕದ ಜನರು ಸಂಕಷ್ಟದಲ್ಲಿರಲು ಬಿಡಲಾಗದು. ಜನರ ಅಗತ್ಯಗಳ ವಿಚಾರದಲ್ಲಿ ಹೈಕೋರ್ಟ್‌ಗಳು ಮೌನವಾಗಿರುವುದು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರ ಪೀಠವು ಹೇಳಿದೆ.

8ನೇ ಪುಟ ನೋಡಿ

'ದೆಹಲಿಗೆ 700 ಟನ್ ಆಮ್ಲಜನಕ ಪೂರೈಸಿ'

ದೆಹಲಿಗೆ 700 ಟನ್ ಆಮ್ಲಜನಕ ಪೂರೈಸುವ ಕೇಂದ್ರದ ಬದ್ಧತೆಯು ಒಂದು ದಿನಕ್ಕೆ ಸೀಮಿತವಲ್ಲ. ಮುಂದಿನ ಆದೇಶದವರೆಗೆ ಪ್ರತಿ ದಿನವೂ ಪೂರೈಸಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

'ದಿನಕ್ಕೆ 700 ಟನ್ ಪೂರೈಸಬೇಕು ಎಂದರೆ ಪೂರೈಸಬೇಕು ಎಂದೇ ಅರ್ಥ. ಬಲಪ್ರಯೋಗ ಮಾಡುವಂತೆ ನಮ್ಮ ಮೇಲೆ ಒತ್ತಡ ಹೇರಬೇಡಿ' ಎಂದು ನ್ಯಾಯಮೂರ್ತಿ ಚಂದ್ರಚೂಡ್ ನೇತೃತ್ವದ ಪೀಠವು ಖಾರವಾಗಿಯೇ ಹೇಳಿದೆ.

ಗುರುವಾರ ಮಧ್ಯರಾತ್ರಿವರೆಗೆ 527 ಟನ್ ಮಾತ್ರ ಪೂರೈಕೆ ಆಗಿದೆ. ಶುಕ್ರವಾರ ಬೆಳಿಗ್ಗೆ 86 ಟನ್ ಸಿಕ್ಕಿದೆ. ಇನ್ನೂ 16 ಟನ್ ಸಾಗಾಟದಲ್ಲಿದೆ ಎಂದು ದೆಹಲಿ ಸರ್ಕಾರದ ಪರ ವಕೀಲ ರಾಹುಲ್ ಮೆಹ್ರಾ ಪೀಠಕ್ಕೆ ಮಾಹಿತಿ ಕೊಟ್ಟರು.

'ನೀವು ಗುರುವಾರ ಸಲ್ಲಿಸಿದ ಪ್ರಮಾಣಪತ್ರದಲ್ಲಿ 700 ಟನ್ ಪೂರೈಕೆ ಆಗಿದೆ ಎಂದಿದೆ. ಆದರೆ, ಕಂಟೈನರ್‌ಗಳು ಮತ್ತು ಟ್ಯಾಂಕರ್‌ಗಳಿಗೆ ಸಂಬಂಧಿಸಿದ ವಿವರಣೆಗಳು ಮತ್ತು ಸ್ಪಷ್ಟೀಕರಣಗಳಿವೆ. ನಾವು ಕಂಟೈನರ್ ಚಾಲಕರಲ್ಲ. ಪ್ರತಿ ದಿನ 700 ಟನ್ ಆಮ್ಲಜನಕ ಪೂರೈಸಬೇಕಿದೆ ಎಂಬುದನ್ನು ದಯವಿಟ್ಟು ಗಮನದಲ್ಲಿ ಇರಿಸಿಕೊಳ್ಳಿ' ಎಂದು ಪೀಠವು ಕೇಂದ್ರಕ್ಕೆ ಸೂಚಿಸಿತು.

'ಆಮ್ಲಜನಕ ಬೇಕಾದರೆ ಸಿಎಂಗೆ ಕೇಳಿ'

ತುಮಕೂರು: 'ಆಮ್ಲಜನಕ ಬೇಕಾದರೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನೇ ಕೇಳಿ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಮುಖಂಡರೊಬ್ಬರಿಗೆ ಹೇಳಿರುವ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ನಗರದಲ್ಲಿ ಬುಧವಾರ ರಾತ್ರಿ ಆಮ್ಲಜನಕ ಕೊರತೆ ಕಾಣಿಸಿಕೊಂಡಿರುವ ವಿಚಾರವನ್ನು ತಿಳಿಸಲು ಸಚಿವರಿಗೆ ತುಮಕೂರು ವಿಶ್ವವಿದ್ಯಾಲಯದ ಸಿಂಡಿಕೇಟ್‌ನ ಮಾಜಿ ಸದಸ್ಯ ಮಂಜುನಾಥ್ ಕರೆ ಮಾಡಿದ್ದಾರೆ.

'ತುಮಕೂರಿನಲ್ಲಿ ಆಮ್ಲಜನಕದ ಕೊರತೆಯಾಗಿದೆ. ನೀವು ಜಿಲ್ಲಾ ಉಸ್ತುವಾರಿ ಸಚಿವರು. ದಯಮಾಡಿ, ಇದೊಂದು ಕೆಲಸ ಮಾಡಿಕೊಡಿ. ಆಮ್ಲಜನಕ ಕೊಡಿಸಿ' ಎಂದು ಕೇಳಿಕೊಂಡಿದ್ದಾರೆ. ಅದಕ್ಕೆ ಉತ್ತರಿಸಿದ ಸಚಿವರು, 'ಆಮ್ಲಜನಕ ಬೇಕಾದರೆ ದಯಮಾಡಿ ಮುಖ್ಯಮಂತ್ರಿಗೆ ಮಾತನಾಡಿ' ಎಂದು ಹೇಳಿ ಕರೆ ಕಡಿತಗೊಳಿಸಿದ್ದಾರೆ.

ರಾಜ್ಯ ಕೋವಿಡ್ ಅಂಕಿ-ಅಂಶ

ಒಟ್ಟು ಸೋಂಕಿತರು	18,38,885 ▲ (17,90,104 ನಿನ್ನೆಯ ವಿವರ)
ಸಕ್ರಿಯ ಪ್ರಕರಣಗಳು	5,36,641 ▲
ಗುಣಮುಖರಾದವರು	12,84,420 ▲
ಒಟ್ಟು ಸಾವು	17,804 ▲

ದಿನದ ಏರಿಕೆ

ಹೊಸ ಪ್ರಕರಣ	48,781 ▲
ಗುಣಮುಖ	28,623 ▲
ಸಾವು	592 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸರ್ವಪಕ್ಷಗಳ ಸಭೆಗೆ ಸೋನಿಯಾ ಗಾಂಧಿ ಆಗ್ರಹ 8

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಸಿ.ಟಿ ಸ್ಕ್ಯಾನ್‌ಗೆ ₹ 1,500 ದರ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಖಾಸಗಿ ಆಸ್ಪತ್ರೆಗಳಲ್ಲಿ ಸಿ.ಟಿ ಸ್ಕ್ಯಾನ್‌ಗೆ ಗರಿಷ್ಠ ₹ 1,500 ಮತ್ತು ಎದೆಯ ಡಿಜಿಟಲ್ ಅಥವಾ ಸಾಮಾನ್ಯ ಸ್ವರೂಪದ ಎಕ್ಸ್‌ರೇಗೆ ಗರಿಷ್ಠ ₹ 250 ದರ ನಿಗದಿಪಡಿಸಿ ಆರೋಗ್ಯ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ಕೋವಿಡ್‌ ರೋಗಿಗಳಲ್ಲಿ ಶ್ವಾಸಕೋಶದ ಸೋಂಕಿನ ಪ್ರಮಾಣ ತಿಳಿಯಲು ಹೆಚ್ಚಿನ ರೋಗಿಗಳಿಗೆ ಸಿ.ಟಿ ಸ್ಕ್ಯಾನ್ ಮತ್ತು ಎಕ್ಸ್‌ರೇ ಮಾಡಿಸಲಾಗುತ್ತಿದೆ. ಸಾಮಾನ್ಯ ಸಂದರ್ಭಗಳಲ್ಲಿ ₹ 2,000ದಿಂದ ₹ 3,000 ಇದ್ದ ಸಿ.ಟಿ ಸ್ಕ್ಯಾನ್ ದರ ಇದೀಗ ₹ 6,000ದಿಂದ ₹ 8,000ವರೆಗೆ ಏರಿಕೆಯಾಗಿತ್ತು. ಖಾಸಗಿ ಆಸ್ಪತ್ರೆಗಳು, ಪ್ರಯೋಗಾಲಯಗಳು ಜನರನ್ನು ಶೋಷಿಸುತ್ತಿವೆ ಎಂಬ ದೂರುಗಳಿದ್ದವು. ಜನರ ಒತ್ತಾಯಕ್ಕೆ ಮಣಿದ ಆರೋಗ್ಯ ಇಲಾಖೆ ಸಿ.ಟಿ ಸ್ಕ್ಯಾನ್ ಮತ್ತು ಎಕ್ಸ್‌ರೇಗೆ ದರ ನಿಗದಿಪಡಿಸಿ ಆದೇಶ ಹೊರಡಿಸಿದೆ. ಇದನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಆರೋಗ್ಯ ಇಲಾಖೆ ಎಚ್ಚರಿಕೆ ನೀಡಿದೆ.

ಪ್ರಯೋಗಾಲಯ ನಿಲ್ಲಿಸುವುದು ವಾಸಿ: ಫಾನಾ

ಸರ್ಕಾರ ನಿಗದಿ ಮಾಡಿರುವ ದರದಲ್ಲಿ ಸೇವೆ ಒದಗಿಸುವುದು ತುಂಬಾ ಕಷ್ಟ. ಅವರ ಆದೇಶ ಒಪ್ಪಿಕೊಂಡರೆ ಸಿಬ್ಬಂದಿಗೆ ಸಂಬಳ ಕೊಡಲೂ ಆಗುವುದಿಲ್ಲ. ಅದರ ಬದಲು ಪ್ರಯೋಗಾಲಯಗಳಿಗೆ ಬೀಗ ಹಾಕುವುದು ವಾಸಿ ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳ ಸಂಘದ (ಫಾನಾ) ಅಧ್ಯಕ್ಷ ಎಚ್.ಎಂ. ಪ್ರಸನ್ನ ಹೇಳಿದ್ದಾರೆ. ಹೊಸ ದರದಿಂದಾಗಿ ಕೋವಿಡ್ ರೋಗಿಗಳು ಪರದಾಡಬೇಕಾಗಬಹುದು. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಲಿ. ₹3,000 ಅಥವಾ ₹4,000 ದರ ನಿಗದಿ ಮಾಡಿದರೆ ಒಪ್ಪಿಕೊಳ್ಳಬಹುದು. ತೀರಾ ಇಷ್ಟು ಕಡಿಮೆ ದರ ನಿಗದಿ ಮಾಡಿದರೆ ಹೇಗೆ. ಅದಕ್ಕೊಂದು ಬೆಲೆ ಬೇಡವೆ? ಪ್ರಯೋಗಾಲಯದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ ಪಿಪಿಇ ಕಿಟ್ ಒದಗಿಸಬೇಕು. ಅದಕ್ಕೆ ಹಣ ಎಲ್ಲಿಂದ ತರಬೇಕು. ನಮ್ಮ ಬೇಡಿಕೆ ಪಟ್ಟಿ ಸಿದ್ಧಪಡಿಸುತ್ತಿದ್ದು, ಅದನ್ನು ಸರ್ಕಾರಕ್ಕೆ ಕಳುಹಿಸುತ್ತೇವೆ ಎಂದರು.

> ಸಿಟಿ ಸ್ಕ್ಯಾನ್‌ಗೆ ಖಾಸಗಿ ಆಸ್ಪತ್ರೆಗಳು ಸರ್ಕಾರ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹಣ ಪಡೆದರೆ ಆ ಆಸ್ಪತ್ರೆಗಳ ಪರವಾನಗಿ ರದ್ದುಗೊಳಿಸಲಾಗುವುದು
> **ಡಾ.ಕೆ. ಸುಧಾಕರ್,** ಆರೋಗ್ಯ ಸಚಿವ

ಚುನಾವಣಾ ಆಯೋಗದ ವಕೀಲ ರಾಜೀನಾಮೆ

ನವದೆಹಲಿ: ಸುಪ್ರೀಂ ಕೋರ್ಟ್‌ನಲ್ಲಿ ಚುನಾವಣಾ ಆಯೋಗವನ್ನು ಪ್ರತಿನಿಧಿಸುತ್ತಿದ್ದ ವಕೀಲ ಮೋಹಿತ್ ಡಿ. ರಾಮ್ ಅವರು ಈ ಹೊಣೆಗಾರಿಕೆಗೆ ರಾಜೀನಾಮೆ ನೀಡಿದ್ದಾರೆ. ಆಯೋಗದ ಈಗಿನ ಕಾರ್ಯನಿರ್ವಹಣೆ ಮತ್ತು ತಮ್ಮ ಮೌಲ್ಯಗಳು ಹೊಂದಾಣಿಕೆ ಆಗುತ್ತಿಲ್ಲ. ಹಾಗಾಗಿ ಈ ನಿರ್ಧಾರ ಕೈಗೊಂಡಿರುವುದಾಗಿ ಮೋಹಿತ್ ತಿಳಿಸಿದ್ದಾರೆ.

ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿಗಳು ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಮಾಧ್ಯಮಗಳು ವರದಿ ಮಾಡಬಾರದು ಎಂದು ಕೋರಿ ಆಯೋಗ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾ ಮಾಡಿತ್ತು. ಅದರ ಮರು ದಿನವೇ ಮೋಹಿತ್ ಅವರು ಆಯೋಗದ ಪರ ವಕೀಲಿಕೆಯನ್ನು ಬಿಟ್ಟಿದ್ದಾರೆ.

ಲಸಿಕೆಗಾಗಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಬೆಂಗಳೂರಿನ ಆವಲಹಳ್ಳಿ ಆರೋಗ್ಯ ಕೇಂದ್ರದ ಮುಂದೆ ಶುಕ್ರವಾರ ವೈಯಕ್ತಿಕ ಅಂತರ ಮರೆತು ಸೇರಿದ್ದ ಜನ ಪ್ರಜಾವಾಣಿ ಚಿತ್ರ : ಅನೂಪ್ ರಾಘ.ಟಿ.

ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಸತತ ನಾಲ್ಕನೆಯ ದಿನವೂ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಲಾಗಿದೆ. ಇದರ ಪರಿಣಾಮವಾಗಿ ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಲೀಟರ್ ಪೆಟ್ರೋಲ್ ಬೆಲೆ ₹ 102ರ ಗಡಿ ದಾಟಿದೆ.

ಬೆಂಗಳೂರಿನಲ್ಲಿ ಶುಕ್ರವಾರ ಪೆಟ್ರೋಲ್ ಬೆಲೆ ಲೀಟರ್‌ಗೆ 29 ಪೈಸೆ ಹೆಚ್ಚಳವಾಗಿ ₹ 94.30ಗೆ ತಲುಪಿದೆ. ಡೀಸೆಲ್ ಬೆಲೆಯು 33 ಪೈಸೆಯಷ್ಟು ಜಾಸ್ತಿ ಆಗಿ, ಲೀಟರ್‌ಗೆ ₹ 86.64ಕ್ಕೆ ತಲುಪಿದೆ. ನಾಲ್ಕು ದಿನಗಳ ಅವಧಿಯಲ್ಲಿ ಪೆಟ್ರೋಲ್ ಬೆಲೆ 88 ಪೈಸೆಯಷ್ಟು, ಡೀಸೆಲ್ ಬೆಲೆ ₹ 1ರಷ್ಟು ಜಾಸ್ತಿ ಆಗಿದೆ. ಪಶ್ಚಿಮ ಬಂಗಾಳ ಸೇರಿದಂತೆ ನಾಲ್ಕು ರಾಜ್ಯಗಳು ಹಾಗೂ ಪುದುಚೇರಿ ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ ತೈಲ ಬೆಲೆ ನಿರಂತರವಾಗಿ ಪರಿಷ್ಕರಣೆ ಆಗುತ್ತಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಜೆಪಿ ಶಾಸಕರ ಒತ್ತಾಯ • ತಿರಸ್ಕರಿಸಿದ್ದ ಅಧಿಕಾರಿಗಳು

ಮುಸ್ಲಿಂ ನೌಕರರ ವಜಾಕ್ಕೆ ಮೊದಲಿನಿಂದಲೂ ಒತ್ತಡ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ತೇಜಸ್ವಿ ಸೂರ್ಯ ನೇತೃತ್ವದಲ್ಲಿ ದಕ್ಷಿಣ ವಲಯದ ಕೋವಿಡ್ ವಾರ್ ರೂಮ್ ಮೇಲೆ ದಾಳಿ ನಡೆಯುವುದಕ್ಕೂ ಹಲವು ದಿನಗಳ ಮುನ್ನವೇ, ವಾರ್ ರೂಮ್‌ನಲ್ಲಿನ 17 ಮುಸ್ಲಿಂ ನೌಕರರನ್ನು ವಜಾ ಮಾಡಬೇಕೆಂದು ಬಿಜೆಪಿ ಶಾಸಕರೊಬ್ಬರು ಅಧಿಕಾರಿಗಳ ಮೇಲೆ ಒತ್ತಡ ಹೇರಿದ್ದರು ಎಂಬ ಮಾಹಿತಿ ಹೊರಬಿದ್ದಿದೆ.

'ವಾರ್ ರೂಮ್‌ನಲ್ಲಿನ ಎಲ್ಲ ಮುಸ್ಲಿಂ ಸಿಬ್ಬಂದಿಯನ್ನು ತಕ್ಷಣವೇ ಕೆಲಸದಿಂದ ತೆಗೆದು ಹಾಕಬೇಕು ಎಂದು ಶಾಸಕ ಮತ್ತು ಬೆಂಬಲಿಗರು ಮೇ 1ರಂದೇ ನಮ್ಮ ಮೇಲೆ ಒತ್ತಡ ಹೇರಿದ್ದರು' ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಈ 17 ಮುಸ್ಲಿಂ ಸಿಬ್ಬಂದಿ ಮೇಲೆ ಯಾವುದೇ ದೂರು ಇಲ್ಲ ಮತ್ತು ಅವರು ಏನೂ ತಪ್ಪು ಮಾಡಿಲ್ಲ. ವಿನಾಕಾರಣ ಅವರನ್ನು ಕೆಲಸದಿಂದ ತೆಗೆಯಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೆವು. ನಂತರ, ಕೆಳಹಂತದ ಅಧಿಕಾರಿಯೊಬ್ಬರ ಮೇಲೂ ಒತ್ತಡ ಹೇರಿದ್ದರು. ಅವರು ಈ ಕುರಿತು ಬರೆದ ಪತ್ರವನ್ನೂ ತಂದಿದ್ದರು. ಅದನ್ನೂ ನಾನು ತಿರಸ್ಕರಿಸಿದ್ದೆ' ಎಂದು ಅವರು ಹೇಳಿದರು.

'ಮುಸ್ಲಿಂ ನೌಕರರನ್ನು ವಜಾಗೊಳಿಸದಿದ್ದರೆ ನಿಮಗೇ ತೊಂದರೆಯಾಗುತ್ತದೆ ಎಂದು ಶಾಸಕ ಎಚ್ಚರಿಕೆ ನೀಡಿದ್ದರು. ಅದಕ್ಕೂ ನಾವು ಒಪ್ಪದಿದ್ದಾಗ ಮೇ 4ರಂದು ದಾಳಿ ಮಾಡಲಾಯಿತು' ಎಂದು ಅವರು ತಿಳಿಸಿದರು.

'ವಾರ್ ರೂಮ್‌ನಲ್ಲಿ ಶಾಸಕರು ತಮಗೆ ಬೇಕಾದ ವ್ಯಕ್ತಿಗಳನ್ನು ಬಿಟ್ಟಿದ್ದರು. ಹಾಸಿಗೆಗಳ ಹಂಚಿಕೆ ಸೇರಿದಂತೆ ಹಲವು ಕಾರ್ಯಗಳ ಮೇಲುಸ್ತುವಾರಿಯನ್ನು ಅವರೇ ನೋಡಿಕೊಳ್ಳುತ್ತಿದ್ದರು. ಅದೇ ರೀತಿ ದಕ್ಷಿಣ ವಲಯದ ವಾರ್ ರೂಮ್‌ನಲ್ಲಿ ಈ 17 ಜನರನ್ನು ತೆಗೆದು ಹಾಕಿ ತಮ್ಮವರನ್ನೇ ನಿಯೋಜಿಸುವ ಉದ್ದೇಶ ಶಾಸಕರದ್ದಾಗಿತ್ತು' ಎಂದೂ ಹೇಳಿದರು.

ಏ.20ರ ನಂತರ ನೇಮಕ: 'ದಕ್ಷಿಣ ವಲಯದ ವಾರ್ ರೂಮ್‌ನಲ್ಲಿ ಮೊದಲು 47 ಜನ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದರು. ಹೆಚ್ಚು ಸಿಬ್ಬಂದಿ ಅಗತ್ಯವಿದೆ. ಪೂರೈಸಿ ಎಂದು ಬಿಬಿಎಂಪಿ ಏ.15ರಂದು ಸೂಚಿಸಿತು. ಈ 17 ಮುಸ್ಲಿಮರು ಸೇರಿದಂತೆ 160 ಮಂದಿಯನ್ನು ಏ.20ರ ನಂತರ ನೇಮಿಸಲಾಯಿತು. ಈಗ 207 ಜನ ಅಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ' ಎಂದು ಈ ವಾರ್ ರೂಮ್‌ಗೆ ಸಿಬ್ಬಂದಿ ಪೂರೈಸಿದ ಹೊರಗುತ್ತಿಗೆ ಸಂಸ್ಥೆ ಕ್ರಿಸ್ಟಲ್ ಏಜೆನ್ಸಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಏ.20ರ ನಂತರ ಕೆಲವು ದಿನ ಈ ಸಿಬ್ಬಂದಿಗೆ ತರಬೇತಿ ನೀಡಿದ್ದೆವು. ನಂತರವೇ ಕೆಲಸ ಆರಂಭಿಸಿದ್ದರು. 17 ಸಿಬ್ಬಂದಿ ಬೆಡ್ ಬ್ಲಾಕಿಂಗ್ ಹಗರಣದಲ್ಲಿ ಭಾಗಿಯಾಗಿದ್ದರು ಎಂಬ ಆರೋಪ ಸುಳ್ಳು. ಹಾಸಿಗೆ ನಿಯೋಜಿಸುವ ಅಧಿಕಾರ ಹಿರಿಯ ಅಧಿಕಾರಿಗಳು ಮತ್ತು ವೈದ್ಯರಿಗೆ ಇರುತ್ತದೆ. ನಾವು ನಿಯೋಜಿಸಿರುವ ಸಿಬ್ಬಂದಿಗೆ ಅಂತಹ ಅಧಿಕಾರವೇ ಇಲ್ಲ' ಎಂದೂ ಅವರು ಹೇಳಿದರು.

ವಿಡಿಯೊ ವೈರಲ್

ಶಾಸಕ ಸತೀಶ್ ರೆಡ್ಡಿ ಅವರ ಬೆಂಬಲಿಗರು ಬೊಮ್ಮನಹಳ್ಳಿ ವಲಯದ ಕೋವಿಡ್ ವಾರ್ ರೂಮ್‌ಗೆ ಏ.30ರಂದು ತೆರಳಿ ಗಲಾಟೆ ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಐಎಎಸ್ ಪ್ರೊಬೇಷನರಿ ಅಧಿಕಾರಿ ವಿ. ಯಶವಂತ್ ಅವರನ್ನು ಬೆಂಬಲಿಗರು ಎಳೆದಾಡಿರುವುದು ವಿಡಿಯೊದಲ್ಲಿ ಸೆರೆಯಾಗಿದೆ. ಹಲ್ಲೆಗೂ ಯತ್ನಿಸಿದ್ದಾರೆ. ಸ್ಥಳದಲ್ಲಿದ್ದ ಇನ್‌ಸ್ಪೆಕ್ಟರ್ ಮುನಿ ರೆಡ್ಡಿ ಈ ವೇಳೆ, ಅಧಿಕಾರಿಯ ರಕ್ಷಣೆಗೆ ಧಾವಿಸಿದ್ದಾರೆ.

ಐಎಎಸ್ ಅಧಿಕಾರಿಗಳ ಸಂಘದ ಖಂಡನೆ

'ಏ. 30ರಂದು ಯಶವಂತ ಅವರ ಮೇಲೆ ನಡೆದ ಹಲ್ಲೆ ಯತ್ನ ಖಂಡನಾರ್ಹ' ಎಂದು ಭಾರತೀಯ ಆಡಳಿತ ಸೇವಾ ಅಧಿಕಾರಿಗಳ ಸಂಘದ ಕರ್ನಾಟಕ ಘಟಕ ಹೇಳಿದೆ.

'ಕೋವಿಡ್ ರೋಗಿಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ನಿಗದಿತ ಹಾಸಿಗೆಗಳನ್ನು ಮೀಸಲಿಡಲಾಗುತ್ತಿದೆಯೇ ಇಲ್ಲವೆ ಎಂಬುದನ್ನು ಪರಿಶೀಲಿಸಲು ರಚಿಸಲಾಗಿದ್ದ ಅಧಿಕಾರಿಗಳ ತಂಡದಲ್ಲಿ ಯಶವಂತ್ ಇದ್ದರು. ಸ್ಥಳೀಯ ಶಾಸಕರು ತಮಗೆ ಬೇಕಾದವರಿಗೆ ಹಾಸಿಗೆ ನೀಡುವಂತೆ ಹೇಳಿದಾಗ ಅದಕ್ಕೆ ಯಶವಂತ್ ಒಪ್ಪಿರಲಿಲ್ಲ. ಇದರ ಪರಿಣಾಮವಾಗಿಯೇ ಗಲಾಟೆ ನಡೆದಿದೆ' ಎಂದು ಸಂಘದ ಅಧ್ಯಕ್ಷೆ ವಂದಿತಾ ಶರ್ಮಾ ಹೇಳಿದ್ದಾರೆ.

ಬೊಮ್ಮನಹಳ್ಳಿ ವಲಯದ ಕೋವಿಡ್ ವಾರ್ ರೂಮ್ ಉಸ್ತುವಾರಿಯಾಗಿದ್ದ ಐಎಎಸ್ ಪ್ರೊಬೇಷನರಿ ಅಧಿಕಾರಿ ಯಶವಂತ್ ಅವರು ಘಟನೆ ನಡೆದ ಮರುದಿನವೇ ತರಬೇತಿಗಾಗಿ ಮಸ್ಸೂರಿಗೆ ತೆರಳಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಇನ್ನಷ್ಟು ಸುದ್ದಿಗಳು 3B, 4

ಖಾಸಗಿತನದ ನೀತಿ ಗಡುವು ಕೈಬಿಟ್ಟ ವಾಟ್ಸ್‌ಆ್ಯಪ್

ನವದೆಹಲಿ (ಪಿಟಿಐ): ಖಾಸಗಿತನ ಕುರಿತ ಪರಿಷ್ಕೃತ ನೀತಿಗೆ ಬಳಕೆದಾರರು ಸಮ್ಮತಿ ಸೂಚಿಸಲು ನಿಗದಿಪಡಿಸಿದ್ದ ಮೇ 15ರ ಗಡುವನ್ನು ವಾಟ್ಸ್‌ಆ್ಯಪ್ ಕೈಬಿಟ್ಟಿದೆ. ಸಮ್ಮತಿ ಸೂಚಿಸದಿದ್ದರೂ ಬಳಕೆದಾರರ ಖಾತೆ ರದ್ದು ಆಗುವುದಿಲ್ಲ ಎಂದು ತಿಳಿಸಿದೆ.

ಖಾಸಗಿತನ ಕುರಿತ ನೂತನ ನೀತಿಗೆ ಬಳಕೆದಾರರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ವಾಟ್ಸ್‌ಆ್ಯಪ್ ತನ್ನ ಮಾತೃ ಸಂಸ್ಥೆ ಫೇಸ್‌ಬುಕ್ ಜೊತೆಗೆ ಬಳಕೆದಾರರ ಮಾಹಿತಿಗಳನ್ನು ಹಂಚಿಕೆ ಮಾಡಿಕೊಳ್ಳಬಹುದು ಎಂಬ ಆತಂಕವು ವ್ಯಕ್ತವಾಗಿತ್ತು.

ಸುದ್ದಿಸಂಸ್ಥೆಯ ಜೊತೆಗೆ ಮಾತನಾಡಿದ ವಾಟ್ಸ್‌ಆ್ಯಪ್ ಜಾಲತಾಣದ ವಕ್ತಾರರು, 'ಪರಿಷ್ಕೃತ ನೀತಿಗೆ ಒಪ್ಪಿಗೆ ಸೂಚಿಸದೇ ಇದ್ದರೂ ಯಾವುದೇ ಬಳಕೆದಾರರ ಖಾತೆಯೂ ಮೇ 15ರಂದು ರದ್ದಾಗುವುದಿಲ್ಲ' ಎಂದಿದ್ದಾರೆ.

ತನಿಖೆಗೆ ಆಗ್ರಹ

ಬೆಂಗಳೂರು: 'ಕೋವಿಡ್ ರೋಗಿಗಳ ಅಗತ್ಯಗಳ ಕೃತಕ ಅಭಾವ ಸೃಷ್ಟಿಸಿ, ಹಲವರ ಸಾವಿಗೆ ಕಾರಣರಾದವರ ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಒತ್ತಾಯಿಸಿದೆ.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಪಿ. ನಂಜೇಗೌಡ

ಇವರು ದಿ ರಾಜಾಜಿನಗರ ಗೃಹ ನಿರ್ಮಾಣ ಸಹಕಾರ ಸಂಘದ 1,2ನೇ ಹಂತ (ಅನ್ನಪೂರ್ಣೇಶ್ವರಿನಗರ) ಹಾಗೂ 3ನೇ ಹಂತ (ಪಿಳ್ಳಹಳ್ಳಿ) ಬಡಾವಣೆ ಅಭಿವೃದ್ಧಿ ಕಾರ್ಯ ನಿರ್ವಹಿಸಿದ್ದರು. ಇವರು ದಿನಾಂಕ 06.05.2021 ರಂದು ವಿಧಿವಶವಾಗಿರುತ್ತಾರೆ ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಕುಟುಂಬದವರಿಗೆ ದು:ಖಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು
"ದಿ ರಾಜಾಜಿನಗರ ಹೌಸಿಂಗ್ ಕೋ-ಅಪರೇಟಿವ್ ಸೊಸೈಟಿ ಲಿ."

ಬಿಕ್ಕಟ್ಟಿನ ಸಮಯದಲ್ಲಿ ಮಾನವೀಯತೆ ಮೆರೆಯುತ್ತಿರುವ 'ಆಶಾಯೇ' ಬಳಗ

ಕೋವಿಡ್ ಪೀಡಿತರಿಗೆ ಮನೆ ಊಟ

• ಜಿ.ಶಿವಕುಮಾರ

ಬೆಂಗಳೂರು: 'ಆಶಾಯೇ'.. ಯುವಪಡೆಯೊಂದು ಕೇವಲ ಐದು ದಿನಗಳ ಹಿಂದೆ ಕಟ್ಟಿದ ಈ ಬಳಗ ಈಗ ನಿತ್ಯ ನೂರಾರು ಮಂದಿಯ ಹಸಿವು ನೀಗಿಸುತ್ತಿದೆ. ಕೋವಿಡ್ ಪೀಡಿತರಿಗೆ ಮನೆ ಅಡುಗೆಯ ಸವಿ ಉಣಬಡಿಸುವ ಮೂಲಕ ಮಾನವೀಯತೆ ಮೆರೆಯುತ್ತಿದೆ.

ಉಮಂಗ್, ಮೈತ್ರಿ, ಸಲೋನಿ, ಹಾರ್ದಿಕ್, ಮಾಲಾ ವೊರಾ, ಮನೀಷಾ ಮತ್ತು ಮೇಹಾ ಅವರು ಈ ಬಳಗದ ರೂವಾರಿಗಳು. ಮೂಲತಃ ಗುಜರಾತ್‌ನವರಾದ ಇವರು ಬೆಂಗಳೂರಿನ ಶೇಷಾದ್ರಿಪುರದಲ್ಲಿ ನೆಲೆಸಿದ್ದಾರೆ. ಈ ತಂಡ ರೋಗಿಗಳಿಗೆ ಪ್ರತಿನಿತ್ಯ 1,000 ಥೇತ್ಲ (ಮಸಾಲೆ ಪರೋಟ) ಒದಗಿಸುತ್ತಿದೆ.

'ಬಾಂದ್ರಾದಲ್ಲಿ ಆಹಾರವಿಲ್ಲದೇ ಮೂರು ದಿನದಲ್ಲಿ 20 ಮಂದಿ ಮೃತಪಟ್ಟಿರುವ ಸುದ್ದಿಯೊಂದನ್ನು ಕೆಲ ದಿನಗಳ ಹಿಂದೆ ಗೂಗಲ್‌ನಲ್ಲಿ ಓದಿದೆ. ಅದು ನನ್ನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ಆಗಲೇ ಕೋವಿಡ್ ಪೀಡಿತರಿಗೆ ಮನೆಯಲ್ಲಿ ತಯಾರಿಸಿದ ಆಹಾರವನ್ನು ಉಚಿತವಾಗಿ ನೀಡಬೇಕೆಂಬ ಆಲೋಚನೆ ಹೊಳೆದಿದ್ದು. ಇದನ್ನು ನನ್ನ ಸ್ನೇಹಿತರ ಜೊತೆ ಹಂಚಿಕೊಂಡೆ. ಅವರೂ ಕೈಜೋಡಿಸಿದರು. ಶುರುವಿನಲ್ಲಿ ನಾವೇ ಹಣ ಹಾಕಿ ರೋಗಿಗಳಿಗೆ 'ಥೇತ್ಲ' ಒದಗಿಸಿದೆವು. ನಮ್ಮ ಕೆಲಸ ನೋಡಿ ಇನ್ನೂ ಕೆಲವರು ಜೊತೆಯಾದರು. ನಮ್ಮ ತಂಡದಲ್ಲಿ ಈಗ ಒಟ್ಟು 102 ಮಹಿಳೆಯರಿದ್ದಾರೆ. ಇವರು ನಗರದ ವಿವಿಧ ಭಾಗಗಳಲ್ಲಿ ನೆಲೆಸಿದ್ದು ಮನೆಯಲ್ಲೇ 'ಥೇತ್ಲ' ತಯಾರಿಸಿ ನಮಗೆ ಕಳುಹಿಸುತ್ತಾರೆ' ಎಂದು ಉಮಂಗ್ ವೊರಾ 'ಪ್ರಜಾವಾಣಿ'ಗೆ ತಿಳಿಸಿದರು.

ಆಶಾಯೆ ತಂಡದ ಸದಸ್ಯರು

'ಬೆಂಗಳೂರು ರೈಡರ್ಸ್, ಮಿಷನ್ ಚಾಯ್, ಬೆಂಗಳೂರು ವಿಮೆನ್ ಸೇರಿದಂತೆ ಒಟ್ಟು ಎಂಟು ಸಂಘಟನೆಗಳಿಗೆ ನಾವು ಪ್ಯಾಕೆಟ್ ರೂಪದಲ್ಲಿ 'ಥೇತ್ಲ' ಒದಗಿಸುತ್ತೇವೆ. ಅವರು ಅದನ್ನು ರೋಗಿಗಳ ಮನೆ ಬಾಗಿಲಿಗೆ ತಲುಪಿಸುತ್ತಾರೆ. ಒಂದು ಪೊಟ್ಟಣದಲ್ಲಿ ಐದು 'ಥೇತ್ಲ' ಇರುತ್ತದೆ. ಇದನ್ನು ಮೊಸರು ಅಥವಾ ಉಪ್ಪಿನ ಕಾಯಿ ಜೊತೆ ಸೇವಿಸಬಹುದು. ಮೆಂತ್ಯ, ಬೇಳೆ, ಮೊಸರು, ಅರಿಶಿಣ ಹಾಗೂ ಇತರ ಪದಾರ್ಥಗಳನ್ನು ಹಾಕಿ ಇದನ್ನು ಸಿದ್ಧಪಡಿಸುತ್ತೇವೆ. ಇದು ಮೂರು ದಿನವಾದರೂ ಕೆಡುವುದಿಲ್ಲ. ಇದು ಪೌಷ್ಟಿಕಾಂಶಯುಕ್ತ ಆಹಾರ. ರೋಗಿಗಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ನೆರವಾಗುತ್ತದೆ. ಹೀಗಾಗಿ ಇದಕ್ಕೆ ಈಗ ಬೇಡಿಕೆ ಹೆಚ್ಚಾಗಿದೆ' ಎಂದರು.

ಪ್ರಜಾವಾಣಿ ವಿಶೇಷ

ಸಂಪರ್ಕಕ್ಕಾಗಿ: ಉಮಂಗ್- 9480674919, ಹಾರ್ದಿಕ್- 7411968363.

ಕನ್ನಡತಿಯರಿಗೆ 'ಥೇತ್ಲ' ತಯಾರಿಕೆಯ ತರಬೇತಿ

'ನಮ್ಮ ಬಳಗದಲ್ಲಿ ಕರ್ನಾಟಕದವರೂ ಇದ್ದಾರೆ. ಅವರಿಗೆ 'ಥೇತ್ಲ' ತಯಾರಿಸುವುದು ಗೊತ್ತಿಲ್ಲ. ಹೀಗಿದ್ದರೂ ನಮ್ಮ ಕೆಲಸಕ್ಕೆ ಕೈಜೋಡಿಸಲು ಮುಂದೆ ಬಂದಿದ್ದಾರೆ. ಹೀಗಾಗಿ ಒಂದಷ್ಟು ವಿಡಿಯೊಗಳನ್ನು ಕಳುಹಿಸಿದ್ದೆವು. ಅದನ್ನು ನೋಡಿ ನಿತ್ಯವೂ 'ಥೇತ್ಲ' ತಯಾರಿಸಿ ಕೊಡುತ್ತಿದ್ದಾರೆ. ಅವರ ಆಸಕ್ತಿ ನೋಡಿ ನಮ್ಮ ಉತ್ಸಾಹ ಇಮ್ಮಡಿಸಿದೆ' ಎಂದು ಉಮಂಗ್ ತಿಳಿಸಿದರು.

ಸುದ್ದಿ 2 ನಿಮಿಷ

ಚೆನ್ನೈ: ₹ 100 ಕೋಟಿ ಮೌಲ್ಯದ ಹೆರಾಯಿನ್ ವಶ, ಇಬ್ಬರ ಬಂಧನ

ಚೆನ್ನೈ (ಪಿಟಿಐ): ₹ 100 ಕೋಟಿ ಮೌಲ್ಯದ 15 ಕೆ.ಜಿ. ಯಷ್ಟು ಹೆರಾಯಿನ್‌ಅನ್ನು ಇಲ್ಲಿನ ವಿಮಾನನಿಲ್ದಾಣದಲ್ಲಿ ಶುಕ್ರವಾರ ಜಪ್ತಿ ಮಾಡಿರುವ ಕಸ್ಟಮ್ಸ್ ಅಧಿಕಾರಿಗಳು, ಪ್ರಕರಣಕ್ಕೆ ಸಂಬಂಧಿಸಿ ಮಹಿಳೆ ಸೇರಿ ಇಬ್ಬರು ತಾಂಜಾನಿಯಾ ಪ್ರಜೆಗಳನ್ನು ಬಂಧಿಸಿದ್ದಾರೆ.

ಬೆಂಗಳೂರಿನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯಲು ಬಂದಿರುವುದಾಗಿ ಬಂಧಿತರು ಹೇಳಿದ್ದಾರೆ. ಆಸ್ಪತ್ರೆ ನೀಡಿದ್ದ ದಾಖಲೆಗಳ ಆಧಾರದಲ್ಲಿ ಅವರಿಗೆ ವೀಸಾ ನೀಡಲಾಗಿತ್ತು. ಬೆಂಗಳೂರಿಗೆ ತಲುಪಲು ನೇರ ವಿಮಾನ ಸಿಗದ ಕಾರಣ ಅವರು ಚೆನ್ನೈಗೆ ಬಂದಿಳಿದಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

ಆಫ್ರಿಕಾದಿಂದ ಡ್ರಗ್ಸ್‌ನ ಕಳ್ಳ ಸಾಗಣೆ ಬಗ್ಗೆ ಮಾಹಿತಿ ಇದ್ದ ಹಿನ್ನೆಲೆಯಲ್ಲಿ ಈ ಇಬ್ಬರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದಾಗ ಹೆರಾಯಿನ್ ಸಾಗಿಸುತ್ತಿರುವುದು ಬೆಳಕಿಗೆ ಬಂತು ಎಂದು ಕಸ್ಟಮ್ಸ್ ಕಮಿಷನರ್ ರಾಜನ್ ಚೌಧರಿ ತಿಳಿಸಿದರು.

'ಮಾನವ ಹಕ್ಕುಗಳ ಆಯೋಗ ಮಧ್ಯಪ್ರವೇಶಿಸಲಿ'

ಬೆಂಗಳೂರು:'ರಾಜ್ಯದಲ್ಲಿ ಆರೋಗ್ಯ ಪರಿಸ್ಥಿತಿ ಕುಸಿದಿದೆ. ಮಾನವ ಹಕ್ಕುಗಳಿಗೆ ಧಕ್ಕೆ ಎದುರಾಗಿ ಮಾರಣಹೋಮ ನಡೆಯುತ್ತಿದೆ. ಈ ಸಂದರ್ಭದಲ್ಲಿ ಮಾನವ ಹಕ್ಕುಗಳ ಆಯೋಗ ಮಧ್ಯಪ್ರವೇಶಿಸಿ, ಪರಿಸ್ಥಿತಿ ನಿಯಂತ್ರಿಸಬೇಕು' ಎಂದು ಕರ್ನಾಟಕ ಬಲಿಜ ಜಾಗೃತಿ ವೇದಿಕೆಯ ಕಾರ್ಯದರ್ಶಿ ಜಿ.ಜ್ಞಾನೇಶ್ ಮನವಿ ಮಾಡಿದ್ದಾರೆ.

ಈ ಸಂಬಂಧ ಅವರು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಪತ್ರ ಬರೆದಿದ್ದಾರೆ. 'ಚಾಮರಾಜನಗರ ಜಿಲ್ಲೆಯಲ್ಲಿ ಆಮ್ಲಜನ ಸಿಗದೆ ರೋಗಿಗಳ ಮೃತಪಟ್ಟ ಘಟನೆ ದಾರುಣ. ಸರ್ಕಾರದ ನಿರ್ಲಕ್ಷ್ಯವೇ ಈ ದುರಂತಕ್ಕೆ ಕಾರಣ. ಕೋಲಾರದಲ್ಲೂ ಇದೇ ರೀತಿ ರೋಗಿಗಳು ಮೃತಪಟ್ಟಿದ್ದು, ಇದಕ್ಕೆ ಸರ್ಕಾರವನ್ನೇ ಹೊಣೆ ಮಾಡಿ ವರದಿ ಕೇಳಬೇಕು. ಇದಕ್ಕೆ ಕಾರಣಕರ್ತರಾದ ಸಚಿವರು ಹಾಗೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ವಿಚಾರಣೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

REQUIRED SHOWROOM SPACE

Independent Building 12000 to 15000 sq ft with Exclusive Car Park.

PREFERRED LOCATIONS

Marathahalli, J P Nagar, Mysore Road, Banashankari and Jakkur Main Road

CONTACT - 9845015083

ಹತ್ಯೆ: 14 ವರ್ಷದ ಮಗನೇ ಆರೋಪಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಖ್ಯಿಕ ಇಲಾಖೆಯ ಬೆಂಗಳೂರು ಜಿಲ್ಲಾ ಕಚೇರಿಯಲ್ಲಿ ನಡೆದಿದ್ದ ದಂಪತಿ ಹತ್ಯೆ ಪ್ರಕರಣ ಭೇದಿಸಿರುವ ಪೀಣ್ಯ ಠಾಣೆ ಪೊಲೀಸರು, ಅವರ ಮಗನೇ ಆರೋಪಿ ಎಂಬುದನ್ನು ಪತ್ತೆ ಮಾಡಿದ್ದಾರೆ.

'ಪೀಣ್ಯದ ಕರಿಹೋಬನಹಳ್ಳಿ ಸಮೀಪದ ಜಿಲ್ಲಾ ಸಾಂಖ್ಯಿಕ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಹನುಮಂತರಾಯ (41) ಹಾಗೂ ಅವರ ಪತ್ನಿ ಹೊನ್ನಮ್ಮ (34) ಅವರನ್ನು ಕೊಲೆ ಮಾಡಲಾಗಿತ್ತು. ಈ ಸಂಬಂಧ ಅವರ 14 ವರ್ಷದ ಹಿರಿಯ ಮಗನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಯಾದಗಿರಿಯ ಹನುಮಂತರಾಯ, ಜಿಲ್ಲಾ ಕಚೇರಿಯಲ್ಲಿ ಸೆಕ್ಯುರಿಟಿ ಸಿಬ್ಬಂದಿ ಆಗಿ ಕೆಲಸ ಮಾಡುತ್ತಿದ್ದರು. ಪತ್ನಿ ಹೊನ್ನಮ್ಮ ಸಹ ಅದೇ ಕಚೇರಿಯ ಸ್ವಚ್ಛತೆ ಸಿಬ್ಬಂದಿಯಾಗಿದ್ದರು. ದಂಪತಿ ತಮ್ಮಿಬ್ಬರ ಮಕ್ಕಳ ಜೊತೆ ಕಚೇರಿ ಬಳಿಯೇ ಶೆಡ್ ನಿರ್ಮಿಸಿಕೊಂಡು ವಾಸವಿದ್ದರು.'

'ದಂಪತಿಯ ಮೃತ ದೇಹಗಳು ಗುರುವಾರ ಕಚೇರಿಯ ಶೌಚಾಲಯದಲ್ಲಿ ಪತ್ತೆಯಾಗಿದ್ದವು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಮಕ್ಕಳಿಬ್ಬರನ್ನು ವಿಚಾರಣೆಗೆ ಒಳಪಡಿಸಲಾಯಿತು. ಹಿರಿಯ ಮಗ ತಪ್ಪೊಪ್ಪಿಕೊಂಡ' ಎಂದೂ ತಿಳಿಸಿದರು.

'ಕೆಲ ಸ್ಥಳೀಯ ಹುಡುಗರ ಜೊತೆ ಓಡಾಡುತ್ತಿದ್ದ ಹಿರಿಯ ಮಗ, ಅಡ್ಡದಾರಿ ಹಿಡಿದಿದ್ದ. ಅದನ್ನು ಕಂಡಿದ್ದ ತಂದೆ, 'ವಿದ್ಯೆ ಕಲಿ. ಉಡಾಳ ಕೆಲಸ ಮಾಡಬೇಡ' ಎಂದು ಬುದ್ಧಿ ಮಾತು ಹೇಳಿದ್ದರು. ಅದರಿಂದ ಸಿಟ್ಟಾಗಿದ್ದ ಮಗ, ತಂದೆ-ತಾಯಿಯನ್ನೇ ಕೊಂದಿದ್ದಾನೆ. ಈ ಬಗ್ಗೆ ಆತ ಹೇಳಿಕೆ ನೀಡಿದ್ದಾನೆ' ಎಂದೂ ಹೇಳಿದರು.

ಕಚೇರಿಯಲ್ಲಿ ಮಲಗಿದ್ದಾಗ ಕೃತ್ಯ: 'ತಂದೆಯನ್ನು ಕೊಲೆ ಮಾಡಲು ಮುಂದಾಗಿದ್ದ ಮಗ, ಕೆಲ ದಿನಗಳ ಹಿಂದೆಯೇ ದೊಡ್ಡ ಗಾತ್ರದ ಕಲ್ಲು ತಂದಿಟ್ಟುಕೊಂಡಿದ್ದ. ದಂಪತಿ ಬುಧವಾರ ರಾತ್ರಿ ಕಚೇರಿಯಲ್ಲಿ ಮಲಗಿದ್ದರು. ಹಿರಿಯ ಮಗನೂ ಅವರ ಹೊತೆ ಮಲಗಲು ಹೋಗಿದ್ದ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಗುರುವಾರ ನಸುಕಿನಲ್ಲಿ ಎಚ್ಚರಗೊಂಡಿದ್ದ ಹಿರಿಯ ಮಗ, ತಂದೆಯ ತಲೆ ಮೇಲೆ ಕಲ್ಲು ಎತ್ತಿಹಾಕಲು ಮುಂದಾಗಿದ್ದ. ಆದರೆ, ಕೈ ಜಾರಿ ತಾಯಿ ಮೇಲೆ ಕಲ್ಲು ಬಿದ್ದಿತ್ತು. ಅವರು ಪ್ರಜ್ಞೆ ತಪ್ಪಿದ್ದರು. ಅದೇ ಸಂದರ್ಭದಲ್ಲೇ ಎಚ್ಚರಗೊಂಡಿದ್ದ ತಂದೆಯನ್ನು ತಳ್ಳಿ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದಿದ್ದ.'

'ತಾಯಿ ಎಚ್ಚರವಾದರೆ ತನಗೆ ಹೊಡೆಯುತ್ತಾಳೆಂದು ತಿಳಿದು ಅವರ ತಲೆ ಮೇಲೆಯೂ ಕಲ್ಲು ಎತ್ತಿಹಾಕಿ ಕೊಂದಿದ್ದ. ಇಬ್ಬರ ಮೃತದೇಹಗಳನ್ನು ಶೌಚಾಲಯಕ್ಕೆ ಎಳೆದೊಯ್ದು ಬೀಗ ಹಾಕಿ ಶೆಡ್‌ಗೆ ಬಂದಿದ್ದ' ಎಂದೂ ಅಧಿಕಾರಿ ಹೇಳಿದರು.

ಪೊಲೀಸರು ಬಂದಾಗ ಸ್ಥಳದಲ್ಲೇ ಇದ್ದ !

'ತಂದೆ-ತಾಯಿ ಕಾಣುತ್ತಿಲ್ಲವೆಂದು ಹಿರಿಯ ಮಗನೇ ಹುಡುಕಾಟದ ನಾಟಕವಾಡಿದ್ದ. ಶೌಚಾಲಯದಲ್ಲಿ ಮೃತದೇಹ ಪತ್ತೆಯಾಗುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಆ ಸಂದರ್ಭದಲ್ಲೂ ಹಿರಿಯ ಮಗ ಸ್ಥಳದಲ್ಲಿದ್ದ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ಸಹ ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದರು. ಅವರ ಜೊತೆಗೆಯೂ ಹಿರಿಯ ಮಗ ಮಾತನಾಡಿದ್ದ. ತಂದೆ-ತಾಯಿ ಸಾವಿಗೆ ಕಾರಣವೇನು? ಕೊಂದವರು ಯಾರು? ಎಂಬುದು ಗೊತ್ತಿಲ್ಲವೆಂದೇ ಹೇಳಿದ್ದ. ಕೆಲ ಪುರಾವೆಗಳನ್ನು ಆಧರಿಸಿ ತನಿಖೆ ನಡೆಸಿದಾಗಲೇ ಹಿರಿಯ ಮಗ ಕೊಲೆ ರಹಸ್ಯ ಬಾಯ್ಬಿಟ್ಟ' ಎಂದೂ ಅಧಿಕಾರಿ ವಿವರಿಸಿದರು.

ಹಾಲು ಖರೀದಿಸಲು ಗ್ರಾಹಕರಿಗೆ ಅವಕಾಶ ನೀಡಲು ಮನವಿ

ಬೆಂಗಳೂರು: 'ಹಾಲು ಮಾರಾಟದ ಅವಧಿಯನ್ನು ಮಧ್ಯಾಹ್ನ 12 ಗಂಟೆಯ ವರೆಗೆ ಹಾಗೂ ಸಂಜೆ 4ರಿಂದ 6 ಗಂಟೆಯ ವರೆಗೆ ನಿಗದಿಪಡಿಸಬೇಕು. ಈ ವೇಳೆ ಗ್ರಾಹಕರಿಗೆ ಹಾಲು ಖರೀದಿಗೆ ಅನುಮತಿ ನೀಡಬೇಕು' ಎಂದು ಬೆಂಗಳೂರು ಡೈರಿ ಏಜೆಂಟರ ಸಂಘ ಮನವಿ ಮಾಡಿದೆ.

'ಬೆಂಗಳೂರಿನಾದ್ಯಂತ ಒಟ್ಟು 1,200 ಹಾಲಿನ ಏಜೆಂಟರು ಕೆಲಸ ಮಾಡುತ್ತಿದ್ದಾರೆ. ಹಾಲು ಹಾಗೂ ಇತರೆ ಉತ್ಪನ್ನಗಳ ಖರೀದಿಗೆ ಸರ್ಕಾರ ರಾತ್ರಿ 8 ಗಂಟೆಯವರೆಗೆ ಅವಕಾಶ ಕಲ್ಪಿಸಿದೆ. ಆದರೆ, ಖರೀದಿಸಲು ಬರುವ ಗ್ರಾಹಕರಿಗೆ ಅನುಮತಿ ಇಲ್ಲ. ಬೆಳಿಗ್ಗೆ 10 ಗಂಟೆಯ ನಂತರ ಗ್ರಾಹಕರಿಲ್ಲದೆ, ಎಲ್ಲ ಹಾಲಿನ ಮಳಿಗೆಗಳು ರಾತ್ರಿವರೆಗೂ ಖಾಲಿ ಹೊಡೆಯುತ್ತವೆ' ಎಂದು ಸಂಘದ ಅಧ್ಯಕ್ಷ ಎಚ್.ಎಸ್.ರಂಗಸ್ವಾಮಿ ತಿಳಿಸಿದರು.

'ಕೋವಿಡ್ ಅವಧಿಯಲ್ಲೂ ಅಗತ್ಯ ಸೇವೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಹಾಲು ಏಜೆಂಟರಿಗೆ ಸರ್ಕಾರ ಉಚಿತವಾಗಿ ಲಸಿಕೆ, ಔಷಧ ಹಾಗೂ ಚಿಕಿತ್ಸೆ ವ್ಯವಸ್ಥೆ ಕಲ್ಪಿಸಬೇಕು. ಅಗತ್ಯ ಮಾಸ್ಕ್ ಹಾಗೂ ಸ್ಯಾನಿಟೈಸರ್ ವಿತರಿಸಬೇಕು' ಎಂದು ಮನವಿ ಮಾಡಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ರಾಮನಗರ ಜಿಲ್ಲೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ರಾಮನಗರ-562159

ಇ-ಮೇಲ್ : dhoramanagaram@gmail.com, ದೂರವಾಣಿ : 080-27273094

ಸಂಖ್ಯೆ : ಎನ್.ಹೆಚ್.ಎಂ/ರಾನ/ಹೆಚ್.ಆರ್/02/2020-21 ದಿನಾಂಕ: 07.05.2021

ನೇಮಕಾತಿ ಪ್ರಕಟಣೆ (Rolling Advertisement)

ರಾಮನಗರ ಜಿಲ್ಲೆಯಲ್ಲಿ 2021-22ನೇ ಸಾಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ ಅಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ವಿವಿಧ ಕಾರ್ಯಕ್ರಮದಡಿಯಲ್ಲಿ ಕಾರ್ಯನಿರ್ವಹಿಸಲು ಈ ಕೆಳಕಂಡ ವಿವಿಧ ಹುದ್ದೆಗಳಿಗೆ ಎನ್.ಹೆಚ್.ಎಮ್ ಮಾರ್ಗಸೂಚಿಯನ್ವಯ ನಿಯಾಮಾನುಸಾರವಾಗಿ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ನೇರ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ ಹಾಗೂ ಸದರಿ ಪ್ರಕಟಣೆಯು Rolling Advertisement ಆಗಿರುವುದರಿಂದ ಇದರ ಕಾಲಾವಧಿಯು **31.03.2022 ವರೆಗೆ** ಇರುತ್ತದೆ. ಪ್ರತಿಯೊಂದು ಹುದ್ದೆಯ ಸಾಮಾನ್ಯ ಮಾಹಿತಿಯನ್ನು ಈ ಕೆಳಗೆ ವಿವರಿಸಲಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ಖಾಲಿ ಇರುವ ಹುದ್ದೆಗಳ ಸಂಖ್ಯೆ ಹಾಗೂ ವಿಭಾಗ	ಅರ್ಹತೆ ಮತ್ತು ಅನುಭವ	ಮಾಸಿಕ ವೇತನ	ವಯೋಮಿತಿ (ದಿನಾಂಕ 13.05.2021ರ ಅಂತ್ಯಕ್ಕೆ)
1	ಶುಶ್ರೂಷಕಿ	06 ಎಂ.ಹೆಚ್ 04 (ಎಸ್.ಎನ್.ಸಿ.ಯು ಮತ್ತು ಎನ್.ಆರ್.ಸಿ) 01 (ಅರ್.ಬಿ.ಎಸ್.ಕೆ)	ಎಸ್.ಎಸ್.ಎಲ್.ಸಿ ಜೊತೆಗೆ ಜಿ.ಎನ್.ಎಂ/ಡಿ.ಎನ್.ಎಂ ವ್ಯಾಸಂಗದೊಂದಿಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಕನಿಷ್ಠ ಎರಡು ವರ್ಷ ಅನುಭವ ಮತ್ತು ಕೆ.ಎನ್.ಸಿ ಯಲ್ಲಿ ನೋಂದಣಿ ಹೊಂದಿರಬೇಕು. ಜೊತೆಗೆ ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು.	ರೂ. 11,500/-	40 ವರ್ಷದವರೆಗೆ
2	ಮಕ್ಕಳ ತಜ್ಞರು	ಎಸ್.ಎನ್.ಸಿ.ಯು-01	ಎಂ.ಬಿ.ಬಿ.ಎಸ್ ಜೊತೆಗೆ ಡಿ.ಸಿ.ಹೆಚ್/ಎಂ.ಡಿ/ಡಿ.ಎನ್.ಬಿ ಇನ್ ಪಿಡಿಯಾಟ್ರಿಕ್ ವಿದ್ಯಾರ್ಹತೆ ಹೊಂದಿರಬೇಕು.	ರೂ. 1,10,000/-	70 ವರ್ಷದವರೆಗೆ
3	ವೈದ್ಯಾಧಿಕಾರಿಗಳು	ಎಂ.ಹೆಚ್ 01 ಎಸ್.ಎನ್.ಸಿ.ಯು 02	ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಎಂ.ಬಿ.ಬಿ.ಎಸ್ ಪದವಿ ಪಡೆದಿರಬೇಕು. (ಕಡ್ಡಾಯವಾಗಿ ಇಂಟರ್ನ್‌ಸಿಪ್ ಪೂರೈಸಿರಬೇಕು, ಕೆ.ಎಂ.ಸಿಯ ನೋಂದಣಿಯನ್ನು ಹೊಂದಿರತಕ್ಕದ್ದು.	ರೂ. 45,000/-	65 ವರ್ಷದವರೆಗೆ
4	ಆಡಿಯೋಮೆಟ್ರಿಕ್ ಅಸಿಸ್ಟಂಟ್	01	ಆರ್.ಸಿ.ಐ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷದ ಹಿಯರಿಂಗ್ ಲ್ಯಾಗ್ವೇಂಜ್ ಅಂಡ್ ಸ್ಪೀಚ್ (ಡಿ.ಹೆಚ್.ಎಲ್.ಎಸ್) ಡಿಪ್ಲೋಮ ಮಾಡಿರಬೇಕು	ರೂ. 15,000/-	45 ವರ್ಷದವರೆಗೆ
5	ಡಯಟ್ ಕೌನ್ಸಿಲರ್ (ಎನ್.ಆರ್.ಸಿ)	01	ನ್ಯೂಟ್ರಿಷನ್ ಅಥವಾ ಹೋಮ್ ಸೈನ್ಸ್‌ನಲ್ಲಿ ಬಿ.ಎಸ್ಸಿ/ಬಿಎ ಪದವಿ. ಸಂಬಂಧಿಸಿದ ಕ್ಷೇತ್ರದಲ್ಲಿ 2 ವರ್ಷಗಳ ಸೇವಾ ಅನುಭವ	ರೂ. 14,000/-	40 ವರ್ಷ
6	ಕಿ.ಮ.ಆ.ಸ	ಎಂ.ಹೆಚ್:03 ಎನ್.ಯು.ಹೆಚ್.ಎಂ:09	ಎಸ್.ಎಸ್.ಎಲ್.ಸಿ ಜೊತೆಗೆ ಎ.ಎನ್.ಎಂ ತರಬೇತಿ ಪ್ರಮಾಣ ಪತ್ರ, ಕೆ.ಎನ್.ಸಿ ಯಲ್ಲಿ ನೋಂದಣಿ ಹೊಂದಿರಬೇಕು.	ರೂ. 10,000/-	40 ವರ್ಷದವರೆಗೆ
7	ಹಿ.ಮ.ಆ.ಸ	ಯು.ಪಿ.ಎಸ್.ಸಿ:01	ಕಿ.ಮ.ಆ.ಸ ತರಬೇತಿ ಪ್ರಮಾಣ ಪತ್ರದೊಂದಿಗೆ ಎಲ್.ಹೆಚ್.ವಿ ತರಬೇತಿ ಪಡೆದು ಕನಿಷ್ಠ 5 ವರ್ಷಗಳ ಆರೋಗ್ಯ ಇಲಾಖೆಯಲ್ಲಿ ಅನುಭವ ಇರಬೇಕು.	ರೂ. 12,600/-	65 ವರ್ಷದವರೆಗೆ
8	District Epidemiologist	01	Medical Graduate with Post Graduate Degree /Diploma in Preventive and Social Medicine/Public Health or Epidemiology (Such as MD, MPH, DPH, MAE etc) OR Any Medical Graduate with 2 years experience in Public Health) OR M.Sc. in Life Sciences with 2 years experience in Public Health) OR M.Sc. (Epidemiology) with 2 years experience in Public Health)	ರೂ. 30,000/-	40 ವರ್ಷದವರೆಗೆ
9	ಎಸ್.ಟಿ.ಎಲ್.ಎಸ್	01	ಡಿಪ್ಲೋಮೋ ಇನ್ ಲ್ಯಾಬೋರೇಟರಿ ಟೆಕ್ನಾಲಾಜಿ, ದ್ವಿಚಕ್ರವಾಹನದ ಪರವಾನಿಗೆ ಹೊಂದಿರಬೇಕು. ಕಂಪ್ಯೂಟರ್‌ನ ಸಾಕ್ಷರತೆ ಹೊಂದಿರಬೇಕು, ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರ ಹೊಂದಿರಬೇಕು.	ರೂ. 21,000/-	40 ವರ್ಷದವರೆಗೆ
10	ತಜ್ಞ ವೈದ್ಯರು	ಅರೆವಳಿಕೆ ತಜ್ಞರು 01 ಫಿಜಿಷಿಯನ್ 02 ಶಸ್ತ್ರಚಿಕಿತ್ಸಕರು 01	ಎಂ.ಬಿ.ಬಿ.ಎಸ್, ಎಂ.ಡಿ/ಡಿ.ಎನ್.ಬಿ (ಕಡ್ಡಾಯವಾಗಿ ಇಂಟರ್ನ್‌ಸಿಪ್ ಪೂರೈಸಿರಬೇಕು, ಕೆ.ಎಂ.ಸಿಯ ನೋಂದಣಿಯನ್ನು ಹೊಂದಿರತಕ್ಕದ್ದು, ಸಂಬಂಧಪಟ್ಟ ವಿಶ್ವವಿದ್ಯಾನಿಲಯದಿಂದ ಕಾನ್ವೋಕೇಷನ್/ಡಿಗ್ರಿ ಸರ್ಟಿಫಿಕೇಟ್ ಅನ್ನು ಕಡ್ಡಾಯವಾಗಿ ಹೊಂದಿರಬೇಕು. ಸಂಬಂಧಪಟ್ಟ ಸ್ನಾತಕೋತ್ತರ ಪದವಿ ಪಡೆದಿರಬೇಕು.	ರೂ. 1,10,000/-	70 ವರ್ಷದವರೆಗೆ

ದಿನಾಂಕ: **13-05-2021** ರಂದು ಅರ್ಹ ಅಭ್ಯರ್ಥಿಗಳು ಜಾಹಿರಾತಿನಲ್ಲಿ ಸೂಚಿಸಿದ ದಾಖಲಾತಿಗಳ ಪರಿಶೀಲನೆಗಾಗಿ ಅವಶ್ಯಕ ಪೂರಕ ದಾಖಲಾತಿಗಳೊಂದಿಗೆ **ಬೆಳಗ್ಗೆ 10.00 ರಿಂದ 12.00 ಗಂಟೆಯೊಳಗೆ** ನಿಗಧಿತ ಅರ್ಜಿ ನಮೂನೆಯನ್ನು ಪಡೆದು ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ. ನೋಂದಣಿಯಾದ ಅಭ್ಯರ್ಥಿಗಳನ್ನು ಮಾತ್ರ ದಾಖಲಾತಿ ಪರಿಶೀಲನೆಗೆ ಪರಿಗಣಿಸಲಾಗುವುದು. ನೇರ ಸಂದರ್ಶನವನ್ನು ಈ ಮೇಲ್ಕಾಣಿಸಿದ ಕಛೇರಿಯಲ್ಲಿ ಸದರಿ ದಿನದಂದೇ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು, ಜಿ.ಆ.ಕು.ಕ.ಕಛೇರಿ, ರಾಮನಗರ (9449843120) ಇಲ್ಲಿ ಸಂಪರ್ಕಿಸಬಹುದು.

<u>ವಿಶೇಷ ಸೂಚನೆ:</u> (1) ಸದರಿ ಪ್ರಕಟಣೆಯು ರೋಲಿಂಗ್ ಅಡ್ವರ್ಟೈಸ್‌ಮೆಂಟ್ ಆಗಿರುವುದರಿಂದ ದಿನಾಂಕ: **13-05-2021** ರಂದು ಭರ್ತಿ ಆಗದೇ ಇರುವ ಖಾಲಿ ಹುದ್ದೆಗಳಿಗೆ ಆಸಕ್ತಿಯುಳ್ಳ ಅಭ್ಯರ್ಥಿಗಳು ನಂತರ ಅರ್ಜಿ ಸಲ್ಲಿಸಿ ಸಂದರ್ಶನ ಮೂಲಕ ಆಯ್ಕೆ ಮಾಡಬಹುದಾಗಿರುತ್ತದೆ. ಇದರ ಅವಧಿಯು ದಿನಾಂಕ: **31.03.2022 ರವರೆಗೆ** ಇರುತ್ತದೆ. (2) ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಯಾದರೂ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. (3) ಅಭ್ಯರ್ಥಿಗಳು ಕನ್ನಡ ಭಾಷಾ ಜ್ಞಾನಾ ಹೊಂದಿರತಕ್ಕದ್ದು ಹಾಗೂ ಸ್ಥಾನಿಕರಿಗೆ ಆದ್ಯತೆ ನೀಡಲಾಗುವುದು. (4) ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ನಿರಾಕ್ಷೇಪಣಾ ಪತ್ರವನ್ನು (ಎನ್.ಒ.ಸಿ) ತರತಕ್ಕದ್ದು. (5) ಈ ಮೇಲಿನ ಹುದ್ದೆಗಳಿಗೆ ನಿಯಾಮಾನುಸಾರ ಕಂಪ್ಯೂಟರ್‌ನ ಸಾಕ್ಷರತೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರ ಹೊಂದಿರಬೇಕು. (ತಜ್ಞವೈದ್ಯರು ಮತ್ತು ಗ್ರೂಪ್ ಡಿ ಹುದ್ದೆಗಳಿಗೆ ಅನ್ವಯಿಸುವುದಿಲ್ಲ.

ಸಹಿ/- ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಆರೋಗ್ಯ ಸಂಘ, ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು
ರಾಮನಗರ ಜಿಲ್ಲೆ, ರಾಮನಗರ

ಹಿಸನಿ/ವಾಸಸಂಇ/ರಾನ/54/2021-22

EXCLUSIVE 5 DAY HOME SHOPPING FESTIVAL

THE FURNITURE STORE

AFFORDABLE LUXURY FOR EVERYONE

EXCLUSIVE BRIDAL PACKAGE

RENOVATE & REDECORATE YOUR SPACE WHILE YOU STAY SAFE AT HOME

0% NO COST EMI

HDFC BANK We understand your world

BAJAJ FINSERV EMI FINANCE

LUXURY SOFA SET + COZY ITALIAN BEDROOM SET WITH 4 DOOR WARDROBE, 2 SIDE TABLE, 1 DRESSER + ITALIAN ROSE GOLD MARBLE DINING SET (6 SEATER) + VICTORIAN HIGH BACK CHAIRS + DESIGNER MIRROR WITH CONSOLE

ALL FOR ONLY ₹ 4,99,000 * SPECIAL PRICE *

Bridal Luxury Home Package

Bridal Cozy Home Package

PLUSH SOFA SET + ELEGANT BEDROOM SET WITH 2 DOOR WARDROBE + GRAND DINING SET + ACCENT CHAIRS

ALL FOR ONLY ₹ 1,09,000 * SPECIAL PRICE *

* PLACE YOUR ORDER VIA PHONE CALL / WHATSAPP

+91 8197031010 / 8197131010 / 9845015083 / 9958464110

OUR SHOWROOMS AT

KR PURAM | HBR LAYOUT | BANASWADI

FREE DELIVERY | lovefurniturestore.in | FREE INSTALLATION

ಮಕ್ಕಳ ಸಮಾಲೋಚನೆಗೆ ಸಹಾಯವಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿ ಇರುವುದರಿಂದ ಮಕ್ಕಳ ರಕ್ಷಣಾ ನಿರ್ದೇಶನಾಲಯವು ಅಗತ್ಯವಿರುವ ಮಕ್ಕಳಿಗೆ ಉಚಿತ ಆಪ್ತ ಸಮಾಲೋಚನೆ ನೀಡಲು '14499' ಸಂಖ್ಯೆಯ ಸಹಾಯವಾಣಿ ಆರಂಭಿಸಿದೆ.

'ರಾಜ್ಯದ ಎಲ್ಲ ಮಕ್ಕಳು ಹಾಗೂ ಪೋಷಕರು ಸಹಾಯವಾಣಿಗೆ ಕರೆ ಮಾಡುವ ಮೂಲಕ ಮಕ್ಕಳಿಗೆ ಉಚಿತವಾಗಿ ಆಪ್ತ ಸಮಾಲೋಚನೆ ಸೌಲಭ್ಯ ಪಡೆಯಬಹುದು'.

'ಸಂಕಷ್ಟದಲ್ಲಿ ಸಿಲುಕಿರುವ ಮಕ್ಕಳ ರಕ್ಷಣೆ ಮತ್ತು ಪೋಷಣೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತು ಸೇವೆ ಒದಗಿಸಲು ದೇಶದಾದ್ಯಂತ ಚಾಲ್ತಿಯಲ್ಲಿರುವ ಮಕ್ಕಳ ಸಹಾಯವಾಣಿ-1098ಕ್ಕೆ ಕರೆ ಮಾಡುವ ಮೂಲಕವೂ ನೆರವು ಪಡೆಯಬಹುದು' ಎಂದು ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋವಿಡ್ ಪರಿಹಾರಕ್ಕೆ ಟಿವಿಎಸ್‌ನಿಂದ ₹ 40 ಕೋಟಿ ನೆರವು

ಬೆಂಗಳೂರು: ಟಿವಿಎಸ್ ಮೋಟರ್ ಕಂಪನಿಯು ಸುಂದರಂ ಕ್ಲೇಟನ್ ಮತ್ತು ತನ್ನ ಸಮೂಹದ ಇತರ ಕಂಪನಿಗಳ ಜೊತೆಯಾಗಿ ಕೋವಿಡ್-19 ಪರಿಹಾರ ಕಾರ್ಯಗಳಿಗೆ ₹ 40 ಕೋಟಿ ವಿನಿಯೋಗಿಸಲಿದೆ.

ಆಮ್ಲಜನಕದ ಕಾನ್ಸನ್‌ಟ್ರೇಟರ್‌ಗಳು, ಪಿಪಿಇ ಕಿಟ್‌ಗಳು, ಔಷಧಗಳನ್ನು ನೀಡಲು ಈ ಹಣವನ್ನು ಬಳಸಿಕೊಳ್ಳಲಾಗುತ್ತದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ಕಂಪನಿಯು ಒಟ್ಟು ಎರಡು ಸಾವಿರ ಆಮ್ಲಜನಕದ ಕಾನ್ಸನ್‌ಟ್ರೇಟರ್‌ಗಳನ್ನು ಆಸ್ಪತ್ರೆಗಳಿಗೆ ನೀಡಲಿದೆ. ತಮಿಳುನಾಡು, ಕರ್ನಾಟಕ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಅಗತ್ಯ ಸೇವೆಗಳ ವಲಯಗಳಲ್ಲಿ ಕೆಲಸ ಮಾಡುವವರಿಗೆ ಪ್ರತಿದಿನ 20 ಸಾವಿರಕ್ಕೂ ಹೆಚ್ಚು ಆಹಾರದ ಪೊಟ್ಟಣ ವಿತರಿಸಲಿದೆ.

'ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಕೇಂದ್ರಗಳಿಗೆ ನೆರವು ನೀಡಲು ನಾವು ಸರ್ಕಾರದ ಜೊತೆ ಕೆಲಸ ಮಾಡುತ್ತಿದ್ದೇವೆ' ಎಂದು ಟಿವಿಎಸ್ ಮೋಟರ್ ಕಂಪನಿಯ ಅಧ್ಯಕ್ಷ ವೇಣು ಶ್ರೀನಿವಾಸನ್ ಅವರು ಹೇಳಿದ್ದಾರೆ.

ಕೋವಿಡ್: ಬೂತ್ ಮಟ್ಟದಲ್ಲಿ ಬಿಜೆಪಿ ನೆರವು

ಬೆಂಗಳೂರು: 'ನನ್ನ ಬೂತ್ ಕೊರೊನಾ ಮುಕ್ತ ಬೂತ್' ಅಭಿಯಾನ ಆರಂಭಿಸಲಾಗಿದ್ದು, ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಕಾಲ್ ಸೆಂಟರ್ ಮತ್ತು ಕೇರ್ ಸೆಂಟರ್ ತೆರೆಯಲಾಗಿದೆ' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ತಿಳಿಸಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಸೂಚನೆ ಮೇರೆಗೆ ಈ ಅಭಿಯಾನವನ್ನು ಈಗಾಗಲೇ ಆರಂಭಿಸಲಾಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಗುರುವಾರ ಹೇಳಿದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ 250 ಕೇಂದ್ರಗಳಲ್ಲಿ ಕೊರೊನಾ ಸಹಾಯ ಕೇಂದ್ರಗಳನ್ನು ತೆರೆಯಲಾಗಿದ್ದು ಒಟ್ಟು 13 ಸೇವಾ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂದರು.

ಸಹಾಯ ಕೇಂದ್ರಗಳಲ್ಲಿ ಆಸ್ಪತ್ರೆಗಳು, ವೆಂಟಿಲೇಟರ್‌ಗಳು, ಆಂಬುಲೆನ್ಸ್, ಲಸಿಕೆ ಬಗ್ಗೆ ಜಾಗೃತಿ, ಮಾಸ್ಕ್‌ಗಳ ವಿತರಣೆ, ಕೋವಿಡ್ ಪೀಡಿತರ ಮನೆಗಳಿಗೆ ಆಹಾರ ಪೊಟ್ಟಣ ವಿತರಣೆ, ಆಕ್ಸಿಜನ್, ರೆಮ್‌ಡಿಸಿವಿರ್ ಅಗತ್ಯ ಇದ್ದವರಿಗೆ ನೆರವು, ಶವಸಂಸ್ಕಾರ, ವಯಸ್ಸಾದ ಕೊರೊನಾ ಪೀಡಿತರ ಸೇವೆ, ಐಸೊಲೇಷನ್ (ಆರೈಕೆ) ಕೇಂದ್ರಗಳ ಮೂಲಕ ನೆರವು ನೀಡಲಾಗುತ್ತಿದೆ ಎಂದರು.

ಕೊರೊನಾ: ರದ್ದಾದ ಮಾವು ಮೇಳಗಳು • ಮಾರುಕಟ್ಟೆ ವ್ಯವಸ್ಥೆಯಿಲ್ಲದೆ ಬೆಳೆಗಾರರಲ್ಲಿ ಆತಂಕ

ಕಂಗಾಲಾದ ಮಾವು ಬೆಳೆಗಾರ

• ಮನೋಹರ್ ಎಂ.

ಮಾರುಕಟ್ಟೆಗೆ ಬಂದಿರುವ ವಿವಿಧ ತಳಿಯ ಮಾವು

ಪ್ರಜಾವಾಣಿ ವಿಶೇಷ

ಬೆಂಗಳೂರು: ಮಾವು ಬೆಳೆಗಾರರಿಗೆ ನೆರವಾಗುತ್ತಿದ್ದ ಮಾವು ಮೇಳಗಳು ಕೊರೊನಾ ಕಾರಣದಿಂದ ರದ್ದಾಗಿವೆ. 'ಕೊಯ್ಲು ಕೈಗೆ ಬರುತ್ತಿದೆ, ಮಾರುಕಟ್ಟೆ ಸಿಗದಿದ್ದರೆ ಮುಂದೇನು ಗತಿ?' ಎನ್ನುವ ಭೀತಿ ಮಾವು ಬೆಳೆಗಾರರನ್ನು ಆವರಿಸಿದೆ.

ಮೇಳ ರದ್ದಾದರೂ ಮಳಿಗೆಗಳಲ್ಲಿ ಮಾರುಕಟ್ಟೆ ವ್ಯವಸ್ಥೆ ಮಾಡುವುದಾಗಿ ಹಾಪ್‌ಕಾಮ್ಸ್ ಈಗಾಗಲೇ ಭರವಸೆ ನೀಡಿದೆ. ಮಾವು ಅಭಿವೃದ್ಧಿ ನಿಗಮವೂ ಅಂಚೆ ಇಲಾಖೆ ಸಹಯೋಗದಲ್ಲಿ ಮನೆ ಬಾಗಿಲಿಗೆ ಮಾವು ತಲುಪಿಸುವ ಆನ್‌ಲೈನ್ ಪೋರ್ಟಲ್ ಸೇವೆ ನೀಡುತ್ತಿದೆ. ಈವರೆಗೆ 4.5 ಟನ್ ಮಾವು ಅಂಚೆ ಮೂಲಕ ಮಾರಾಟ ಮಾಡಿದೆ.

ಆದರೆ, ಟನ್‌ಗಟ್ಟಲೆ ಬೆಳೆದ ಮಾವು ಮಾರಾಟವಾಗಲು ಹಾಪ್‌ಕಾಮ್ಸ್ ಹಾಗೂ ಮಾವು ಅಭಿವೃದ್ಧಿ ನಿಗಮಗಳ ಈ ಸೇವೆಗಳಿಂದ ಸಾಧ್ಯವಾಗದು. ಮಾವು ವ್ಯಾಪಾರಕ್ಕೆ ವಿಶೇಷ ವ್ಯವಸ್ಥೆಗಳನ್ನು ಕಲ್ಪಿಸಬೇಕು ಎಂದು ಮಾವು ಬೆಳೆಗಾರರು ಮನವಿ ಮಾಡುತ್ತಿದ್ದಾರೆ.

'ಎಕರೆಗಟ್ಟಲೆ ಮಾವಿನ ತೋಟವಿದೆ. ಇತ್ತೀಚೆಗೆ ಸುರಿದ ಅಕಾಲಿಕ ಮಳೆಯಿಂದಾಗಿ ಬೆಳೆಗೆ ಸ್ವಲ್ಪ ಹಾನಿಯಾದರೂ ಇಳುವರಿ ಉತ್ತಮವಾಗಿದೆ. ಮುಂದಿನ ವಾರದ ವೇಳೆಗೆ ಮಾವು ಮಾಗುವ ಹಂತಕ್ಕೆ ಬರಲಿದೆ. ಆದರೆ, ಕೊರೊನಾ ಇರುವುದರಿಂದ ಟನ್‌ಗಟ್ಟಲೆ ಮಾವನ್ನು ಹೇಗೆ ಮತ್ತು ಎಲ್ಲಿ ಮಾರಾಟ ಮಾಡುವುದು ಎನ್ನುವುದೇ ತಿಳಿಯುತ್ತಿಲ್ಲ' ಎಂದು ಕೋಲಾರ ಜಿಲ್ಲೆಯ ಮಾವು ಬೆಳೆಗಾರ ಹನುಮಂತ ರೆಡ್ಡಿ ಅಳಲು ತೋಡಿಕೊಂಡರು.

'ಬೆಂಗಳೂರು ಹಾಗೂ ಹಲವೆಡೆ ನಡೆಯುತ್ತಿದ್ದ ಮಾವು ಮೇಳಗಳಲ್ಲಿ ಮಾರುಕಟ್ಟೆ ವ್ಯವಸ್ಥೆ ಸಿಗುತ್ತಿತ್ತು. ಉಳಿದ ಮಾವನ್ನು ಮಾರುಕಟ್ಟೆಗಳಿಗೆ ಸಾಗಿಸುತ್ತಿದ್ದೆವು. ಹೆಚ್ಚು ಲಾಭ ಪಡೆಯದಿದ್ದರೂ ನಷ್ಟಕ್ಕೆ ಸಿಲುಕುತ್ತಿರಲಿಲ್ಲ. ಈಗ ಕೊರೊನಾದಿಂದ ಮುಕ್ತ ಮಾರುಕಟ್ಟೆಗಳಿಗೆ ನಿರ್ಬಂಧವಿದೆ. ಗ್ರಾಹಕರೂ ಮಾವು ಖರೀದಿಸುವ ಸ್ಥಿತಿಯಲ್ಲಿಲ್ಲ. ಸರ್ಕಾರವೇ ಮಾವು ಬೆಳೆಗಾರರಿಗೆ ಪರ್ಯಾಯ ವ್ಯವಸ್ಥೆಗಳನ್ನು ಕಲ್ಪಿಸಬೇಕು' ಎಂದು ಮನವಿ ಮಾಡಿದರು.

'ಈ ಬಾರಿ ಹಲವು ಭಾಗಗಳಲ್ಲಿ ಮಾವು ಮೇಳ ಆಯೋಜಿಸುವ ಚಿಂತನೆ ಇತ್ತು. ಆದರೆ, ಕೊರೊನಾದಿಂದ ಅದು ಸಾಧ್ಯವಾಗುತ್ತಿಲ್ಲ. ಬೆಳೆಗಾರರಿಗೆ ಯಾವ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂಬುದರ ಕುರಿತು ಚರ್ಚಿಸಲಾಗುತ್ತಿದೆ' ಎಂದು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

5 ಸಾವಿರ ಟನ್ ಮಾವು ಆವಕ

'ಎಲೆಕ್ಟ್ರಾನಿಕ್ ಸಿಟಿ ಸಮೀಪದ ಸಿಂಗೇನ ಅಗ್ರಹಾರದಲ್ಲಿರುವ ಹಣ್ಣಿನ ಮಾರುಕಟ್ಟೆಗೆ ಪ್ರತಿದಿನ ಐದು ಸಾವಿರ ಟನ್ ಮಾವು ಆವಕವಾಗುತ್ತಿದೆ. ಕನಿಷ್ಠ 150 ವಾಹನಗಳಲ್ಲಿ ಮಾವು ಬರುತ್ತಿದೆ. ಆವಕ ಪ್ರಮಾಣ ಕಳೆದ ವರ್ಷಕ್ಕಿಂತ ಹೆಚ್ಚೇ ಇದೆ. ಆದರೆ, ಬೇಡಿಕೆ ಕುಸಿದಿದೆ' ಎಂದು ರಾಜ್ಯ ಸಗಟು ಹಣ್ಣು ಮಾರಾಟಗಾರರ ಅಭಿವೃದ್ಧಿ ಸಂಘದ ಉಸ್ತುವಾರಿ ಸೈಯದ್ ಮೆಹಬೂಬ್ ತಿಳಿಸಿದರು.

'ಈ ತಿಂಗಳಾಂತ್ಯದ ವೇಳೆಗೆ ಎಲ್ಲ ತಳಿಯ ಮಾವು ಮಾರುಕಟ್ಟೆ ಪ್ರವೇಶಿಸುತ್ತದೆ. ಸದ್ಯ ಚನ್ನಪಟ್ಟಣ, ತುಮಕೂರು, ರಾಮನಗರ, ಆಂಧ್ರಪ್ರದೇಶ ಹಾಗೂ ತಮಿಳುನಾಡಿನಿಂದ ಮಾವು ಬರುತ್ತಿದೆ. ಸೌದಿ, ಅಮೆರಿಕ, ಇಂಗ್ಲೆಂಡ್, ಇರಾನ್ ಸೇರಿದಂತೆ ಹಲವು ರಾಷ್ಟ್ರಗಳಿಗೆ ಮಾವು ರಫ್ತಾಗುತ್ತಿತ್ತು. ಆದರೆ, ಕೊರೊನಾದಿಂದ ರಫ್ತಿಗೂ ನಿರ್ಬಂಧ ಇದೆ. ಮಾವಿನ ಉತ್ಪನ್ನಗಳ ತಯಾರಿಕೆಗೆ ಮಾತ್ರ ಬೇಡಿಕೆ ಇದೆ' ಎಂದು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಪೊಲೀಸರಲ್ಲಿ ಹೆಚ್ಚುತ್ತಿದೆ ಸೋಂಕು: 1,043 ಮಂದಿಗೆ ಕೋವಿಡ್

ಬೆಂಗಳೂರು: ಪೊಲೀಸರಲ್ಲಿ ಕೊರೊನಾ ಸೋಂಕಿತರ ಪ್ರಮಾಣ ಹೆಚ್ಚುತ್ತಿದ್ದು, ಮೇ 7ರವರೆಗೆ ನಗರದ 1,043 ಪೊಲೀಸರಿಗೆ ಸೋಂಕು ತಗುಲಿದೆ.

'ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ 1,043 ಪೊಲೀಸರಿಗೆ ಸೋಂಕು ತಗುಲಿದ್ದು, ಅವರಲ್ಲಿ 11 ಮಂದಿ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'232 ಮಂದಿ ಚಿಕಿತ್ಸೆ ಪಡೆದು ಮನೆಗೆ ಬಂದಿದ್ದಾರೆ. 800 ಸೋಂಕಿತರು ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾರೆ. ಆ ಪೈಕಿ ಒಬ್ಬರು ಐಸಿಯು ವಾರ್ಡ್‌ನಲ್ಲಿದ್ದಾರೆ. 34 ಮಂದಿ ಸಾಮಾನ್ಯ ವಾರ್ಡ್‌ಗಳಲ್ಲಿದ್ದು, 764 ಮಂದಿ ಮನೆಯ ಆರೈಕೆಯಲ್ಲಿದ್ದಾರೆ' ಎಂದೂ ತಿಳಿಸಿದರು.

'ಸೋಂಕಿತರ ಪೈಕಿ 447 ಮಂದಿ ಲಸಿಕೆ ಪಡೆದವರಿದ್ದು, 151 ಮಂದಿ ಲಸಿಕೆ ಪಡೆದಿಲ್ಲ' ಎಂದೂ ಅಧಿಕಾರಿ ಹೇಳಿದರು.

ಸೋಂಕಿತರ ಕುಟುಂಬಗಳಿಗೆ ಪಡಿತರ ಕಿಟ್ ವಿತರಣೆ

ಬೆಂಗಳೂರು: ಯಶವಂತಪುರ ವ್ಯಾಪ್ತಿಯಲ್ಲಿ ಹೋಂ ಐಸೊಲೇಷನ್‌ನಲ್ಲಿರುವ ಕೋವಿಡ್ ರೋಗಿಗಳ ಕುಟುಂಬಗಳಿಗೆ ಪಡಿತರ ಕಿಟ್ ಹಾಗೂ ಔಷಧಗಳನ್ನು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಶುಕ್ರವಾರ ವಿತರಿಸಿದರು.

'ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವವರ ಪರಿಸ್ಥಿತಿ ಕಷ್ಟದಲ್ಲಿರುತ್ತದೆ. ಅವರೊಂದಿಗೆ ಮನೆಯಲ್ಲಿರುವ ಸದಸ್ಯರೂ ಹೊರಗೆ ಬರಲು ಸಾಧ್ಯವಾಗುವುದಿಲ್ಲ. ಇಂತಹ ಐದು ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಉಚಿತವಾಗಿ ಪಡಿತರ ಕಿಟ್ ಹಾಗೂ ಔಷಧ ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದರು.

'ಸೋಂಕಿನ ಬಗ್ಗೆ ಭಯ ಬೇಡ. ಸೂಕ್ತ ಚಿಕಿತ್ಸೆ ಪಡೆದುಕೊಂಡರೆ, ಈ ಸೋಂಕು ಗುಣವಾಗಲಿದೆ. ಯಾರೂ ಆತಂಕಗೊಳ್ಳುವುದು ಬೇಡ' ಎಂದರು.

ನೋಡಲ್ ಅಧಿಕಾರಿ ನಾಪತ್ತೆ ಶಾಸಕ ರಿಜ್ವಾನ್ ದೂರು

ಬೆಂಗಳೂರು: 'ರೆಮ್‌ಡಿಸಿವಿರ್ ಚುಚ್ಚುಮದ್ದು ಕಾಳಸಂತೆಯಲ್ಲಿ ಮಾರಾಟ ಸೇರಿದಂತೆ ಹಲವು ಅಕ್ರಮಗಳು ನಡೆಯುತ್ತಿದ್ದು, ಅದನ್ನು ತಡೆಯಬೇಕಾದ ನೋಡಲ್ ಅಧಿಕಾರಿ ನಾಪತ್ತೆಯಾಗಿದ್ದಾರೆ' ಎಂದು ಆರೋಪಿಸಿ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ್ದಾರೆ.

ಪೊಲೀಸರು, 'ಠಾಣೆಗೆ ಬಂದು ಶಾಸಕ ದೂರು ನೀಡಿದ್ದಾರೆ. ಪರಿಶೀಲನೆ ನಡೆಸಲಾಗುತ್ತಿದೆ' ಎಂದರು.

'ಕೊರೊನಾ ಸೋಂಕಿತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇಂಥ ಸಂದರ್ಭದಲ್ಲಿ ಅಕ್ರಮಗಳೂ ನಡೆಯುತ್ತಿವೆ. ಇದನ್ನು ತಡೆದು ಆಸ್ಪತ್ರೆಗಳ ಜೊತೆ ಸಮನ್ವಯ ಸಾಧಿಸಲು ರಾಜ್ಯ ಸರ್ಕಾರವು ಕೆಂಪಯ್ಯ ಸುರೇಶ್ ಎಂಬುವರನ್ನು ನೋಡಲ್ ಅಧಿಕಾರಿ ಆಗಿ ನೇಮಿಸಿದೆ. ಶಾಸಕನಾದ ನನ್ನ ಕೈಗೂ ಅವರು ಸಿಗುತ್ತಿಲ್ಲ. ಅವರನ್ನು ಹುಡುಕಿಕೊಡಿ' ಎಂದು ದೂರಿನಲ್ಲಿ ರಿಜ್ವಾನ್ ಹೇಳಿದ್ದಾರೆ.

ರೆಮ್‌ಡಿಸಿವಿರ್ ಅಕ್ರಮ ಮಾರಾಟ: ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಹರಿನಾಥ್ ಹಾಗೂ ನಾರಾಯಣಸ್ವಾಮಿ

ಬೆಂಗಳೂರು: ಕೊರೊನಾ ಸೋಂಕಿತರ ಚಿಕಿತ್ಸೆಗೆ ಬಳಸುವ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಸಿಸಿಬಿ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

'ಹರಿನಾಥ್ ಹಾಗೂ ನಾರಾಯಣಸ್ವಾಮಿ ಬಂಧಿತರು. ಅವರಿಂದ 6 ಚುಚ್ಚುಮದ್ದುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಗರದ ಕೆಲವರು ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಇಂಥವರ ಬಗ್ಗೆ ಮಾಹಿತಿ ಕಲೆಹಾಕಿ ಬಂಧಿಸಲಾಗುತ್ತಿದೆ' ಎಂದೂ ತಿಳಿಸಿದರು.

'ಇದೀಗ ಬಂಧಿಸಲಾಗಿರುವ ಹರಿನಾಥ್ ಹಾಗೂ ನಾರಾಯಣಸ್ವಾಮಿ, ಸರ್ಕಾರ ನಿಗದಿಪಡಿಸಿದ ದರಕ್ಕಿಂತಲೂ ದುಬಾರಿ ದರಕ್ಕೆ ಚುಚ್ಚುಮದ್ದು ಮಾರುತ್ತಿದ್ದರು' ಎಂದೂ ಹೇಳಿದರು.

ಇಬ್ಬರು ವಶಕ್ಕೆ

ಬೆಂಗಳೂರು: ರೆಮ್‌ಡಿಸಿವಿರ್ ಚುಚ್ಚುಮದ್ದು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಕೇಂದ್ರ ವಿಭಾಗದ ಪೊಲೀಸರು, ಯಶವಂತಪುರ ಬಳಿ ಶುಕ್ರವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.

'ಎಸ್.ಜೆ. ಪಾರ್ಕ್ ಠಾಣೆ ವ್ಯಾಪ್ತಿಯಲ್ಲಿ ರೆಮ್‌ಡಿಸಿವಿರ್ ಮಾರಾಟ ಮಾಡಲಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ವಿಶೇಷ ತಂಡದ ಪೊಲೀಸರು, ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Sites

Banashankari

BDA-SITES WANTED @ Anjanapura Banashankari 6th Stage, Sir.M Vishweshwraiah Layout 20x30, 30x40, 40x60 Immediate Settlement Call:9741072999

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

RENTAL PROPERTIES

Accommodation Available

Godown

6000 Sqft @Magadiroad Industrial Shed 4 km from City Phone : 9845221555/ 9845015030

DH ಪ್ರಜಾವಾಣಿ
BOOK YOUR REMEMBRANCE & OBITUARIES ADVERTISEMENTS IN DECCAN HERALD & PRAJAVANI
Please contact us at :
Santhosh Kumar : 9880856233
Jerry : 9731810277
Ravichandra : 9901641752
Vishal : 9845114560
Tanveer : 9886213331
E-mail: dhclassifieds@deccanherald.co.in

REAL ESTATE SELLING

Agricultural Land Converted

Kanakapura Road

KANAKAPURA TOWN, Near Bus-stand 1.25Acres Farm Land +30 Guntas Karab & 36,000Sft Conversion Land with Water & Electricity. Contact: 99459-28994

Flat

J P Nagar

"SALE FLATS 2/3 BHK, 36 to 65 Lakhs, J.P.Nagar 1st Phase, 9686688808/ 6361344708"

Uttarahalli

3-BHK/ 2-BHK- Flat For Lease/ Sale. Uttarahalli Busstand. Well-developed nearby Hospitals & Schools.Contact Owner:- 9449599961.

Sites

Vishweshwariah Layout

WANTED/ AVAILABLE BDA Sites Vishweshwaraiah Layout, Kempegowda Layout 20x30, 30x40, 40x60, 50x80.Contact Genuine Buyers/Sellers: 8892901567/ 9341733480

JOB OPPORTUNITIES

Part-Time Jobs

PANDEMIC SITUATION lost job. Max financial Co., will provide work from home earn Rs.35-40k Call: 9886641282/ 7019215243

PROPERTY CORNER

RERA Registered Project: PRM/KA/RERA/1251/309/PR/191025/002967
POSSESSION BY JUNE 2021
SAI SHAKTHI shreya blessed life
BBMP APPROVED
off MAGADI ROAD, Behind Andhra Bank, Andrahalli Main Road, that's reachable to everything...
2/3 BHK Apartments Starting 42 Lacs* Onwards

ಸಾಯಿ ಶಕ್ತಿ ಡೆವಲಪರ್ಸ್
SAI SHAKTHI Developers
Simple . Honest . Different
Approved by leading Financial Institutions
SBI Canara Bank HDFC
*T&C apply
Classy homes at Herohalli, Andrahalli Main Road, Magadi Road, Behind Peenya 2nd Stage, Bengaluru.
Dr. V. Subba Reddy/Kokila www.saishakthidevelopers.com 99455 39673

BUSINESS

Business Offers

Finance

NRI'S INVESTMENT And Finance Available On LowInterestAgainst Properties,Land & Buildings,Sites,Flats Converted&Agricultural Lands Call:7411265189

General

GET 30-LAKHS Assured return from India's No.1 Company TATA. Just 5000/- PM. 7829975577/ 9986375577

EDUCATIONAL

Admission

DIRECT FINAL B.Tech/ M.Tech/Diploma/MBA/MCA/ M.Sc/BBA/BCA/B.Sc/B.Com/ B.Ed.Recog by UGC/Govt. Asha Institute. Bangalore-560085. 9448460103/ 7093438248.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

I, K.L. ILINA W/o. Late. Solomon Patrick R/a#92, Beerappa Garden, 1st cross, chamundinagar, R.T.Nagar post, Bangalore North-560032 declare that in my marriage certificate issued by Infant Jesus Church vide Ref. #08/2006, Dated: 26.09.2020 requires the following corrections as: My Name mentioned ANTHONIAMMA ILINA instead K.L. ILINA. My Father's name mentioned SOUNDER RAJAN instead K. KRISHNA KUMAR, My Mother's name mentioned LOURDU MARIE instead LURDA MERRY vide affidavit dated: 06.05.2021 before notary S.I.Balaguru, Bangalore.

I,KUMAREN RAMAN, changed-my name-to KUMARAN RAMAN Dated: 03-05-2021. Sworn before Notary H.S.Sakalesh Aradhya, Bengaluru.

SOCIAL SERVICES

Old Age Home

SUKHSHANTHI LUXURY Retirement Home. Furnished Accommodation with 3 meals, 24x7 Nurse, Ambulance, Library. Rent Rs. 18,890/- pm. Near Sarjapur, Bangalore. Call: 88847-10009/ 080 26629422

'ವೈದ್ಯಕೀಯ ಸಂಪನ್ಮೂಲ ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಕಾಯಿಲೆಯನ್ನು ಸಮರ್ಥವಾಗಿ ಎದುರಿಸಲು ವೈದ್ಯಕೀಯ ಮತ್ತು ನರ್ಸಿಂಗ್ ವಿದ್ಯಾರ್ಥಿಗಳನ್ನು ಪರೀಕ್ಷೆ ಸೇರಿದಂತೆ ವಿವಿಧ ಕಾರ್ಯಕ್ಕೆ ಬಳಸಿಕೊಳ್ಳಬೇಕು. ಆಗ ವೈದ್ಯಕೀಯ ಕ್ಷೇತ್ರವನ್ನು ಬಲಗೊಳಿಸಲು ಸಾಧ್ಯ' ಎಂದು ಬ್ರೈನ್ಸ್ ಆಸ್ಪತ್ರೆಯ ಸಂಸ್ಥಾಪನಾ ಅಧ್ಯಕ್ಷ ಡಾ.ಎನ್.ಕೆ. ವೆಂಕಟರಮಣ ಸಲಹೆ ನೀಡಿದ್ದಾರೆ.

'ಆಸ್ಪತ್ರೆಗಳಿಗೆ ಪ್ರಮುಖವಾಗಿ ವೈದ್ಯಕೀಯ ಉಪಕರಣಗಳು ಹಾಗೂ ಮಾನವ ಸಂಪನ್ಮೂಲಗಳು ಅಗತ್ಯವಿರುತ್ತವೆ. ವೈದ್ಯರ ಕೊರತೆಯನ್ನು ನೀಗಿಸಲು ವಿದ್ಯಾರ್ಥಿಗಳನ್ನು ವಿವಿಧ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕಿದೆ. ಹಲವು ವರ್ಷಗಳಿಂದ ಈ ಬಗ್ಗೆ ಪ್ರಸ್ತಾಪವಿದ್ದರೂ ಸಾಕರವಾಗಿರಲಿಲ್ಲ. ಈಗಲಾದರೂ ಆ ನಿಟ್ಟಿನಲ್ಲಿ ಗಂಭೀರ ಚರ್ಚೆಗಳನ್ನು ನಡೆಸಿ, ವಿದ್ಯಾರ್ಥಿಗಳ ಸೇವೆಯನ್ನು ಪಡೆಯುವ ನಿಟ್ಟಿನಲ್ಲಿ ಕಾರ್ಯಪ್ರವೃತರಾಗಿರುವುದು ಶ್ಲಾಘನೀಯ' ಎಂದು ತಿಳಿಸಿದ್ದಾರೆ.

'ಯುವ ಪದವೀಧರರಿಗೆ ಸೂಕ್ತವಾದ ಮಾರ್ಗದರ್ಶನ ಮಾಡುವ ಸಮಯ ಬಂದಿದೆ. ಈ ನಿಟ್ಟಿನಲ್ಲಿ ವೈದ್ಯಕೀಯ ಕಾಲೇಜುಗಳು ಪ್ರಮುಖ ಪಾತ್ರವಹಿಸಬೇಕು. ವೈದ್ಯಕೀಯ ಸೇವೆಗೆ ಹಾಜರಾದವರಿಗೆ ಸೂಕ್ತ ಸುರಕ್ಷತೆ ಒದಗಿಸಲು ಆದ್ಯತೆ ನೀಡಬೇಕು. ಸಾಂಕ್ರಾಮಿಕ ಕಾಯಲೆಗಳನ್ನು ಮುಂಚೂಣಿಯಲ್ಲಿ ನಿಂತು ಎದುರಿಸುವವರಿಗೆ ಮಾನದಂಡ ರೂಪಿಸಬೇಕು. ಸಮವಸ್ತ್ರ, ಗುಣಮಟ್ಟದ ಮುಖಗವಸು, ಮುಖ ಕವಚ, ಗೌನ್, ಪಿಪಿಇ ಕಿಟ್ ಸೇರಿದಂತೆ ವಿವಿಧ ಸುರಕ್ಷಾ ಸಾಧನಗಳನ್ನು ಒದಗಿಸಬೇಕು' ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಪ್ರಜಾವಾಣಿ
ಓದುಗರಲ್ಲಿ ಮನವಿ

ಕೋವಿಡ್ ಸಂಕಷ್ಟದ ನಡುವೆಯೂ ಮಳೆ, ಗಾಳಿ, ಚಳಿಯ ಪರಿವಿಲ್ಲದೆ ಪ್ರತಿದಿನ ಓದುಗರು ನಿದ್ದೆಯಿಂದ ಎದ್ದೇಳುವ ಮುಂಚೆಯೇ ಅವರ ಮನೆ ಬಾಗಿಲಿಗೆ 'ಪ್ರಜಾವಾಣಿ' ಪತ್ರಿಕೆಯನ್ನು ಮುಟ್ಟಿಸುವ ಕೆಲಸವನ್ನು ವಿತರಕರು ಮಾಡುತ್ತಿದ್ದಾರೆ. ಪ್ರಸ್ತುತ ಕರ್ಫ್ಯೂ ಜಾರಿಯಲ್ಲಿರುವ ಪರಿಣಾಮ ಪತ್ರಿಕೆಯ ತಿಂಗಳ ಬಿಲ್ ಕಲೆಕ್ಷನ್ ಕಷ್ಟಕರವಾಗಿದೆ. ಹಾಗಾಗಿ, ಓದುಗರೇ ವಿತರಕರನ್ನು ನೇರವಾಗಿ ಸಂಪರ್ಕಿಸಿ ಡಿಜಿಟಲ್ ಪೇಮೆಂಟ್ ಮೂಲಕ ಹಣ ಪಾವತಿಸಲು ಮನವಿ.

ಅನಗತ್ಯ ಓಡಾಟ: ಒಂದೇ ದಿನ 448 ವಾಹನ ಜಪ್ತಿ

ಬೆಂಗಳೂರು: 'ಗುರುವಾರ ಬೆಳಿಗ್ಗೆಯಿಂದ ಶುಕ್ರವಾರ ಬೆಳಿಗ್ಗೆವರೆಗೆ ನಗರದಲ್ಲಿ ಅನಗತ್ಯವಾಗಿ ಓಡಾಡುತ್ತಿದ್ದವರ 448 ವಾಹನಗಳಲ್ಲಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.'



'ನಗರದಲ್ಲಿ ಕರ್ಫ್ಯೂ ಜಾರಿಯಲ್ಲಿದ್ದರೂ ಅಗತ್ಯ ವಸ್ತುಗಳ ಖರೀದಿ ಹಾಗೂ ತುರ್ತುಸೇವೆಗಳಿಗೆ ಅವಕಾಶ ನೀಡಲಾಗಿದೆ. ಇದರ ನಡುವೆಯೂ ಕೆಲಸರು ಅನಗತ್ಯವಾಗಿ ರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಅಂಥವರನ್ನು ತಡೆದು ದಂಡ ವಿಧಿಸುವ ಜೊತೆಯಲ್ಲಿ ವಾಹನಗಳನ್ನು ಜಪ್ತಿ ಮಾಡಲಾಗುತ್ತಿದೆ' ಎಂದೂ ತಿಳಿಸಿದರು.

'ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಕರ್ಫ್ಯೂ ಜಾರಿಗೊಳಿಸಿದ ದಿನದಿಂದಲೂ ಇದುವರೆಗೆ 9,553 ವಾಹನಗಳನ್ನು ಜಪ್ತಿ ಮಾಡಿದ್ದೇವೆ. ನ್ಯಾಯಾಲಯದ ಮೂಲಕವೇ ಮಾಲೀಕರು ವಾಹನ ಬಿಡಿಸಿಕೊಳ್ಳಬೇಕಾಗುತ್ತದೆ' ಎಂದೂ ಹೇಳಿದರು.

₹1.68 ಲಕ್ಷ ದಂಡ: 'ಗುರುವಾರ ನಗರದಲ್ಲಿ ಕಾರ್ಯಾಚರಣೆ ನಡೆಸಿದ್ದ ಸಿಬ್ಬಂದಿ, ಮಾಸ್ಕ್ ಧರಿಸದ ಹಾಗೂ ಅಂತರ ಕಾಯ್ದುಕೊಳ್ಳದವರಿಂದ ಒಂದೇ ದಿನದಲ್ಲಿ ₹ 1.68 ಲಕ್ಷ ಜಪ್ತಿ ಮಾಡಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಎನ್‌ಜಿಟಿಗೆ ರಾಜ್ಯ ಸರ್ಕಾರದ ಲಿಖಿತ ಹೇಳಿಕೆ

'ಕಿತ್ತಗಾನಹಳ್ಳಿ ಕೆರೆ ಪುನಶ್ಚೇತನಕ್ಕೆ ಅಗತ್ಯ ಕ್ರಮ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ಆನೇಕಲ್ ತಾಲ್ಲೂಕಿನ ಬೊಮ್ಮಸಂದ್ರ ಬಳಿಯ ಕಿತ್ತಗಾನಹಳ್ಳಿ ಕೆರೆಯ ಪುನಶ್ಚೇತನಕ್ಕೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ)ಗೆ ತಿಳಿಸಿದೆ.

ಮಹತ್ವದ ಈ ಜಲಮೂಲವನ್ನು ಪುನರುಜ್ಜೀವನಕ್ಕಾಗಿ ಅನೇಕ ಕ್ರಮಗಳನ್ನು ಕೈಗೊಗೊಳ್ಳಲಾಗಿದ್ದು, ಮೂರು ತಿಂಗಳ ಅವಧಿಯಲ್ಲಿ, ಸುತ್ತಮುತ್ತಲಿನ ಒಳಚರಂಡಿಗಳ ನೀರನ್ನು ಸಂಸ್ಕರಿಸುವ ಘಟಕಗಳನ್ನು (ಎಸ್‌ಟಿಪಿ) ಅಳವಡಿಸಲಾಗುವುದು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯವರು ಎನ್‌ಜಿಟಿಗೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಕೆರೆಯನ್ನು ಸೇರಿಕೊಂಡಿದ್ದ ಎಲ್ಲ ರೀತಿಯ ತ್ಯಾಜ್ಯ ಹಾಗೂ ಕೆರೆಯಲ್ಲಿನ ಹೂಳನ್ನು ಹೊರ ತೆಗೆದುಹಾಕಲಾಗಿದೆ. ಈ ಮೂಲಕ ನೀರಿನ ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ. ಸುತ್ತಲೂ ಒಡ್ಡುಗಳನ್ನು ನಿರ್ಮಿಸಲಾಗಿದೆ ಎಂದೂ ತಿಳಿಸಲಾಗಿದೆ.

ಕೈಗಾರಿಕಾ ತ್ಯಾಜ್ಯ ಎಸೆದಿರುವ ಕಾರಣ ಈ ಕೆರೆಯ ಮಲಿನಗೊಂಡಿದೆ. ಕೂಡಲೇ ಕೆರೆಯ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಕೋರಿ ಸಂಜಯ್ ರಾವ್ ಎಂಬುವವರು ಹಸಿರು ಪೀಠಕ್ಕೆ ಸಲ್ಲಿಸಿದ್ದ ದೂರಿನ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಆದರ್ಶಕುಮಾರ್ ಗೋಯೆಲ್ ನೇತೃತ್ವದ ಎನ್‌ಜಿಟಿ ಪ್ರಧಾನ ಪೀಠ, ಕೆರೆಯ ಸ್ಥಿತಿಗತಿಯ ಕುರಿತು ಸಮಗ್ರ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿತ್ತು.

ಕೆರೆಯು ಮಲಿನಗೊಳ್ಳಲು ರಾಜ್ಯ ಸರ್ಕಾರ ಹಾಗೂ ಬೊಮ್ಮಸಂದ್ರ ಪುರಸಭೆಗಳ ವೈಫಲ್ಯವೇ ಕಾರಣ ಎಂದು ದೂರಿದ್ದ ಎನ್‌ಜಿಟಿ, ಕ್ರಮವಾಗಿ ಸರ್ಕಾರಕ್ಕೆ ₹ 10 ಲಕ್ಷ ಹಾಗೂ ಪುರಸಭೆಗೆ ₹ 5 ಲಕ್ಷ ದಂಡ ವಿಧಿಸಿತ್ತು.

ವೈಜ್ಞಾನಿಕ ಮನೋಭಾವ ಮತ್ತು ಕೋವಿಡ್

ಪ್ರಜಾವಾಣಿ ವಾರ್ತೆ

ಕೋವಿಡ್ ಗೆದ್ದವರ ಕಥೆ

ಬೆಂಗಳೂರು: ಕೋವಿಡ್ ಈಗ ಯಾರ ಮನೆಯನ್ನೂ ಬಿಟ್ಟಿಲ್ಲ. ಹಾಗೆಯೇ ಅದರ ಸೋಂಕಿಗೆ ನಾನೂ ಒಳಗಾದೆ. ವೈಜ್ಞಾನಿಕ ಮನೋಭಾವ ಮತ್ತು ಸಮಯ ಪ್ರಜ್ಞೆಯಿಂದ ಅದರಿಂದ ಪಾರಾಗಲು ಸಾಧ್ಯವಾಯಿತು.

ಆರೋಗ್ಯದಲ್ಲಿ ಏರುಪೇರಾಗಿ ಗಂಟಲು ಕೈಕೊಟ್ಟ ತಕ್ಷಣವೇ ಖಾಸಗಿ ಲ್ಯಾಬ್‌ನಲ್ಲಿ ಗಂಟಲ ದ್ರವ ಪರೀಕ್ಷೆಗೆ ಕೊಟ್ಟೆ. ಆದರೆ, ಫಲಿತಾಂಶಕ್ಕೆ ಕಾದು ಕೂರದೇ ಔಷಧೋಪಚಾರ ಆರಂಭಿಸಿದೆ. ಮೊದಲ ಫಲಿತಾಂಶ ಅಪೂರ್ಣ ಎನಿಸಿತು. ಪಕ್ಕದ ಮನೆಯ ವೈದ್ಯರಲ್ಲಿ ತೋರಿಸಿದೆ. ಅದರಲ್ಲಿದ್ದ 22 ಆವರ್ತನೆ (ಸೈಕಲ್) ಎಂಬ ಅಂಶ ನೋಡಿ ಇದು ಕೊರೊನಾ ಪಾಸಿಟಿವ್ ಎಂದರು. ನನ್ನ ಸಮಾಧಾನಕ್ಕಾಗಿ ಸರ್ಕಾರಿ ಆಸ್ಪತ್ರೆಯಲ್ಲೇ ಪರೀಕ್ಷೆ ಮಾಡಿಸಿದೆ. ಬಿಬಿಎಂಪಿಯಿಂದ ಪಾಸಿಟಿವ್ ಎಂಬ ವರದಿ ಬಂದು ಬಿ.ಯು ನಂಬರ್ ಕೂಡ ಜನರೇಟ್ ಆಗಿತ್ತು.

ಇಷ್ಟು ಹೊತ್ತಿಗೆ ಸ್ಟೀಮರ್, ಥರ್ಮಾಮೀಟರ್, ಆಕ್ಸಿಮೀಟರ್, ಗ್ಲುಕೋಮೀಟರ್‌ಗಳನ್ನು ತರಿಸಿ ಮನೆಯಲ್ಲೇ ದಿನಕ್ಕೆ ಮೂರು ಬಾರಿ ಪರೀಕ್ಷೆ ಆರಂಭಿಸಿದೆ. ಸಾಕಷ್ಟು ಬಾರಿ ಉಗಿ ತೆಗೆದುಕೊಳ್ಳಲು ಪ್ರಾರಂಭಿಸಿದೆ. ಉಸಿರಾಟ ಕಷ್ಟವಾಗಿತ್ತು, ಜ್ವರ ಇತ್ತು, ಲೂಸ್ ಮೋಷನ್ ಆಗುತ್ತಿತ್ತು. ಧೃತಿಗೆಡದೆ ವೈದ್ಯರ ಸಲಹೆಯಂತೆ ಮನೆಯಲ್ಲೇ ಕಳೆಯಲು ತೀರ್ಮಾನಿಸಿದೆ.

ರಾತ್ರಿ ನಿದ್ದೆ ಬರುತ್ತಿರಲಿಲ್ಲ. ಮೈ-ಕೈ ನೋವು ಇತ್ತು. ಆಮ್ಲಜನಕ ಮಾಪಕವು 93-94 ತೋರಿಸುತ್ತಿತ್ತು. ಇಬ್ಬರು ವೈದ್ಯರು ವಿಭಿನ್ನ ಔಷಧ ಹೇಳಿದ್ದರು. ಅದನ್ನು

ಚರ್ಚೆ ಮಾಡಿ ಕಾಂಬಿನೇಷನ್ ಮಾಡಿ ತೆಗೆದುಕೊಳ್ಳುತ್ತಿದ್ದೆ. ಐದಾರು ದಿನಗಳ ಆಗುವ ಹೊತ್ತಿಗೆ ಕಟ್ಟಿದ್ದ ಮೂಗು ನಾನು ಹಾಕಿದ 'ಹೊಗೆ' (ಹಬೆ) ಮತ್ತು ಹಟಕ್ಕೆ ಸ್ವಲ್ಪವೇ ಸೋಲಲು ಆರಂಭಿಸಿತು. ಜ್ವರ ಬಿಡಲಾರಂಭಿಸಿತು. ಔಷಧಿಯ ಜತೆಗೆ ಬೆಳಗ್ಗಿನ ವೇಳೆ ಎಳೆ ಬಿಸಿಲು ಕಾಯಿಸುವುದು, ಕಷಾಯ, ಪ್ರಾಣಾಯಾಮ ಮಾಡುತ್ತಿದ್ದೆ. ಬಿಸಿ ಬಿಸಿ ಊಟ ಮತ್ತು ಔಷಧೋಪಚಾರವೂ ನಡೆಯುತ್ತಿತ್ತು.

ಅಪ್ಪಿ ತಪ್ಪಿಯೂ ಟಿ.ವಿ ನೋಡುತ್ತಿರಲಿಲ್ಲ. ಸಂಗೀತ, ಉತ್ತಮ ಹಳೆಯ ಚಿತ್ರಗೀತೆಗಳು, ಸ್ನೇಹಿತರ ಜತೆ ದೂರವಾಣಿಯಲ್ಲಿ ಮಾತುಕತೆ ನಡೆಸಿದೆ. ನೀಲಾ ಕೊಡ್ಲಿ, ರಾಜಶೇಖರ ಮನ್ಸೂರ್, ಮೈಸೂರು ಮಂಜುನಾಥ್ ಮತ್ತಿತರರ ಗಾಯನ ಮತ್ತು ವಯಲಿನ್ ಆಸ್ವಾದಿಸಿದೆ.

17 ದಿನಗಳು 'ಗೃಹಬಂಧನ'ದಲ್ಲಿ ಇರಲೇಬೇಕು ಎಂಬ ವೈದ್ಯರ ಸಲಹೆ ಪಾಲಿಸಿದೆ. ಪೂರ್ತಿ ಗುಣಮುಖಳಾದರೂ, ಸುಸ್ತು ಇನ್ನೂ ಇದೆ. ಸಕಾರಾತ್ಮಕ ಚಿಂತನೆಗಳು ಮತ್ತು ಸಕಾಲಕ್ಕೆ ಸರಿಯಾಗಿ ಚಿಕಿತ್ಸೆ ಆರಂಭಿಸಿದ್ದು ನೆರವಾಯಿತು. ಕೋವಿಡ್ ಸಂಕಷ್ಟವನ್ನು ವೈಜ್ಞಾನಿಕ ಮನೋಭಾವದ ಹಿನ್ನೆಲೆಯಲ್ಲಿ ಸಮರ್ಪಕವಾಗಿ ಎದುರಿಸಿದೆ ಎಂಬ ಧೈರ್ಯ ಬಂದಿದೆ.

ಡಾ.ವೈ.ಸಿ.ಕಮಲ, ಪ್ರಾಧ್ಯಾಪಕಿ, ನ್ಯಾಷನಲ್ ಕಾಲೇಜು ಬಸವನಗುಡಿ

'ನಮ್ಮ ಜೀವಕ್ಕೆ ಬೆಲೆ ಇಲ್ಲವೇ'

ಬೆಂಗಳೂರು: ಪಡಿತರ ವಿತರಣೆಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆಗೆ ಆದೇಶಿಸಿರುವ ರಾಜ್ಯ ಸರ್ಕಾರದ ನಿರ್ಧಾರದ ವಿರುದ್ಧ ಆಹಾರ ನಿರೀಕ್ಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿರುವವರಿಗೆ ಪಡಿತರ ನೀಡುವ ಸಂಬಂಧ ಸ್ಥಳ ಪರಿಶೀಲನೆ ಮಾಡಲು ಆಹಾರ ಸಚಿವರು ಜ.17ರಂದು ಸೂಚಿಸಿದ್ದರು. ಆದರೆ, ಇಲಾಖೆಯು ಆ ಆದೇಶವನ್ನು ಈಗ ಜಾರಿ ಮಾಡಲು ಮುಂದಾಗಿದ್ದಾರೆ. ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ, ಕರ್ಫ್ಯೂ ಜಾರಿಯಲ್ಲಿರುವ ಈ ಸಂದರ್ಭದಲ್ಲಿ ಆದೇಶ ಪಾಲನೆ ಸಾಧ್ಯವೇ' ಎಂದು ಆಹಾರ ನಿರೀಕ್ಷಕರು ಪ್ರಶ್ನಿಸಿದ್ದಾರೆ.

'ಕಳೆದ ವರ್ಷ ಇದೇ ಸಂದರ್ಭದಲ್ಲಿಯೂ ಕೋವಿಡ್ ಪ್ರಕರಣಗಳು ಹೆಚ್ಚಿದ್ದವು. ಆಗ, ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿದ್ದವರಿಗೆ 10 ಕೆಜಿ ಪಡಿತರ ನೀಡಲಾಗಿತ್ತು. ಯಾವುದೇ ಸ್ಥಳ ಪರಿಶೀಲನೆ ನಡೆಸಿರಲಿಲ್ಲ. ಈಗಲೂ ಅದೇ ನಿಯಮ ಪಾಲಿಸಬಹುದು. ಸ್ಥಳ ಪರಿಶೀಲನೆ ನಡೆಸುವ ತುರ್ತು ಈಗಿಲ್ಲ' ಎಂದು ಅವರು ಹೇಳಿದ್ದಾರೆ.

ನಿಧನ ವಾರ್ತೆ

ಕೆ.ಎನ್. ಲೀಲಾವತಿ ಕೃಷ್ಣನ್

ಬೆಂಗಳೂರು: ಗೌರಿಬಿದನೂರು ಮೂಲದ ಕೆ.ಎನ್. ಲೀಲಾವತಿ ಕೃಷ್ಣನ್ (90) ಅವರು ಶುಕ್ರವಾರ ಸಂಜೆ ತಮ್ಮ ಸ್ವಗೃಹದಲ್ಲಿ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಹಾಗೂ ಆರು ಪುತ್ರಿಯರು ಇದ್ದಾರೆ.

'ತಾವರೆಕೆರೆ ಚಿತಾಗಾರದಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಸಲಾಗುವುದು' ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಕುಟುಂಬಸ್ಥರ ಸಂಪರ್ಕಕ್ಕೆ; 9886038397.

ವಿ. ನಾಗರಾಜು

ಬೆಂಗಳೂರು: ಪತ್ರಕರ್ತ ವಿ.ನಾಗರಾಜು (71) ಅವರು ಅನಾರೋಗ್ಯದಿಂದಾಗಿ ಶುಕ್ರವಾರ ನಿಧನರಾದರು.

'ಇಂದು ಸಂಜೆ' ಪ್ರಾದೇಶಿಕ ಸಂಜೆ ಪತ್ರಿಕೆಯ ಸಂಪಾದಕರಾಗಿ ಅವರು ಕೆಲಸ ಮಾಡುತ್ತಿದ್ದರು.

ಕೋವಿಡ್ ಹಾಸಿಗೆ ಹಂಚಿಕೆಯಲ್ಲಿ ರಾಜಕಾರಣಿಗಳ ಹಸ್ತಕ್ಷೇಪ • ಮೃತರ ಹೆಸರಿನಲ್ಲಿ ಹಾಸಿಗೆ ಕಾಯ್ದಿರಿಸಿದ್ದ ಬನ್ನೇರುಘಟ್ಟದ ಅಪೋಲೊ ಆಸ್ಪತ್ರೆ

‘ಸರ್ಕಾರಕ್ಕೆ ಮೊದಲೇ ಮಾಹಿತಿ ನೀಡಿದ್ದ ಅಧಿಕಾರಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ತೇಜಸ್ವಿ ಸೂರ್ಯ ಹಾಗೂ ಮೂವರು ಶಾಸಕರು ದಕ್ಷಿಣ ವಲಯದ ಕೋವಿಡ್ ವಾರ್ ರೂಮ್ ಮೇಲೆ ದಾಳಿ ನಡೆಸಿ ಹಾಸಿಗೆ ಬ್ಲಾಕಿಂಗ್ ಪ್ರಕರಣ ಬಯಲಿಗೆ ಎಳೆಯುವುದಕ್ಕೆ ಹಲವು ದಿನಗಳ ಮೊದಲೇ ಅಧಿಕಾರಿಗಳು ಈ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿದ್ದರು ಎಂಬ ವಿಷಯ ಬಹಿರಂಗಗೊಂಡಿದೆ.

ಬೊಮ್ಮನಹಳ್ಳಿ ವಲಯದಲ್ಲಿ ಬರುವ ಬನ್ನೇರುಘಟ್ಟದ ಅಪೊಲೊ ಆಸ್ಪತ್ರೆಯು ಮೃತರು ಮತ್ತು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದವರ ಹೆಸರಿನಲ್ಲಿ ಹಾಸಿಗೆ ಕಾಯ್ದಿರಿಸಿತ್ತು. ಈ ಕುರಿತು ಎಫ್ಐಆರ್ ಕೂಡ ದಾಖಲಾಗಿತ್ತು. ಏ.25ರಂದು ಈ ಕುರಿತು ಮುಖ್ಯಕಾರ್ಯದರ್ಶಿಯವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಅಧಿಕಾರಿಗಳು ರಾಜಕಾರಣಿಗಳ ಹಸ್ತಕ್ಷೇಪದ ಕುರಿತು ಪ್ರಸ್ತಾಪಿಸಿದ್ದರು ಎಂದು ಮೂಲಗಳು ತಿಳಿಸಿವೆ.

‘ಸಂಸದರು, ಶಾಸಕರು, ಮಾಜಿ ಕಾರ್ಪೊರೇಟರ್‌ಗಳು ಮತ್ತು ಅವರ ಬೆಂಬಲಿಗರ ಹಸ್ತಕ್ಷೇಪದಿಂದ ಶೇ 75ರಷ್ಟು ಹಾಸಿಗೆಗಳು ಬ್ಲಾಕ್ ಆಗುತ್ತಿವೆ. ಆಮ್ಲಜನಕ ಮಟ್ಟ ಚೆನ್ನಾಗಿದ್ದವರೂ, ಸೋಂಕಿನ ಸೌಮ್ಯ ಲಕ್ಷಣ ಹೊಂದಿದವರಿಗೂ ಐಸಿಯು ಹಾಸಿಗೆ ನೀಡಬೇಕಾಗಿದೆ ಎಂದೂ ಅಧಿಕಾರಿಗಳು ಹೇಳಿದ್ದರು’ ಎಂದು ಮೂಲಗಳು ಹೇಳಿವೆ.

‘ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುವಂತೆ ಮುಖ್ಯ ಕಾರ್ಯದರ್ಶಿಯವರು ಎಲ್ಲ ವಲಯ ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೆ, ಮುಖ್ಯ ಕಾರ್ಯದರ್ಶಿಯವರ ಸೂಚನೆಯನ್ನು ವಲಯ ಅಧಿಕಾರಿಗಳು ಮರೆತೇ ಬಿಟ್ಟರು’ ಎಂದೂ ಮೂಲಗಳು ತಿಳಿಸಿವೆ.

‘ಬೊಮ್ಮನಹಳ್ಳಿ ವಲಯದ ನೋಡಲ್ ಅಧಿಕಾರಿ ರಾಜೇಂದ್ರ ಕುಮಾರ್ ಕಟಾರಿಯಾ ಅವರು ಅಲ್ಲಿನ ವಾರ್ ರೂಮ್‌ಗೆ ಏ.29ರಂದು ತೆರಳಿದ್ದರು. ಶಾಸಕ ಸತೀಶ್ ರೆಡ್ಡಿ ಅವರ ಆಪ್ತ ಎಂದು ಹೇಳಿಕೊಂಡಿದ್ದ ವ್ಯಕ್ತಿಯೊಬ್ಬ ವಾರ್ ರೂಮ್‌ನಲ್ಲಿ ಇದ್ದ. ವಿಚಾರಿಸಿದಾಗ ತಮ್ಮ ಕಡೆಯವರಿಗೆ ಹಾಸಿಗೆ ಮೀಸಲಿಡಲು ಇಲ್ಲಿರುವುದಾಗಿ ಹೇಳಿದ್ದ. ಕಟಾರಿಯಾ ಅವರು ಅವನಿಗೆ ಬೈದು ಹೊರಗಟ್ಟಿದ್ದರು. ಇದಾದ ಮರುದಿನವೇ ಸತೀಶ್ ರೆಡ್ಡಿ ಬೆಂಬಲಿಗರು ಎಂದು ಹೇಳಿಕೊಂಡ ಗುಂಪೊಂದು ಅಧಿಕಾರಿಯ ಕಚೇರಿಗೆ ದಾಳಿ ಮಾಡಿತ್ತು. ಐಎಎಸ್ ಪ್ರೊಬೆಷನರಿ ಅಧಿಕಾರಿ ವಿ. ಯಶವಂತ ಅವರ ಮೇಲೆ ಹಲ್ಲೆಗೆ ಯತ್ನಿಸಿತ್ತು’ ಎಂದೂ ಮೂಲಗಳು ಹೇಳಿವೆ.

‘ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಅಂತ್ಯಸಂಸ್ಕಾರ ಎರಡು ದಿನ ಕಳೆದರೂ ಮಾಡಿರಲಿಲ್ಲ. ಈ ಬಗ್ಗೆ ಪ್ರಶ್ನಿಸಿದಾಗ ವಾರ್ ರೂಂನ ಸಿಬ್ಬಂದಿ ಸಮರ್ಪಕವಾಗಿ ಉತ್ತರ ನೀಡಲಿಲ್ಲ. ಈ ಬಗ್ಗೆ ಪ್ರಶ್ನೆ ಮಾಡಲು ಅಧಿಕಾರಿಯ ಬಳಿ ಹೋಗಿದ್ದೆವು. ಅಧಿಕಾರಿಗಳು ಸ್ಪಂದಿಸದ ಕಾರಣಕ್ಕೆ ಕೆಲವು ಕಾರ್ಯಕರ್ತರು ಆಕ್ರೋಶದಿಂದ ವರ್ತಿಸಿದರು. ಅವರನ್ನು ನಾನೇ ಸಮಾಧಾನಪಡಿಸಿದ್ದೇನೆ’ ಎಂದು ಶಾಸಕ ಎಂ. ಸತೀಶ್ ರೆಡ್ಡಿ ಹೇಳಿದರು.

ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಕರೆ ಮಾಡಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

ವಾರ್ ರೂಂ ತಾತ್ಕಾಲಿಕ ಕಾರ್ಯಸ್ಥಗಿತ

ಬೆಂಗಳೂರು: ದಾಸರಹಳ್ಳಿ ವಲಯದ ಕೋವಿಡ್ ವಾರ್ ರೂಂ ಗುರುವಾರ ರಾತ್ರಿಯಿಂದ ಶುಕ್ರವಾರ ಬೆಳಿಗ್ಗೆ 10 ಗಂಟೆಯ ವರೆಗೆ ಕಾರ್ಯನಿರ್ವಹಿಸಲಿಲ್ಲ. ಇದರಿಂದ ಹಲವಾರು ರೋಗಿಗಳು ಸಂಕಷ್ಟ ಅನುಭವಿಸಿದರು.

ತಾಂತ್ರಿಕ ಕಾರಣಗಳಿಂದ ರಾತ್ರಿ 11 ರ ವೇಳೆಗೆ ವಾರ್ ರೂಂ ಚಟುವಟಿಕೆ ಸ್ಥಗಿತಗೊಂಡಿತು. ಕೋವಿಡ್‌ನಿಂದ ತೀವ್ರ ಅಸ್ವಸ್ಥಗೊಂಡವರು ಆಸ್ಪತ್ರೆಗೆ ದಾಖಲಾಗಲು ಇದರಿಂದ ಸಮಸ್ಯೆಯಾಯಿತು. ಈ ಬಗ್ಗೆ ಹಲವಾರು ರೋಗಿಗಳು ಶಾಸಕ ಆರ್.ಮಂಜುನಾಥ್ ಅವರಿಗೆ ಮಾಹಿತಿ ನೀಡಿದರು. ಶಾಸಕರು ಕ್ಷೇತ್ರದ ಕೋವಿಡ್ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಅವರಿಗೆ ಕರೆ ಮಾಡಿ ಸಮಸ್ಯೆ ಬಗೆಹರಿಸುವಂತೆ ಕೋರಿಕೊಂಡರು. ಬೆಳಿಗ್ಗೆ 10 ಗಂಟೆಯ ವೇಳೆಗೆ ಸಮಸ್ಯೆ ಬಗೆಹರಿಯಿತು.

’ಈ ಸಮಸ್ಯೆಗೆ ಆರೋಗ್ಯಾಧಿಕಾರಿ ಡಾ.ಲೋಕೇಶ್ ಅವರೇ ಕಾರಣ. ಅವರ ನಿರ್ಲಕ್ಷ್ಯದಿಂದ ರೋಗಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಖಾಸಗಿ ಆಸ್ಪತ್ರೆಗಳ ಜತೆಗೆ ಈ ಅಧಿಕಾರಿ ಒಪ್ಪಂದ ಮಾಡಿಕೊಂಡಿದ್ದಾರೆ. ಇಂತಹ ಅಧಿಕಾರಿಗಳಿಗೆ ಬರೆ ಹಾಕಬೇಕು‘ ಎಂದು ಶಾಸಕ ಆರ್.ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು.

’ಕ್ಷೇತ್ರದಲ್ಲಿ ಬಡವರು ಹಾಗೂ ಮಧ್ಯಮವರ್ಗದವರೇ ಜಾಸ್ತಿ ಇದ್ದಾರೆ. ಅಂತಹವರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ನೀಡಬೇಕು. ಆದರೆ, ಆರ್‌ಟಿಪಿಸಿಆರ್ ಪರೀಕ್ಷೆಯ ಫಲಿತಾಂಶ ಮೂರುಗಳು ಕಳೆದರೂ ಬರುತ್ತಿಲ್ಲ. ಮನೆ ಆರೈಕೆಯಲ್ಲಿರುವ ಕೋವಿಡ್ ರೋಗಿಗಳಿಗೆ ಔಷಧ ಪೂರೈಕೆ ಮಾಡುತ್ತಿಲ್ಲ‘ ಎಂದು ಕಿಡಿಕಾರಿದರು.

’ರೋಗಿಗಳ ಅನುಕೂಲಕ್ಕಾಗಿ 130 ಬೆಡ್ ಸಾಮರ್ಥ್ಯದ ಆರೈಕೆ ಕೇಂದ್ರ ಆರಂಭಿಸಲಾಗಿದೆ. ಈ ಕೇಂದ್ರಕ್ಕೆ ಆಮ್ಲಜನಕ ಬೆಡ್‌ಗಳನ್ನು ಒದಗಿಸುವಮತೆ ಕಂದಾಯ ಸಚಿವ ಆರ್.ಅಶೋಕ ಸೂಚಿಸಿದ್ದರು. ಈ ವರೆಗೆ ಅಧಿಕಾರಿಗಳು ಈ ಕೆಲಸ ಮಾಡಿಲ್ಲ‘ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಒಂದು ಕೋಮಿನ ವಿರುದ್ಧ ಟೀಕೆ ಮಾಡಿಲ್ಲ’

ಕೋವಿಡ್ ಆರೈಕೆ ಕೇಂದ್ರವನ್ನು ಉದಯ ಗರುಡಾಚಾರ್ ಪರಿಶೀಲಿಸಿದರು.

ಬೆಂಗಳೂರು: ‘ಕೋವಿಡ್ ಹಾಸಿಗೆ ಬ್ಲಾಕ್ ಮಾಡುತ್ತಿದ್ದ ದಂಧೆಯನ್ನು ಬಯಲು ಮಾಡುವ ಉದ್ದೇಶದಿಂದ ಬಿಬಿಎಂಪಿ ವಾರ್ ರೂಮ್‌ಗೆ ಭೇಟಿ ನೀಡಿದ್ದೆವು. ಆ ಸಮಯದಲ್ಲಿ ನಾವ್ಯಾರೂ ಒಂದು ಸಮುದಾಯವನ್ನು ಗುರಿಯಾಗಿಟ್ಟುಕೊಂಡು ಟೀಕಿಸಿಲ್ಲ’ ಎಂದು ಚಿಕ್ಕಪೇಟೆ ಶಾಸಕ ಉದಯ ಗರುಡಾಚಾರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಇಲ್ಲಿ ಮಾತನಾಡಿ, ‘ಸಂವಿಧಾನದಲ್ಲಿ ಅಪಾರ ನಂಬಿಕೆ ಇದೆ. ಎಲ್ಲ ಜಾತಿ ಧರ್ಮದವರನ್ನೂ ಪ್ರೀತಿಯಿಂದ ಕಾಣುತ್ತೇನೆ. ನಮ್ಮ ಸಂಸದರು ಹಾಗೂ ಶಾಸಕರೂ ಕೂಡ ಸಂವಿಧಾನವನ್ನು ಗೌರವಿಸುತ್ತಾರೆ. ವಾರ್ ರೂಂನಲ್ಲಿ ಸಂಸದ ತೇಜಸ್ವಿ ಸೂರ್ಯ ದುರ್ವರ್ತನೆ ತೋರಿಲ್ಲ. ಯಾರೋ ತಪ್ಪು ಮಾಹಿತಿ ನೀಡಿರಬಹುದು. ಹೀಗಾಗಿ ಗೊಂದಲ ಸೃಷ್ಟಿಯಾಗಿದೆ. ವಾರ್ ರೂಂನಲ್ಲಿ ಡಾ.ರೆಹಾನ್ ಇದ್ದರು. ಪ್ರತಿ ದಿನ ಐದು ಹಾಸಿಗೆಗಳ ವ್ಯವಸ್ಥೆ ಮಾಡಿಕೊಡುವಂತೆ ನಾವೆಲ್ಲ ಅವರಲ್ಲಿ ಮನವಿ ಮಾಡಿದ್ದೆವು. ಅದಕ್ಕೆ ಒಪ್ಪಿದ್ದ ಅವರು ನಂತರ ಕರೆ ಮಾಡಿದಾಗಲೆಲ್ಲಾ ಹಾಸಿಗೆ ಲಭ್ಯವಿಲ್ಲ ಎನ್ನುತ್ತಿದ್ದರು. ಹೀಗಾಗಿಯೇ ವಾರ್ ರೂಂಗೆ ಭೇಟಿ ನೀಡಿ ಅಧಿಕಾರಿಗಳನ್ನು ವಿಚಾರಿಸಿದ್ದೆವು’ ಎಂದರು.

ಬಸವನಗುಡಿಯಲ್ಲಿರುವ ವಾಸವಿ ಕನ್ವೆಂಷನ್ ಸೆಂಟರ್‌ನಲ್ಲಿ 40 ಸೋಂಕಿತರಿಗೆ ಆಮ್ಲಜನಕ ಹಾಸಿಗೆಯನ್ನು ಒಳಗೊಂಡ ಕೋವಿಡ್ ಆರೈಕೆ ಕೇಂದ್ರ ಆರಂಭಿಸಲಾಗುತ್ತಿದ್ದು, ಸೋಮವಾರ ಈ ಕೇಂದ್ರ ಆರಂಭವಾಗಲಿದೆ ಎಂದರು.

ತೇಜಸ್ವಿ, ಮೂವರು ಶಾಸಕರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕೋವಿಡ್ ವಾರ್ ರೂಮ್‌ನಲ್ಲಿದ್ದ ಮುಸ್ಲಿಂ ಧರ್ಮೀಯ ಸಿಬ್ಬಂದಿ ಮೇಲೆ ಸುಳ್ಳು ಆರೋಪ ಹೊರಿಸಿ ಮತೀಯ ಸಂಘರ್ಷ ಸೃಷ್ಟಿಸಲು ಯತ್ನಿಸಿದ ಆರೋಪದಡಿ ಸಂಸದ ತೇಜಸ್ವಿ ಸೂರ್ಯ ಮತ್ತು ಶಾಸಕರಾದ ಸತೀಶ್ ರೆಡ್ಡಿ, ಎಲ್.ಎ.ರವಿ ಸುಬ್ರಮಣ್ಯ ಮತ್ತು ಉದಯ ಗರುಡಾಚಾರ್ ವಿರುದ್ಧ ಎಫ್ಐಆರ್ ದಾಖಲಿಸಲು ಒತ್ತಾಯಿಸಿ ಕಾಂಗ್ರೆಸ್ ಮುಖಂಡರು ನಗರ ಪೊಲೀಸ್ ಕಮಿಷನರ್‌ಗೆ ದೂರು ನೀಡಿದ್ದಾರೆ.

ರಾಜ್ಯಸಭಾ ಸದಸ್ಯ ಡಾ.ನಾಸೀರ್ ಹುಸೇನ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಸಲೀಂ ಅಹ್ಮದ್, ಶಾಸಕರಾದ ಕೃಷ್ಣ ಬೈರೇಗೌಡ, ಜಮೀರ್ ಅಹಮ್ಮದ್ ಖಾನ್, ಎನ್.ಎ. ಹ್ಯಾರಿಸ್, ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ನಸೀರ್ ಅಹ್ಮದ್ ಮತ್ತು ಎಐಸಿಸಿ ವಕ್ತಾರ ಬ್ರಿಜೇಶ್ ಕಾಳಪ್ಪ ಅವರಿದ್ದ ನಿಯೋಗ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರನ್ನು ಶುಕ್ರವಾರ ಭೇಟಿಮಾಡಿ ದೂರು ಸಲ್ಲಿಸಿತು.

‘ಮೇ 4ರಂದು ಬೊಮ್ಮನಹಳ್ಳಿ ವಲಯದ ಕೋವಿಡ್ ವಾರ್ ರೂಮ್‌ಗೆ ಭೇಟಿ ನೀಡಿದ್ದ ತೇಜಸ್ವಿ ಸೂರ್ಯ ಮತ್ತು ಶಾಸಕರು, 16 ಮಂದಿ ಮುಸ್ಲಿಂ ಧರ್ಮೀಯ ಸಿಬ್ಬಂದಿ ಹೆಸರನ್ನು ದುರುದ್ದೇಶದಿಂದ ಉಲ್ಲೇಖಿಸಿದ್ದಾರೆ. ಅವರನ್ನು ಸೇರಿಸಿಕೊಂಡು ಮದರಸಾ ನಡೆಸುತ್ತಿದ್ದೀರಾ? ಎಂದು ಪ್ರಶ್ನಿಸುವ ಮೂಲಕ ಧರ್ಮದ ಆಧಾರದಲ್ಲಿ ದ್ವೇಷ ಬಿತ್ತಲು ಯತ್ನಿಸಿದ್ದಾರೆ’ ಎಂದು ದೂರಲಾಗಿದೆ.

ಸಂಸದ ಮತ್ತು ಶಾಸಕರ ಹೇಳಿಕೆ ಆಧರಿಸಿ ಮುಸ್ಲಿಂ ಧರ್ಮೀಯರ ವಿರುದ್ಧ ದ್ವೇಷದ ಸಂದೇಶಗಳನ್ನು ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಕೋಮು ಸೌಹಾರ್ದ ಕೆಡಿಸುವುದು ಮತ್ತು ನಗರದಲ್ಲಿ ಶಾಂತಿ ಕದಡುವ ಉದ್ದೇಶದಿಂದ ನಾಲ್ವರೂ ಈ ಕೃತ್ಯ ಎಸಗಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಇವರ ವಿರುದ್ಧ ಧರ್ಮದ ಆಧಾರದಲ್ಲಿ ದ್ವೇಷ ಬಿತ್ತಲು ಯತ್ನ, ಮತೀಯ ವಿಚಾರಗಳನ್ನು ಬಳಸಿ ಶಾಂತಿ ಕದಡಲು ಯತ್ನ, ಒಳಸಂಚು ನಡೆಸಿದ ಆರೋಪದ ಮೇಲೆ ಎಫ್ಐಆರ್ ದಾಖಲಿಸಿ ಕ್ರಮ ಜರುಗಿಸಬೇಕು ಎಂದು ನಿಯೋಗ ಆಗ್ರಹಿಸಿದೆ.

ತೇಜಸ್ವಿ ಕ್ಷಮೆಯಾಚನೆ ವಿಷಯ ಚರ್ಚೆ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯದ ಕೋವಿಡ್ ವಾರ್ ರೂಮ್‌ಗೆ ಗುರುವಾರ ಸಂಜೆ ಭೇಟಿ ನೀಡಿದ್ದ ವೇಳೆ ಅಲ್ಲಿನ ಮುಸ್ಲಿಂ ಸಿಬ್ಬಂದಿಯ ಕ್ಷಮೆ ಕೋರಿದ್ದಾರೋ, ಇಲ್ಲವೋ ಎಂಬ ವಿಷಯ ಸಾಮಾಜಿಕ ಮಾಧ್ಯಮದಲ್ಲಿ ಶುಕ್ರವಾರ ಚರ್ಚೆಗೆ ಕಾರಣವಾಯಿತು.

ವಾರ್ ರೂಮ್ ಸಿಬ್ಬಂದಿ ಕ್ಷಮೆಯಾಚಿಸಿದರು ಎಂದು ಹಲವು ಮಾಧ್ಯಮಗಳು ವರದಿ ಮಾಡಿದರೆ, ಈ ರೀತಿ ಯಾರದೇ ಕ್ಷಮೆ ಕೇಳಿಲ್ಲ ಎಂದು ತೇಜಸ್ವಿ ಸೂರ್ಯ ಟ್ವಿಟರ್‌ನಲ್ಲಿ ಸ್ಪಷ್ಟಪಡಿಸಿದರು.

‘ಯಾವುದೇ ಸುದ್ದಿ ಸಿಗದಿದ್ದಾಗ ಕೆಲ ಮಾಧ್ಯಮಗಳು ಇಂತಹ ಸುಳ್ಳು ಸುದ್ದಿ ಸೃಷ್ಟಿಸುತ್ತವೆ’ ಎಂದು ತೇಜಸ್ವಿಸೂರ್ಯ ಟ್ವೀಟ್ ಮಾಡಿದ್ದರು. ಇದಕ್ಕೆ ಪ್ರತಿಯಾಗಿ, ‘ನೀವು ಕ್ಷಮೆ ಕೇಳಿದ್ದಕ್ಕೆ ನಮ್ಮ ಬಳಿ ಸಾಕ್ಷಿ ಇದೆ’ ಎಂದು ‘ನ್ಯೂಸ್ ಮಿನಿಟ್’ ಸುದ್ದಿ ಸಂಸ್ಥೆಯ ಧನ್ಯಾ ರಾಜೇಂದ್ರನ್ ಟ್ವೀಟ್ ಮಾಡಿದರು.

‘ಸಂಸದ ತೇಜಸ್ವಿ ಸೂರ್ಯ ಗುರುವಾರ ವಾರ್ ರೂಮ್‌ಗೆ ಭೇಟಿ ನೀಡಿದ್ದರು. ಯಾರೂ ಈ ವಿಷಯವನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬೇಡಿ. ಧೈರ್ಯದಿಂದ ಇರಿ ಎಂದು ವಿಶ್ವಾಸ ತುಂಬಿದ್ದಾಗಿ ಸಿಬ್ಬಂದಿ ನನಗೆ ತಿಳಿಸಿದರು’ ಎಂದು ವಾರ್ ರೂಮ್‌ಗೆ ಗುತ್ತಿಗೆ ಸಿಬ್ಬಂದಿ ಪೂರೈಸಿರುವ ಕ್ರಿಸ್ಟಲ್ ಏಜೆನ್ಸಿಯ ಯೋಜನಾ ವ್ಯವಸ್ಥಾಪಕ ಶಿವು ನಾಯ್ಕ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರಕರಣದ ನಂತರ ಬಹಳಷ್ಟು ಸಿಬ್ಬಂದಿ ಕೆಲಸಕ್ಕೆ ಬರುತ್ತಿರಲಿಲ್ಲ. ಈ ಸಂದರ್ಭದಲ್ಲಿ ರಜೆ ಹಾಕುವುದು ಬೇಡ. ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಕರ್ತವ್ಯಕ್ಕೆ ಹಾಜರಾಗಿ ಎಂದು ಸಂಸದರು ಹೇಳಿದರು’ ಎಂಬುದಾಗಿ ಅವರು ಹೇಳಿದರು.

ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ತೇಜಸ್ವಿ ಸೂರ್ಯ ಅವರಿಗೆ ಹಲವು ಬಾರಿ ಕರೆ ಮಾಡಲಾಯಿತು. ಅವರು ಸ್ವೀಕರಿಸಲಿಲ್ಲ.

ಹಾಸಿಗೆ ಬ್ಲಾಕಿಂಗ್ ಜಾಲ • 18 ಮಂದಿ ಹೇಳಿಕೆ ಪಡೆದ ಸಿಸಿಬಿ

ವಿಚಾರಣೆ ಎದುರಿಸಿದ್ದ ಆರೋಪಿಗೆ ‘ಕೋವಿಡ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರ ಹಾಸಿಗೆ ಬ್ಲಾಕಿಂಗ್ ಜಾಲದ ಬೆನ್ನು ಬಿದ್ದಿರುವ ಸಿಸಿಬಿ ಪೊಲೀಸರು, ಎಚ್‌ಎಸ್‌ಆರ್ ಬಡಾವಣೆಯ ಕೋವಿಡ್ ವಾರ್ ರೂಂನಲ್ಲಿದ್ದ ಬಾಬು ಎಂಬಾತನನ್ನು ಶುಕ್ರವಾರ ವಿಚಾರಣೆಗೆ ಒಳಪಡಿಸಿರುವುದಾಗಿ ಗೊತ್ತಾಗಿದೆ. ಆದರೆ, ವಿಚಾರಣೆ ಮುಗಿದ ಕೆಲವೇ ಗಂಟೆಗಳಲ್ಲಿ ‘ಕೊರೊನಾ ಪಾಸಿಟಿವ್’ ಎಂದು ಹೇಳಿ ಬಾಬು ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಗರದ ಪ್ರತಿಯೊಂದು ವಲಯಗಳಲ್ಲಿ ತೆರೆಯಲಾಗಿರುವ ವಾರ್ ರೂಮ್‌ಗಳ ಮೂಲಕ ನಡೆಯುತ್ತಿದ್ದ ಅಕ್ರಮ ಇತ್ತೀಚೆಗಷ್ಟೇ ಬಯಲಾಗಿತ್ತು. ಈ ಸಂಬಂಧ ಜಯನಗರ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್ಐಆರ್ ದಾಖಲಾಗಿ, ವೈದ್ಯರು ಸೇರಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದರು. ಇದರ ಬೆನ್ನಲ್ಲೇ ವಾರ್‌ರೂಮ್‌ಗಳ ಮೇಲೂ ದಾಳಿ ಮಾಡಿ ದಾಖಲೆ ಸಂಗ್ರಹಿಸಿದ್ದರು.

> ಪ್ರಕರಣದ ಪ್ರಮುಖ ಆರೋಪಿ ಸುಳಿವು ಸಿಕ್ಕಿದ್ದು, ಆತನ ಜೊತೆಯಲ್ಲಿ ಹಲವರ ವಿಚಾರಣೆ ನಡೆದಿದೆ. ಹಾಸಿಗೆ ಬ್ಲಾಕಿಂಗ್ ಸಂಬಂಧ ದತ್ತಾಂಶಗಳನ್ನೂ ಸಂಗ್ರಹಿಸಿ, ಪರಿಶೀಲನೆ ನಡೆಸಲಾಗುತ್ತಿದೆ
>
> **ಸಂದೀಪ್ ಪಾಟೀಲ,** ಸಿಸಿಬಿಯ ಜಂಟಿ ಕಮಿಷನರ್

ಬಂಧಿತರು ನೀಡಿರುವ ಹೇಳಿಕೆ ಹಾಗೂ ದಾಖಲೆ ಆಧರಿಸಿ ತನಿಖೆ ಮುಂದುವರಿಸಿರುವ ಪೊಲೀಸರು, ವೈದ್ಯರು ಸೇರಿದಂತೆ 18 ಮಂದಿಯನ್ನು ಶುಕ್ರವಾರ ವಿಚಾರಣೆಗೆ ಒಳಪಡಿಸಿ ಹೇಳಿಕೆ ಪಡೆದಿದ್ದಾರೆ.

‘ಅಕ್ರಮದಲ್ಲಿ ಭಾಗಿಯಾಗಿರುವ ಹಾಗೂ ಅಕ್ರಮದ ಬಗ್ಗೆ ಮಾಹಿತಿಯುಳ್ಳ ವ್ಯಕ್ತಿಗಳ ಪಟ್ಟಿ ಸಿದ್ಧಪಡಿಸಲಾಗಿದೆ. ಅವರೆಲ್ಲರಿಗೂ ನೋಟಿಸ್ ನೀಡಿ ವಿಚಾರಣೆಗೆ ಕರೆಯಲಾಗುತ್ತಿದೆ. ಶುಕ್ರವಾರವೂ 18 ಮಂದಿ ವಿಚಾರಣೆಗೆ ಬಂದಿದ್ದರು. ಶನಿವಾರವೂ ಕೆಲವರನ್ನು ವಿಚಾರಣೆಗೆ ಒಳಪಡಿಸಬೇಕಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ವಾರ್ ರೂಮ್‌ಗಳ ಉಸ್ತುವಾರಿ ಹಾಗೂ ಸಿಬ್ಬಂದಿಯನ್ನೂ ವಿಚಾರಣೆ ನಡೆಸಲಾಗಿದೆ. ವಾರ್ ರೂಮ್ ಸಿಸಿಟಿವಿ ಕ್ಯಾಮೆರಾ ಡಿವಿಆರ್ ಜಪ್ತಿ ಮಾಡಲಾಗಿದ್ದು, ವಾರ್ ರೂಮ್‌ಗೆ ಬಂದು ಹೋದವರೆಲ್ಲರ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದೂ ತಿಳಿಸಿವೆ.

‘ಪ್ರಕರಣದಲ್ಲಿ ಭಾಗಿಯಾದ ಆರೋಪದಡಿ ಬಾಬು ಎಂಬಾತನನ್ನು ವಿಚಾರಣೆ ನಡೆಸಿ ಕಳುಹಿಸಲಾಗಿದೆ. ಆದರೆ, ಕೊರೊನಾ ಪಾಸಿಟಿವ್ ಬಂದಿರುವುದಾಗಿ ಹೇಳಿ ಆತ ಆಸ್ಪತ್ರೆ ಸೇರಿದ್ದಾನೆ. ಹಾಸಿಗೆ ಬ್ಲಾಕಿಂಗ್ ದಂಧೆಯಲ್ಲಿ ಆತನ ಪಾತ್ರವೇನು ಎಂಬುದನ್ನು ತಿಳಿದುಕೊಳ್ಳಲು ಮತ್ತೊಮ್ಮೆ ವಿಚಾರಣೆಗೆ ಒಳಪಡಿಸಬೇಕಿದೆ’ ಎಂದೂ ಹೇಳಿವೆ.

ಬಂಧಿತರು 14 ದಿನ ಕಸ್ಟಡಿಗೆ: ‘ದಕ್ಷಿಣ ವಲಯದ ವಾರ್ ರೂಮ್ ಉಸ್ತುವಾರಿ ಡಾ. ರಿಹಾನ್, ಬೊಮ್ಮನಹಳ್ಳಿ ವಲಯದ ಡಾ. ಶಶಿ, ಬೇಗೂರಿನ ಸಾಮಾಜಿಕ ಕಾರ್ಯಕರ್ತೆ ಎನ್ನಲಾದ ನೇತ್ರಾವತಿ ಹಾಗೂ ಆಕೆಯ ಸ್ನೇಹಿತ ರೋಹಿತ್ ಕುಮಾರ್ ಅವರನ್ನು ಈಗಾಗಲೇ ಬಂಧಿಸಲಾಗಿದೆ. ನಾಲ್ವರನ್ನೂ ಹೆಚ್ಚಿನ ವಿಚಾರಣೆಗಾಗಿ ಮುಂದಿನ 14 ದಿನಗಳವರೆಗೆ ಕಸ್ಟಡಿಗೆ ಪಡೆಯಲಾಗಿದೆ’ ಎಂದೂ ಸಿಸಿಬಿ ಮೂಲಗಳು ತಿಳಿಸಿವೆ.

ಜನಪ್ರತಿನಿಧಿಗಳ ವಿರುದ್ಧ ಎಫ್ಐಆರ್ ದಾಖಲಿಸಲು ಒತ್ತಾಯ

‘ಪ್ರಚೋದನಕಾರಿ ಹೇಳಿಕೆ ನೀಡಿ ಕೋಮು ಸೌಹಾರ್ದಕ್ಕೆ ಧಕ್ಕೆ ತಂದು ಸಮಾಜದ ಸ್ವಾಸ್ಥ್ಯ ಹಾಳು ಮಾಡಲು ಯತ್ನಿಸಿದ ಆರೋಪದಡಿ ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಎಂ.ಸತೀಶ್ ರೆಡ್ಡಿ, ಎಲ್.ಎ. ರವಿಸುಬ್ರಹ್ಮಣ್ಯ, ಉದಯ್ ಗರುಡಾಚಾರ್, ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ಎಫ್ಐಆರ್ ದಾಖಲಿಸಬೇಕು’ ಎಂದು ಒತ್ತಾಯಿಸಿ ವಕೀಲ ವರದರಾಜನ್ ಅವರು ನಗರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

‘ದಕ್ಷಿಣ ವಾರ್ ರೂಮ್‌ಗೆ ಹೋಗಿದ್ದ ಸಂಸದ ಹಾಗೂ ಶಾಸಕರು, ಹಾಸಿಗೆ ಬ್ಲಾಕಿಂಗ್ ವಿಚಾರವಾಗಿ ಮಾತನಾಡಿದ್ದರು. ಅದೇ ಸಂದರ್ಭದಲ್ಲಿ 250 ನೌಕರರ ಪೈಕಿ ಒಂದೇ ಧರ್ಮದ 17 ಮಂದಿ ಹೆಸರನ್ನು ಮಾತ್ರ ಉಲ್ಲೇಖಿಸಿ ಪ್ರಚೋದನಕಾರಿ ಹೇಳಿಕೆ ನೀಡಿದ್ದರು. ಅದನ್ನು ಸಮರ್ಥಿಸಿಕೊಂಡು ಈಶ್ವರಪ್ಪ ಸಹ ಅದೇ ರೀತಿಯಲ್ಲೇ ಹೇಳಿಕೆ ನೀಡಿ ಸೌಹಾರ್ದಕ್ಕೆ ಧಕ್ಕೆ ತರಲು ಯತ್ನಿಸಿದ್ದಾರೆ. ಇವರ ಹೇಳಿಕೆಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ’ ಎಂದೂ ಮನವಿಯಲ್ಲಿ ವರದರಾಜನ್ ಹೇಳಿದ್ದಾರೆ.

ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿರುವ ನಿವೃತ್ತ ಪ್ರಾಂಶುಪಾಲ ಕೆ.ಇ. ರಾಧಾಕೃಷ್ಣ, ‘ವಾರ್‌ರೂಮ್‌ನಲ್ಲಿ ಮದರಸಾ ನಡೆಸುತ್ತಿದ್ದೀರಾ’ ಎಂದು ಪ್ರಚೋದನಾಕಾರಿ ಹೇಳಿಕೆ ನೀಡಿರುವ ಜನಪ್ರತಿನಿಧಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ’ ಎಂದು ಒತ್ತಾಯಿಸಿದ್ದಾರೆ.

‘ಮುಸ್ಲಿಮರ ಮೇಲೆ ಗೂಬೆ ಕೂರಿಸುವ ಹುನ್ನಾರ’

ಬೆಂಗಳೂರು: ‘ಬಿಜೆಪಿ ಸಂಸದ ಹಾಗೂ ಶಾಸಕರು ಹಾಸಿಗೆ ಬ್ಲಾಕ್ ದಂಧೆ ಬಯಲು ಮಾಡಿದ್ದರ ಹಿಂದೆ ಕೋವಿಡ್ ವಾರ್ ರೂಮ್‌ನಲ್ಲಿ ಕೆಲಸ ಮಾಡುತ್ತಿದ್ದ ಮುಸ್ಲಿಂ ಸಮುದಾಯದ ಸಿಬ್ಬಂದಿ ಮೇಲೆ ಆರೋಪ ಹೊರಿಸುವ ದುರುದ್ದೇಶ ಅಡಗಿತ್ತು. ತನಿಖೆಗೂ ಮುನ್ನವೇ ಮುಸ್ಲಿಂ ಸಮುದಾಯಕ್ಕೆ ಸೇರಿದ್ದ 17 ಮಂದಿಯನ್ನು ನಿಂದಿಸಿದ್ದರು. ನಂತರ ನ್ಯಾಯಾಧೀಶರಂತೆ ತೀರ್ಪು ನೀಡಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಆರೋಪಿಸಿದ್ದಾರೆ.

‘ಸಂಸದ ತೇಜಸ್ವಿ ವಾರ್ ರೂಂ ಅಧಿಕಾರಿಗಳ ಎದುರೇ 17 ಮಂದಿಯ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಅವರನ್ನು ಸೇವೆಯಿಂದ ವಜಾ ಮಾಡುವಂತೆ ಆದೇಶಿಸಿದ್ದಾರೆ. ದಕ್ಷಿಣ ವಲಯದ ಅಧಿಕಾರಿಗಳು ಇದನ್ನು ಪಾಲಿಸಿದ್ದಾರೆ. ಈ ನಡೆ ಕಾನೂನು ದೃಷ್ಟಿಯಲ್ಲಿ ದೊಡ್ಡ ಅಪರಾಧ’ ಎಂದಿದ್ದಾರೆ.

‘ತಮ್ಮ ಜೊತೆಗಿದ್ದ ಶಾಸಕ ಸತೀಶ್ ರೆಡ್ಡಿಯೇ ಈ ಹಗರಣದ ರೂವಾರಿ ಎಂಬುದು ಗೊತ್ತಾದ ಬಳಿಕ ಸಂಸದರು ಜಾಣ ಮೌನ ವಹಿಸಿದ್ದಾರೆ. ಚಾಮರಾಜನಗರ ಘಟನೆಯನ್ನು ಮರೆಮಾಚುವ ಉದ್ದೇಶದಿಂದಲೇ ಈ ನಾಟಕವಾಡಿದ್ದಾರೆ. ಈ ಹಗರಣದಲ್ಲಿ ಸತೀಶ್ ರೆಡ್ಡಿ ಪಾತ್ರ ಬಹಿರಂಗವಾಗಬೇಕು. ವಜಾಗೊಂಡಿರುವ ಸಿಬ್ಬಂದಿಯನ್ನು ಮತ್ತೆ ಕೆಲಸಕ್ಕೆ ನೇಮಿಸಿಕೊಳ್ಳಬೇಕು’ ಎಂದಿದ್ದಾರೆ.



‘ಸೇವೆಯಿಂದ ಹಿಂಜರಿಯುವ ವೃತ್ತಿಯಲ್ಲ’

ಪ್ರಜಾವಾಣಿ ವಾರ್ತೆ

ಶುಶ್ರೂಷಕರ ಅಂತರಂಗ

ಬೆಂಗಳೂರು: ‘ಕೋವಿಡ್ ಸೇವೆ ಮುಗಿಸಿ ನೇರವಾಗಿ ಮನೆಗೆ ಹೋಗುತ್ತೇನೆ. ಮಗನಿಂದ ಅಂತರ ಕಾಯ್ದುಕೊಂಡರೂ ನನ್ನದು ಪ್ರತ್ಯೇಕ ವಾಸ. ಕೋವಿಡ್ ಯುದ್ಧದಲ್ಲಿ ಹೋರಾಟ ಮಾಡುವಷ್ಟೇ ಗಮನ ಕುಟುಂಬದ ಕಾಳಜಿಯಲ್ಲೂ ಇದೆ’.

ಇದು, ಕೋವಿಡ್ ಸೇವೆಯಲ್ಲಿ ತೊಡಗಿರುವ ಶುಶ್ರೂಷಕ ಅಧಿಕಾರಿ ಲೀಲಾವತಿ ಅವರ ಮಾತುಗಳು.

‘ಕೋವಿಡ್ ಮೊದಲ ಅಲೆಯ ವೇಳೆ ಸೋಂಕಿತರೊಂದಿಗೆ ನೇರವಾಗಿ ಕೆಲಸ ಮಾಡಿದೆ. ಆಗ ಕೋವಿಡ್ ಕೆಲಸ ನನಗೂ ಹೊಸದು. ಅಷ್ಟೇ ಭಯವೂ ಇತ್ತು. ಆದರೆ, ಸೇವೆಯಿಂದ ಹಿಂಜರಿಯುವ ವೃತ್ತಿ ನನ್ನದಲ್ಲ. ಧೈರ್ಯವಾಗಿಯೇ ಕೋವಿಡ್ ಸೇವೆಯಲ್ಲಿ ತೊಡಗಿದೆ’.

‘ಪತಿ ಬೇರೆ ಊರಿನಲ್ಲಿದ್ದಾರೆ. ಮಗ ಮತ್ತು ನಾನು ಬೆಂಗಳೂರಿನಲ್ಲಿದ್ದೇವೆ. ಕಳೆದ ಕೋವಿಡ್ ಅವಧಿ ವೇಳೆ ಮಗನಿಂದ ದೂರ ಉಳಿಯುವುದು ಅನಿವಾರ್ಯವಾಯಿತು. ಅವನಿಗೆ ಮೂರು ಹೊತ್ತಿನ ಆಹಾರ ಸಿಗುವುದೇ ಚಿಂತೆಯಾಗಿತ್ತು. ಹೋಟೆಲ್ ವ್ಯವಸ್ಥೆಯೂ ಸರಿಯಾಗಿ ಇರಲಿಲ್ಲ. ಮೊಬೈಲ್ ಮೂಲಕ ಕರೆ ಮಾಡಿ, ಅಡುಗೆ ಮಾಡಲು ಸಲಹೆಗಳನ್ನು ನೀಡುತ್ತಿದ್ದೆ. ಅವನೂ ನನ್ನ ಸೇವೆಗೆ ಸಹಕಾರ ನೀಡಿದ್ದಾನೆ’.

‘ಆಗ ಎಲ್ಲರಲ್ಲೂ ಕೋವಿಡ್ ಭೀತಿ ಆವರಿಸಿದ್ದ ಸಮಯ. ನಾನು ಕೋವಿಡ್ ಸೇವೆಯಲ್ಲಿದ್ದೇನೆ ಎಂಬ ವಿಚಾರವನ್ನು ಮನೆಯವರನ್ನು ಬಿಟ್ಟು ಎಲ್ಲೂ ಹಂಚಿಕೊಳ್ಳಲಿಲ್ಲ. ಆಗ ನಮ್ಮನ್ನು ನೋಡುವ ದೃಷ್ಟಿಕೋನ ಬೇರೆಯೇ ಇತ್ತು. ನೆರೆಹೊರೆಯವರು ಕೇಳಿದಾಗ ಊರಿನಲ್ಲಿದ್ದೇನೆ ಎಂದು ಸುಳ್ಳು ಹೇಳಿದ್ದೆ. ಸೋಂಕಿತರ ಸಂಬಂಧಿಗಳು ಮೃತಪಟ್ಟಾಗ ಅವರನ್ನು ಕಾಣಲು ಹೊರಹೋಗಲಾರದೆ, ಆಸ್ಪತ್ರೆಯಲ್ಲೇ ಗೋಳಾಡುವುದನ್ನು ನನ್ನಿಂದ ನೋಡಲು ಆಗುತ್ತಿರಲಿಲ್ಲ’.

‘ಮೊದಲ ಹಾಗೂ ಎರಡನೇ ಅಲೆಯ ಸಂದರ್ಭಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಪಿಪಿಇ ಕಿಟ್ ಅನ್ನು ಗಂಟೆಗಟ್ಟಲೆ ಧರಿಸಿ, ನೇರವಾಗಿ ರೋಗಿಗಳೊಂದಿಗೆ ಸೇವೆ ಮಾಡುತ್ತಿದ್ದೆ. ಈಗ ಒಪಿಡಿ ಜೊತೆಗೆ ಆಸ್ಪತ್ರೆಗೆ ಬರುವ ಕೊರೊನಾ ರೋಗಿಗಳಿಗೆ ಮುಂಚಿತವಾಗಿ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡುತ್ತೇನೆ. ಈ ವೇಳೆಯೂ ಸೋಂಕು ಎಲ್ಲಿ, ಹೇಗೆ ಹರಡುವುದೋ ತಿಳಿಯುವುದಿಲ್ಲ. ಮನೆಗೆ ಹೋದ ಕೂಡಲೇ ಎಲ್ಲ ರೀತಿಯ ಸುರಕ್ಷತಾ ಕ್ರಮಗಳನ್ನು ಪಾಲಿಸುತ್ತೇನೆ. ಮಗನೂ ನನಗೆ ಧೈರ್ಯ ತುಂಬುತ್ತಾನೆ’.

‘ಸಕಾರಾತ್ಮಕ ಚಿಂತನೆ, ಧೈರ್ಯದಿಂದ ಮುನ್ನಡೆಯುವ ಮನೋಭಾವ ಎಲ್ಲರಲ್ಲೂ ಮೂಡಿದರೆ, ಈ ಪರಿಸ್ಥಿತಿಯನ್ನು ನಿಯಂತ್ರಿಸಬಹುದು‘.

ಪರಿಚಯ

ಹೆಸರು: ಲೀಲಾವತಿ ಟಿ.
ಊರು: ಚಿತ್ರದುರ್ಗ
ವೃತ್ತಿ: ಶುಶ್ರೂಷಕ ಅಧಿಕಾರಿ
ಸೇವೆ: 23 ವರ್ಷ
ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ: ಸರ್ಕಾರಿ ಹೋಮಿಯೋಪಥಿ ಆಸ್ಪತ್ರೆ, ಬಸವೇಶ್ವರ ನಗರ, ಬೆಂಗಳೂರು

4 ಕಡೆ ಕೋವಿಡ್ ಆರೈಕೆ ಕೇಂದ್ರ

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯದಲ್ಲಿನ ಕೋವಿಡ್ ಆರೈಕೆ ಕೇಂದ್ರವನ್ನು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಮೋಹನ್ ಕುಮಾರ್ ಮತ್ತು ಇತರೆ ಆಧಿಕಾರಿಗಳು ಪರಿಶೀಲಿಸಿದರು.

ನೆಲಮಂಗಲ: ತಾಲ್ಲೂಕಿನಲ್ಲಿ ನಾಲ್ಕು ಕಡೆಗಳಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಲಾಗುತ್ತದೆ.

ತಹಶೀಲ್ದಾರ್ ಮಂಜುನಾಥ್ ಮಾತನಾಡಿ, ’ಪಟ್ಟಣದ ರಾಯನ್ ನಗರದ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯದಲ್ಲಿ 120 ಬೆಡ್, ಅರ್ಜುನಬೆಟ್ಟಹಳ್ಳಿಯಲ್ಲಿ 100 ಬೆಡ್, ವಿಶ್ವೇಶ್ವರಪುರ ಟಿಬೆಟಿಯನ್ ಕೌಶಲ ತರಬೇತಿ ಕೇಂದ್ರದಲ್ಲಿ 120 ಬೆಡ್ ವ್ಯವಸ್ಥೆ ಮಾಡಲಾಗಿದೆ. ಶಿವಗಂಗೆಯ ಹೊನ್ನಮ್ಮಗವಿ ಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸ್ವತಃ ತಾವೇ ತಮ್ಮ ಮಠದ ಕಾಲೇಜನ್ನು ನೀಡುವುದಾಗಿ ಮತ್ತು ಮಠದಿಂದ ಉಚಿತವಾಗಿ ಊಟೋಪಚಾರ ನೋಡಿಕೊಳ್ಳುವುದಾಗಿ ತಿಳಿಸಿರುವುದರಿಂದ ಅಲ್ಲಿಯೂ 80ಕ್ಕೂ ಹೆಚ್ಚು ಬೆಡ್‌ಗಳ ವ್ಯವಸ್ಥೆ ಮಾಡಲಾಗುತ್ತಿದೆ; ಎಂದರು.

ವ್ಯಾಪಾರಿಗಳ ಆಕ್ರೋಶ: ’ಕೋವಿಡ್ ಪರಿಷ್ಕೃತ ಮಾರ್ಗಸೂಚಿಯ ಪ್ರಕಾರ ಮಧ್ಯಾಹ್ನ 12ರ ವರೆಗೂ ವಹಿವಾಟು ನಡೆಸಲು ಅವಕಾಶವಿದ್ದರೂ ಪೊಲೀಸರು ಬೆಳಿಗ್ಗೆ 10ಕ್ಕೆ ಅಂಗಡಿಗಳನ್ನು ಮುಚ್ಚಿಸುತ್ತಿದ್ದಾರೆ. ಕೆಲವು ಅಂಗಡಿಗಳನ್ನು ವಹಿವಾಟು ನಡೆಸಲು ಬಿಡುತ್ತಾರೆ ಕೆಲವನ್ನು ಮುಚ್ಚುತ್ತಾರೆ, ಯಾಕೆ ಈ ತಾರತಮ್ಯ; ಎಂದು ವ್ಯಾಪಾರಸ್ಥರು ಪ್ರಶ್ನಿಸಿದ್ದಾರೆ.

ವ್ಯಾಪಾರಿ ಆರ್.ಉಮಾಶಂಕರ್, ’ಪೊಲೀಸರು ವ್ಯಾಪಾರಸ್ಥರನ್ನು ಏಕವಚನದಲ್ಲಿ ಬೆದರಿಸಿ ಅಂಗಡಿಗಳನ್ನು ಮುಚ್ಚಿಸುತ್ತಾರೆ. ಕೆಲವು ಅಂಗಡಿಗಳನ್ನು ಮುಚ್ಚಿಸುವುದು ಮತ್ತು ಕೆಲವನ್ನು ವ್ಯವಹರಿಸಲು ಬಿಡುವುದನ್ನು ನೋಡಿದರೆ ಕೆಲವು ಪೊಲೀಸರು ಕೆಲವು ವ್ಯಾಪಾರಸ್ಥರ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂಬ ಗುಮಾನಿ ಮೂಡುತ್ತದೆ‘ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಮ್ಲಜನಕ ಹಾಸಿಗೆ ವ್ಯವಸ್ಥೆ

ಬೆಂಗಳೂರು: ನಗರದಲ್ಲಿರುವ ಕೋವಿಡ್ ಆರೈಕೆ ಕೇಂದ್ರಗಳು ಹಾಗೂ ಪಾಲಿಕೆಯ ಹೆರಿಗೆ ಆಸ್ಪತ್ರೆಗಳನ್ನು ‘ಸ್ಥಿರೀಕರಣ ಕೇಂದ್ರ’ಗಳನ್ನಾಗಿ ಪರಿವರ್ತಿಸಲಾಗಿದ್ದು, ಇಲ್ಲಿ ಆಮ್ಲಜನಕ ಸಿಲಿಂಡರ್ ವ್ಯವಸ್ಥೆ ಹಾಗೂ ಆಮ್ಲಜನಕ ಕಾನ್ಸಂಟ್ರೇಟರ್‌ಗಳ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

‘ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಒಟ್ಟು 531 ಹಾಗೂ ಹೆರಿಗೆ ಆಸ್ಪತ್ರೆಗಳಲ್ಲಿ 254 ಹಾಸಿಗೆಗಳಿಗೆ ಆಮ್ಲಜನಕ ವ್ಯವಸ್ಥೆ ಕಲ್ಪಿಸಲಾಗುತ್ತದೆ’ ಎಂದು ಬಿಬಿಎಂಪಿ ಹೇಳಿದೆ.

ಹೆರಿಗೆ ಆಸ್ಪತ್ರೆಗಳಲ್ಲಿ ಈಗಾಗಲೇ 166 ಹಾಸಿಗೆಗಳಿಗೆ ಆಮ್ಲಜನಕ ಸಿಲಿಂಡರ್‌ಗಳ ವ್ಯವಸ್ಥೆ ಹಾಗೂ 15 ಹಾಸಿಗೆಗಳಿಗೆ ಆಮ್ಲಜನಕ ಕಾನ್ಸಂಟ್ರೇಟರ್‌ಗಳು ಸೇರಿದಂತೆ 181 ಹಾಸಿಗೆಗಳಿಗೆ ಆಮ್ಲಜನಕ ವ್ಯವಸ್ಥೆ ಮಾಡಲಾಗಿದ್ದು, ಇಬ್ಬರು ಆಮ್ಲಜನಕ ವ್ಯವಸ್ಥೆ ಪಡೆಯುತ್ತಿದ್ದಾರೆ. 179 ಆಮ್ಲಜನಕ ಹಾಸಿಗೆಗಳು ಲಭ್ಯವಿರುತ್ತದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅಲ್ಪ ಮತ್ತು ಮಧ್ಯಮ ಪ್ರಮಾಣದ ಲಕ್ಷಣಗಳುಳ್ಳ ಸೋಂಕಿತರ ಚಿಕಿತ್ಸೆಗಾಗಿ ಮತ್ತು ಮನೆಯಲ್ಲಿ ಅಥವಾ ಪ್ರತ್ಯೇಕಕೊಠಡಿ ವ್ಯವಸ್ಥೆ ಇಲ್ಲದವರಿಗಾಗಿ ಪಾಲಿಕೆ 8 ವಲಯಗಳಲ್ಲಿ 14 ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಿ ನಿರ್ವಹಿಸಲಾಗುತ್ತಿರುತ್ತದೆ. ಇದರಲ್ಲಿ ಒಟ್ಟು 2,064 ಹಾಸಿಗೆ ಸಾಮರ್ಥ್ಯ ಇದ್ದು, 410 ಹಾಸಿಗೆಗಳು ಭರ್ತಿಯಾಗಿದೆ.

ಈ ಕೇಂದ್ರಗಳಲ್ಲಿನ ಹಾಸಿಗೆಗಳ ಪೈಕಿ ಕನಿಷ್ಠ ಶೇ.20 ರಷ್ಟು ಆಮ್ಲಜನಕ ಸಹಿತ ಹಾಸಿಗೆಗಳನ್ನಾಗಿ ಪರಿವರ್ತಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

ಈ ಕೇಂದ್ರಗಳಲ್ಲಿ 31 ಮಂದಿ ಆಮ್ಲಜನಕ ವ್ಯವಸ್ಥೆ ಪಡೆಯುತ್ತಿದ್ದಾರೆ. 319 ಆಮ್ಲಜನಕ ಹಾಸಿಗೆಗಳು ಲಭ್ಯ ಇವೆ ಎಂದೂ ಬಿಬಿಎಂಪಿ ಹೇಳಿದೆ.



ಲಸಿಕೆ ಇಲ್ಲ: ಸಾಲಿನಲ್ಲಿ ನಿಲ್ಲುವುದು ತಪ್ಪಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಲಸಿಕೆ ದಾಸ್ತಾನು ಇಲ್ಲದ ಕಾರಣ ಯಾರೂ ಸಹ ಸರತಿ ಸಾಲಿನಲ್ಲಿ ನಿಲ್ಲಬಾರದು’, ‘ವ್ಯಾಕ್ಸಿನ್ ಔಟ್ ಆಫ್ ಸ್ಟಾಕ್’...

ಮುನೇಶ್ವರ ಬ್ಲಾಕ್‌ನಲ್ಲಿರುವ ಆವಲಹಳ್ಳಿ ಆರೋಗ್ಯ ಕೇಂದ್ರದ ಗೇಟ್‌ನ ಮೇಲೆ ಅಂಟಿಸಲಾಗಿದ್ದ ಭಿತ್ತಿಪತ್ರಗಳಿವು.

ಈ ಕೇಂದ್ರದಲ್ಲಿ ಗುರುವಾರ ಒಟ್ಟು 200 ಮಂದಿಗೆ ಲಸಿಕೆ ನೀಡಲಾಗಿತ್ತು. ಹೀಗಾಗಿ ಶುಕ್ರವಾರ ಬೆಳಿಗ್ಗೆಯಿಂದಲೇ ನೂರಾರು ಮಂದಿ ಕೇಂದ್ರದ ಎದುರು ಜಮಾಯಿಸಿದ್ದರು. ಅಂತರ ನಿಯಮವನ್ನು ಗಾಳಿಗೆ ತೂರಿ, ಬಿಸಿಲನ್ನೂ ಲೆಕ್ಕಿಸದೆ ರಸ್ತೆಯಲ್ಲಿ ನಿಂತಿದ್ದ ಇವರಿಗೆ ನಿರಾಸೆ ಕಾಡಿತು.

ಲಸಿಕೆಯ ದಾಸ್ತಾನು ಇಲ್ಲ ಎಂದು ಸಿಬ್ಬಂದಿ ಹೇಳಿದ ಬಳಿಕ ಇವರೆಲ್ಲಾ ಸರ್ಕಾರಕ್ಕೆ ಹಿಡಿ ಶಾಪ ಹಾಕುತ್ತಾ ಮನೆಯ ಹಾದಿ ಹಿಡಿದರು.

‘ಸರ್ಕಾರದಿಂದ ನಮಗೆ ಲಸಿಕೆ ಪೂರೈಕೆಯಾಗಿಲ್ಲ. ಲಭ್ಯವಿದ್ದ ವಯಲ್‌ಗಳನ್ನು ಬಳಸಿ ಒಂದಷ್ಟು ಮಂದಿಗೆ ಲಸಿಕೆ ನೀಡಿದ್ದೇವೆ. ನಿತ್ಯವೂ ನೂರಾರು ಮಂದಿ ಕೇಂದ್ರದ ಎದುರು ಜಮಾಯಿಸುತ್ತಾರೆ. ಅವರನ್ನು ನಿಯಂತ್ರಿಸಲು ಹರ ಸಾಹಸ ಪಡಬೇಕಿದೆ. ಲಸಿಕೆ ಇಲ್ಲ ಎಂದರೂ ಕೇಳುವುದಿಲ್ಲ. ನಮ್ಮ ಜೊತೆ ಸುಮ್ಮನೇ ವಾದ ಮಾಡುತ್ತಾ ನಿಲ್ಲುತ್ತಾರೆ. ಅವರನ್ನು ಸಾಗ ಹಾಕುವುದೇ ದೊಡ್ಡ ಸವಾಲಾಗಿಬಿಟ್ಟಿದೆ’ ಎಂದು ಕೇಂದ್ರದ ಸಿಬ್ಬಂದಿಯೊಬ್ಬರು ತಿಳಿಸಿದರು.

ವಿದ್ಯಾಪೀಠ, ಬನಗಿರಿ, ಕತ್ತರಿಗುಪ್ಪೆ ವಾರ್ಡ್ ಹಾಗೂ ಹೊಂಬೇಗೌಡ ನಗರ, ವಸಂತನಗರಗಳಲ್ಲಿರುವ ಆರೋಗ್ಯ ಕೇಂದ್ರಗಳ ಎದುರೂ ಜನರು ಲಸಿಕೆಗಾಗಿ ಸಾಲುಗಟ್ಟಿ ನಿಂತಿದ್ದರು.

ಚಿತಾಗಾರಗಳ ಎದುರೂ ಸಾಲು: ಕೋವಿಡ್‌ನಿಂದ ಮೃತ ಪಡುತ್ತಿರುವವರ ಸಂಖ್ಯೆ ಏರುಗತಿ ಪಡೆದುಕೊಂಡಿರುವ ಕಾರಣ ಚಿತಾಗಾರಗಳ ಎದುರು ಆಂಬುಲೆನ್ಸ್‌ಗಳು ಸಾಲುಗಟ್ಟಿ ನಿಲ್ಲುವುದು ಮುಂದುವರಿದಿದೆ.

ಗಿಡ್ಡೇನಹಳ್ಳಿ, ಕುರುಬರಹಳ್ಳಿ ಹಾಗೂ ಚಾಮರಾಜಪೇಟೆಯಲ್ಲಿರುವ ಚಿತಾಗಾರಗಳ ಮುಂದೆ ಬೆಳಿಗ್ಗೆಯಿಂದಲೇ ಆಂಬುಲೆನ್ಸ್‌ಗಳು ಜಮಾವಣೆಗೊಂಡಿದ್ದವು. ಮೃತರ ಸಂಬಂಧಿಕರು ಅಂತ್ಯಸಂಸ್ಕಾರ ನೆರವೇರಿಸಲು ತಮ್ಮ ಸರತಿಗಾಗಿ ಕಾಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಆಮ್ಲಜನಕದ ಸೌಲಭ್ಯವಿರುವ ಹಾಸಿಗೆ ಸಿಗದ ಕಾರಣ ರೋಗಿಗಳೊಂದಿಗೆ ಅವರ ಮನೆಯವರು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯುವ ದೃಶ್ಯಗಳೂ ಕಂಡುಬಂದವು.

ಬಿಜೆಪಿ ಪ್ರಮುಖ ನಾಯಕರ ಸಭೆ ಇಂದು

ಬೆಂಗಳೂರು: ಕೋವಿಡ್ ವಿಚಾರವಾಗಿ ಚರ್ಚಿಸಲು ಬಿಜೆಪಿ ಪ್ರಮುಖರ ಸಮಿತಿ ಶನಿವಾರ ಸಂಜೆ 6ಗಂಟೆಗೆ ವರ್ಚುವಲ್ ರೂಪದಲ್ಲಿ ನಡೆಯಲಿದೆ.

ಈ ಸಭೆಯಲ್ಲಿ ಕೋವಿಡ್ ನಿರ್ವಹಣೆ ವಿಚಾರವನ್ನು ಪ್ರಧಾನವಾಗಿ ಚರ್ಚಿಸಲಾಗುವುದು. ಅಲ್ಲದೆ, ಬಿಬಿಎಂಪಿ ಆಸ್ಪತ್ರೆಗಳಲ್ಲಿ ಬೆಡ್ ಬ್ಲಾಕಿಂಗ್ ಹಗರಣದ ಬಗ್ಗೆಯೂ ಚರ್ಚೆ ನಡೆಯಲಿದೆ ಎಂದು ಮೂಲಗಳು ಹೇಳಿವೆ.

ಸರ್ಕಾರ ಮತ್ತು ಪಕ್ಷದ ನಡುವೆ ಸಮನ್ವಯದ ಮೂಲಕ ಕೋವಿಡ್ ರೋಗಿಗಳಿಗೆ ನೆರವಾಗಲು ಕಾರ್ಯತಂತ್ರ ರೂಪಿಸಲು ಚರ್ಚಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯ

ಸಂ: ಬಾ.ಪ.ಪ/ಸಾ.ಸ./01/2021–22 ದಿನಾಂಕ: 06–05–2021

ಸಾರ್ವಜನಿಕ ಪ್ರಕಟಣೆ

ದಿನಾಂಕ: 06–05–2021ರಂದು ಗುರುವಾರ ಆಡಳಿತಾಧಿಕಾರಿಗಳಾದ ಶ್ರೀ ಶಿವರಾಜ್.ಟಿ.ಎಸ್, ಕೆ.ಎ.ಎಸ್. ರವರ ಅಧ್ಯಕ್ಷತೆಯಲ್ಲಿ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯ 2021–22ನೇ ಸಾಲಿನ ನಿರೀಕ್ಷಿತ ಆಯ–ವ್ಯಯವನ್ನು ಈ ಕೆಳಕಂಡಂತೆ ಅನುಮೋದಿಸಲಾಗಿರುತ್ತದೆ.

ವಿವರ	2021–22ನೇ ಸಾಲಿನ ಆಯ–ವ್ಯಯ (ರೂ.ಗಳಲ್ಲಿ)
ಪ್ರಾರಂಭಿಕ ಶಿಲ್ಕು	15,17,554
ರಾಜಸ್ವ ಲೆಕ್ಕ	
ರಾಜಸ್ವ ಜಮೆಗಳು	7,04,60,342
ರಾಜಸ್ವ ಖರ್ಚುಗಳು	4,74,42,352
ರಾಜಸ್ವ ಖಾತೆಯ ಹೆಚ್ಚು/(ಕೊರತೆ)	2,30,17,990
ಬಂಡವಾಳ ಲೆಕ್ಕ	
ಬಂಡವಾಳ ಜಮೆಗಳು	75,00,000
ಬಂಡವಾಳ ಪಾವತಿಗಳು	2,95,05,554
ಬಂಡವಾಳ ಖಾತೆಯ ಮೇಲೆ ಹೆಚ್ಚು/(ಕೊರತೆ)	(2,20,05,544)
ಅಸಮಾನ್ಯ ಲೆಕ್ಕ	
ಅಸಮಾನ್ಯ ಖಾತೆಯ ಜಮೆಗಳು	1,79,19,400
ಅಸಮಾನ್ಯ ಖಾತೆಯ ಪಾವತಿಗಳು	1,76,49,400
ಅಸಮಾನ್ಯ ಖಾತೆಯ ಮೇಲೆ ಹೆಚ್ಚು/(ಕೊರತೆ)	2,70,000
ಒಟ್ಟು ಹೆಚ್ಚು/(ಕೊರತೆ)	12,82,446
ಅಖೈರು ಶಿಲ್ಕು	**28,00,000**

ಸೂಚನೆ:– ಮೇಲ್ಕಂಡ ಅಂದಾಜುಗಳ ಸಂಪೂರ್ಣ ವಿವರಗಳ ಅಗತ್ಯತೆ ಇರುವವರು ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಯವನ್ನು ಸಂಪರ್ಕಿಸಿ, ನಿಗದಿತ ಶುಲ್ಕವನ್ನು ಪಾವತಿಸಿ ಪಡೆಯಬಹುದಾಗಿರುತ್ತದೆ.

ಸಹಿ/–
(ಶ್ರೀ ರಮೇಶ್ ಎಸ್. ಸುಣಗಾರ,) ಕೆ.ಎಂ.ಎ.ಎಸ್.
ಮುಖ್ಯಾಧಿಕಾರಿ,
ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಹಿ/–
(ಶಿವರಾಜ್.ಟಿ.ಎಸ್) ಕೆ.ಎ.ಎಸ್.
ಆಡಳಿತಾಧಿಕಾರಿಗಳು/ತಹಶೀಲ್ದಾರ್,
ಪಟ್ಟಣ ಪಂಚಾಯಿತಿ,ಬಾಶೆಟ್ಟಿಹಳ್ಳಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ
ಜಸ್ಟ್ ಮ್ಯೂಸಿಕ್- ಹಿತಾನುಭವ

ಗುರು ಶಿಷ್ಯರು!
ಬಾಲಮುರಳಿಯವರ ಪಾದ ಸ್ಪರ್ಶಿಸಿ ಆಶೀರ್ವಾದ ಪಡೆಯಲು ಸಾಲಿನಲ್ಲಿ ನಿಂತಿದ್ದ ಶಿಷ್ಯರೆಲ್ಲರೂ ಮುನ್ನುಗ್ಗಿ ಬಿದ್ದರು. ಎಲ್ಲರನ್ನೂ ಎದ್ದಿಸಿ ಆಶೀರ್ವದಿಸಿ ಕಳುಹಿಸಿದರು.
https://bit.ly/3vS9KQ3

ಮಾಸ್ಕ್ ಇಲ್ಲದವರ ಬೆನ್ನು ಹತ್ತಿದ್ದ ಹೆಡ್ ಕಾನ್‌ಸ್ಟೆಬಲ್ ಅಪಘಾತದಲ್ಲಿ ಸಾವು

ಕೊಪ್ಪಳ: ಅಗಳಕೇರಾ ರಸ್ತೆಯಲ್ಲಿ ಮಾಸ್ಕ್ ಧರಿಸದೆ ತೆರಳುತ್ತಿದ್ದ ಬೈಕ್ ಸವಾರರನ್ನು ಹಿಡಿಯಲು ಹೋಗಿ ಮುನಿರಾಬಾದ್ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮಲ್ಲಪ್ಪ ಹಂಚಿನಾಳ (43) ಅಪಘಾತದಲ್ಲಿ ಶುಕ್ರವಾರ ಮೃತಪಟ್ಟಿದ್ದಾರೆ.

'ಅಗಳಕೇರಾ-ಶಿವಪುರ ರಸ್ತೆಯಲ್ಲಿ ಗುರುವಾರ ಸಂಜೆ ಮಾಸ್ಕ್ ಧರಿಸದೇ ಹೋಗುತ್ತಿದ್ದ ಅಪರಿಚಿತ ಬೈಕ್ ಸವಾರರ ಹಿಡಿಯಲು ಬೈಕ್‌ನಲ್ಲಿ ಬೆನ್ನಟ್ಟಿದ್ದು, ಎದುರಿನಿಂದ ಬಂದ ಬೈಕ್ ಡಿಕ್ಕಿ ಹೊಡೆದಿದೆ.

ಪತಿ ಶಾಸಕ, ಪತ್ನಿ ತಹಶೀಲ್ದಾರ್

ಸಾವಿತ್ರಿ

ಬಸವಕಲ್ಯಾಣ (ಬೀದರ್ ಜಿಲ್ಲೆ): ಇಲ್ಲಿನ ತಹಶೀಲ್ದಾರ್ ಆಗಿ ಶಾಸಕ ಶರಣು ಸಲಗರ ಅವರ ಪತ್ನಿ ಸಾವಿತ್ರಿ ಸಲಗರ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಸಾವಿತ್ರಿ ಅವರು ಎರಡು ವರ್ಷಗಳಿಂದ ಇಲ್ಲಿಯೇ ತಹಶೀಲ್ದಾರ್ ಆಗಿದ್ದರು. ಉಪಚುನಾವಣೆ ಕಾರಣ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಶರಣು ಅವರು ಗೆದ್ದು ಶಾಸಕರಾದ ನಂತರ ವಾರದ ಒಳಗಾಗಿ ಮತ್ತೆ ಅವರು ಈ ಸ್ಥಾನಕ್ಕೆ ಮರಳಿದ್ದಾರೆ.

'ಇಲ್ಲಿನ ಸಮಸ್ಯೆ ಬಗ್ಗೆ ಸಾವಿತ್ರಿ ಅವರಿಗೆ ಪೂರ್ಣ ಅರಿವಿದೆ' ಎಂದು ಶರಣು ಸಲಗರ ಹೇಳಿದರು.

'ಪತಿ ಶಾಸಕರಾಗಿ ಅವರ ಕೆಲಸ ಅವರು ಮಾಡುತ್ತಾರೆ. ನನ್ನ ಕಾರ್ಯವನ್ನು ನಾನು ನಿರ್ವಹಿಸುತ್ತೇನೆ' ಎಂದು ಸಾವಿತ್ರಿ ಪ್ರತಿಕ್ರಿಯಿಸಿದರು.

ಧಾರವಾಡ ಜಿಲ್ಲೆಯ ಅಳ್ನಾವರ ಸೇತುವೆ ಜಲಾವೃತ • ಚಿತ್ರದುರ್ಗದಲ್ಲಿ ಬಾಳೆ ಬೆಳೆಗೆ ಹಾನಿ

ಮಳೆ: ಸಿಡಿಲು ಬಡಿದು ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ. ಸಿಡಿಲು ಬಡಿದು ಬಾಲಕಿ ಸೇರಿ ಇಬ್ಬರು ಮೃತಪಟ್ಟಿದ್ದಾರೆ. ಬಾಗಲಕೋಟೆ, ವಿಜಯಪುರ ಜಿಲ್ಲೆಯಲ್ಲಿ ತಲಾ ಎರಡು ಎತ್ತುಗಳು ಸಿಡಿಲು ಬಡಿದು ಮೃತಪಟ್ಟಿವೆ.

ಬಾಗಲಕೋಟೆಯ ಇಳಕಲ್ ಸಮೀಪದ ಚಟ್ನಿಹಾಳ ಗ್ರಾಮದಲ್ಲಿ ಸಿಡಿಲು ಬಡಿದು ಮಲ್ಲಮ್ಮ ಕೊರಕೆರಿ (8) ಮೃತಪಟ್ಟಿದ್ದು, ಇನ್ನಿಬ್ಬರು ಬಾಲಕಿಯರು ಗಂಭೀರವಾಗಿ ಗಾಯಗೊಂಡಿದ್ದಾರೆ. ಜಿಲ್ಲೆಯ ಚೌಡಾಪುರ ಗ್ರಾಮ ಮತ್ತು ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಆಳೂರ ಗ್ರಾಮದಲ್ಲಿ ತಲಾ ಎರಡು ಎತ್ತುಗಳು, ಟಗರು ಸಿಡಿಲಿಗೆ ಸಾವನ್ನಪ್ಪಿವೆ.

ಭಾರಿ ಮಳೆಯಿಂದಾಗಿ ಹುಬ್ಬಳ್ಳಿ ನಗರದ ಹಲವೆಡೆ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿತ್ತು. ಹಳೇ ಹುಬ್ಬಳ್ಳಿ, ಹಗ್ಗೇರಿ, ವೀರಾಪುರ ಓಣಿ, ಅರವಿಂದ ನಗರ, ಕಾರವಾರ ರಸ್ತೆ ಜಲಾವೃತಗೊಂಡಿದ್ದವು. ಅಳ್ನಾವರ ತಾಲ್ಲೂಕಿನ ಕುಂಬಾರಕೊಪ್ಪ ಸೇತುವೆ ಜಲಾವೃತಗೊಂಡು ರಸ್ತೆ ಸಂಚಾರ ಬಂದ್ ಆಗಿತ್ತು, ಸಂಜೆಯಾದರೂ ನೀರು ಸೇತುವೆ ಮೇಲೆ ಹರಿದಿದೆ.

ಬೆಳಗಾವಿ ಮತ್ತು ಗೋಕಾಕ ತಾಲ್ಲೂಕಿನ ವಿವಿಧೆಡೆ ಗುಡುಗು-ಸಿಡಿಲು ಸಹಿತ ಜೋರು ಮಳೆಯಾಯಿತು.

ಯುವಕ ಸಾವು: ಕಲಬುರ್ಗಿ ಜಿಲ್ಲೆ ಆಳಂದ ಬಳಿಯ ಸೀಡ್ಸ್ ಫಾರ್ಮ್ ತಾಂಡಾದಲ್ಲಿ ಶುಕ್ರವಾರ ಸಿಡಿಲು ಬಡಿದು ತಾಂಡಾದ ನಿವಾಸಿ ಅರುಣ ಕಾಂತು ರಾಠೋಡ (18) ಮೃತಪಟ್ಟಿದ್ದು, ಲಖನ್ ವಿಶ್ವನಾಥ ರಾಠೋಡ (14) ಗಾಯಗೊಂಡಿದ್ದಾನೆ. ಅಲ್ಲದೇ ನಾಲ್ಕು ಕುರಿಗಳು ಸಾವನ್ನಪ್ಪಿವೆ. ಆಳಂದ ತಾಲ್ಲೂಕಿನ ವಿವಿಧೆಡೆ ಉತ್ತಮ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ವಿವಿಧೆಡೆ ಹಾಗೂ ತರೀಕೆರೆ ಭಾಗದಲ್ಲಿ ಗುಡುಗು ಸಹಿತ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬಂಟ್ವಾಳ, ಸುಳ್ಯ, ಸುಬ್ರಹ್ಮಣ್ಯದಲ್ಲಿ ಸಾಧಾರಣ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಹೊಸದುರ್ಗ, ಮೊಳಕಾಲ್ಮುರು ತಾಲ್ಲೂಕಿನ ವಿವಿಧೆಡೆ ಬಿರುಗಾಳಿ ಸಹಿತ ಮಳೆಯಾಗಿದೆ. ಬಿರುಗಾಳಿಗೆ ನಾಯಕನಹಟ್ಟಿ, ಶಿರನಕಟ್ಟೆ ಗ್ರಾಮಗಳಲ್ಲಿ ಕೆಲವು ಮನೆಗಳ ಹೆಂಚು, ಶೀಟುಗಳು ಹಾರಿಹೋಗಿವೆ. ಕೆಲವು ರೈತರ ತೆಂಗು, ಅಡಿಕೆ ಮರ ಹಾಗೂ ಬಾಳೆ ಗಿಡ ನೆಲಕ್ಕುರುಳಿವೆ. ಕೆಲವು ಕೋಳಿ ಫಾರಂಗಳಿಗೂ ಹಾನಿಯಾಗಿದೆ.

ಕೊಡಗು ಜಿಲ್ಲೆಯ ಗೋಣಿಕೊಪ್ಪಲು, ಪೊನ್ನಂಪೇಟೆ, ತಿತಿಮತಿ ವ್ಯಾಪ್ತಿಯಲ್ಲಿ ಶುಕ್ರವಾರ ಮಧ್ಯಾಹ್ನ ರಭಸದ ಮಳೆಯಾಗಿದೆ. ವಿರಾಜಪೇಟೆಯಲ್ಲಿ ಸಾಧಾರಣ ಮಳೆ ಸುರಿದಿದೆ.

ಮುಖ್ಯಾಂಶಗಳು
- ವಿವಿಧೆಡೆ ಮಳೆಗೆ ರಸ್ತೆ ಸಂಚಾರ ಅಸ್ತವ್ಯಸ್ತ
- ನೆಲಕ್ಕುರುಳಿದ ತೆಂಗು ಮತ್ತು ಅಡಿಕೆ ಮರಗಳು
- ಬಿರುಗಾಳಿಗೆ ಹಾರಿದ ಮನೆಯ ಹೆಂಚು, ಶೀಟು

ಧಾರವಾಡ ಜಿಲ್ಲೆಯ ಅಳ್ನಾವರ ತಾಲ್ಲೂಕಿನ ಕುಂಬಾರಕೊಪ್ಪ ಸೇತುವೆ ಮೇಲೆ ನೀರು ತುಂಬಿ ಹರಿದು ಸಂಚಾರ ಬಂದ್ ಆಗಿತ್ತು

'ಕೋವಿಡ್ ಕೇರ್ ಕೇಂದ್ರ ಮಾಡಿ'

ಖಾನಾಪುರ: ಬೆಳಗಾವಿಯ ಸುವರ್ಣ-ಸೌಧವನ್ನು ಕೋವಿಡ್ ಕೇರ್ ಕೇಂದ್ರ ಮಾಡಿ, ಅಲ್ಲಿ ಚಿಕಿತ್ಸೆ ನೀಡಬೇಕು ಎಂದು ಕೋರಿ ಶಾಸಕಿ ಅಂಜಲಿ ನಿಂಬಾಳ್ಕರ್ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ವೈಕುಂಠ ಸಮಾರಾಧನೆ

ಶ್ರೀ ಪಿ.ಎಂ. ವಿಶ್ವೇಶ್ವರಸ್ವಾಮಿ
(ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೆಸ್ಕಾಂ)
ಜನನ: 23.01.1956 – ಮರಣ: 27.04.2021
ದಿ|| ಮುದ್ದನ ಮಾದಯ್ಯನವರ ಮಗ (ಮಳವಳ್ಳಿ ತಾಲ್ಲೂಕು, ಪೂರಿಗಾಲಿ ಗ್ರಾಮ) ಪಿ.ಎಂ. ವಿಶ್ವೇಶ್ವರಸ್ವಾಮಿರವರ ಧರ್ಮಪತ್ನಿ ಎಂ.ಎನ್ ಲಲಿತಕುಮಾರಿ ಮಾಡುವ ವಿಜ್ಞಾಪನೆಗಳು ನನ್ನ ಪೂಜ್ಯ ಪತಿಯವರಾದ ಶ್ರೀ. ಪಿ.ಎಂ. ವಿಶ್ವೇಶ್ವರಸ್ವಾಮಿ ರವರು ದಿನಾಂಕ: 27.04.2021 ರಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 08.05.2021ನೇ ಶನಿವಾರ ಮಧ್ಯಾಹ್ನ 12.00 ಗಂಟೆಗೆ ನಮ್ಮ ಸ್ವಗೃಹ ನಂ.192, 1ನೇ ಮುಖ್ಯರಸ್ತೆ, ಕೆನರಾ ಬ್ಯಾಂಕ್ ಹತ್ತಿರ, ಇಸ್ರೋ ಬಡಾವಣೆ, ಬೆಂಗಳೂರು–560078 ಇಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು:
ಮೃತರ ಧರ್ಮಪತ್ನಿ ಶ್ರೀಮತಿ ಎಂ.ಎನ್. ಲಲಿತಕುಮಾರಿ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ನಿಧನ

ಜಿ. ಹೆಚ್. ಪರಮೇಶ್ವರನ್
(12–02–1933 – 06–05–2021) 88 ವರ್ಷ
ಲೇಟ್ ಜಿ. ಹನುಮಂತಪ್ಪನವರ ಮಗ ಇವರು 06–05–2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದು:ಖತಪ್ತ: ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

'ದಬ್ಬಾಳಿಕೆ ಬಿಡಿ: ಕೋಟಾ ನಿಗದಿ ಮಾಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಚಾಮರಾಜನಗರದ ದುರಂತವನ್ನೇ ಮುಂದಿಟ್ಟುಕೊಂಡು, ನೆರೆ ಜಿಲ್ಲೆಯ ಉಸ್ತುವಾರಿ ಸಚಿವರು ಮೈಸೂರಿಗೆ ಬಂದು ಆಮ್ಲಜನಕದ ಸಿಲಿಂಡರ್ ಒಯ್ಯುವುದು ಒಳ್ಳೆಯ ಬೆಳವಣಿಗೆಯಲ್ಲ' ಎಂದು ಸಂಸದ ಪ್ರತಾಪ ಸಿಂಹ ಕಿಡಿಕಾರಿದರು.

'ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ನಾರಾಯಣ ಗೌಡ ಹಾಗೂ ಚಾಮರಾಜನಗರ ಜಿಲ್ಲಾಧಿಕಾರಿಯೇ ಸ್ವತಃ ಪೊಲೀಸ್ ಬೆಂಗಾವಲಿ ನೊಂದಿಗೆ ಮೈಸೂರಿಗೆ ಬಂದು, ಆಮ್ಲಜನಕದ ರೀ ಫಿಲ್ಲಿಂಗ್ ಘಟಕದಿಂದ ಸಿಲಿಂಡರ್ ಕೊಂಡೊಯ್ಯುವುದು ಸರಿಯೇ?' ಎಂದು ಸಂಸದರು ಶುಕ್ರವಾರ ಮಾಧ್ಯಮದವರ ಬಳಿ ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಾಪ ಸಿಂಹ

'ನೆರೆ ಜಿಲ್ಲೆಯ ಉಸ್ತುವಾರಿ ಸಚಿವರು ದಬ್ಬಾಳಿಕೆಯನ್ನು ಬಿಡಬೇಕು. ತಮ್ಮ ಜಿಲ್ಲೆಗೆ ಎಷ್ಟು ಆಮ್ಲಜನಕ ಬೇಕಿದೆ ಎಂಬ ಕೋಟಾವನ್ನು ಸಚಿವ ಸಂಪುಟ ಸಭೆಯಲ್ಲಿ ಮುಖ್ಯ-ಮಂತ್ರಿಯಿಂದಲೇ ನಿಗದಿ ಮಾಡಿಸಿಕೊಳ್ಳಬೇಕು. ಮುಖ್ಯ ಕಾರ್ಯದರ್ಶಿ ಜೊತೆ ಮಾತನಾಡಿ, ಸಮಸ್ಯೆ ಪರಿಹರಿಸಿಕೊಳ್ಳಬೇಕು. ಅದನ್ನು ಬಿಟ್ಟು ಪೊಲೀಸ್ ಬೆಂಗಾವಲಿನೊಂದಿಗೆ ಮೈಸೂರಿಗೆ ಬಂದು, ರೀ ಫಿಲ್ಲಿಂಗ್ ಘಟಕದಲ್ಲಿ ಠಿಕಾಣಿ ಹೂಡುವುದು ಸರಿಯಲ್ಲ' ಎಂದು ತಮ್ಮದೇ ಪಕ್ಷದ ಸಚಿವರ ಕಾರ್ಯ-ವೈಖರಿಯನ್ನು ಖಂಡಿಸಿದರು.

'ಮೈಸೂರಿನಲ್ಲೇನೂ ಆಮ್ಲಜನಕ ಉತ್ಪಾದಿ-ಸುತ್ತಿಲ್ಲ. ನಮ್ಮಲ್ಲೇ ಆಮ್ಲಜನಕದ ಕೊರತೆಯಿದೆ. ಬೇಕಿದ್ದರೆ ನಿಮ್ಮ ಜಿಲ್ಲೆಯ ಕೋಟಾವನ್ನು ನಿಮ್ಮಲ್ಲಿಗೇ ತರಿಸಿಕೊಂಡು ಮರು ಭರ್ತಿ ಮಾಡಿಕೊಳ್ಳಿ. ಅನಗತ್ಯವಾಗಿ ನಮಗೆ ತೊಂದರೆ ಕೊಡಬೇಡಿ. ಇದೇ ರೀತಿ ದಬ್ಬಾಳಿಕೆ ಮುಂದುವರೆಸಿದರೆ, ನಾವೂ ಪ್ರತಿರೋಧಿಸಬೇಕಾಗುತ್ತದೆ. ನಮ್ಮಿಬ್ಬರ ನಡುವೆ ಬೀದಿ ಕಿತ್ತಾಟ ನಡೆಯುವುದು ಬೇಡ. ಮುನ್ನೆಚ್ಚರಿಕೆ ತೆಗೆದುಕೊಳ್ಳಿ' ಎಂದು ಅವರು ಎಚ್ಚರಿಕೆ ನೀಡಿದರು.

ಪೋಕ್ಸೊ ಪ್ರಕರಣ: ಹೈಕೋರ್ಟ್ ವಿಭಾಗೀಯ ಪೀಠದ ಅಭಿಪ್ರಾಯ

ವಿಚಾರಣೆ ವಿಳಂಬ ಜಾಮೀನಿಗೆ ಆಧಾರವಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ದಾಖಲಾಗುವ ಪ್ರಕರಣಗಳ ವಿಚಾ-ರಣೆಯಲ್ಲಿನ ವಿಳಂಬವು ಆರೋಪಿಗೆ ಜಾಮೀನು ಮಂಜೂರು ಮಾಡಲು ಪೂರಕವಾದ ಆಧಾರವಲ್ಲ ಎಂದು ಹೈಕೋರ್ಟ್ ವಿಭಾಗೀಯ ಪೀಠ ಹೇಳಿದೆ.

'ಪೋಕ್ಸೊ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳಲ್ಲಿ ಸಾಕ್ಷಿಯ ಹೇಳಿಕೆ ದಾಖಲು ಮತ್ತು ವಿಚಾರಣೆಗೆ ನಿಗದಿಪಡಿಸಿರುವ ಕಾಲಮಿತಿಯು ಸಂತ್ರಸ್ತ ಮಗುವಿನ ಅನುಕೂಲಕ್ಕಾಗಿ ಮಾತ್ರ ಇರುವ ಅಂಶ' ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ನೇತೃತ್ವದ ವಿಭಾಗೀಯ ಪೀಠ ಸ್ಪಷ್ಟಪ-ಡಿಸಿದೆ.

ಪೋಕ್ಸೊ ಪ್ರಕರಣಗಳಲ್ಲಿ ಜಾಮೀನು ಕೋರಿ ಆರೋಪಿಗಳು ಸಲ್ಲಿಸಿದ್ದ ಅರ್ಜಿಗಳನ್ನು ತಿರಸ್ಕರಿಸಿದ್ದ ಏಕಸದಸ್ಯ ಪೀಠ, ಎರಡು ಪ್ರಮುಖ ವಿಷಯಗಳನ್ನು ಹೆಚ್ಚಿನ ಸ್ಪಷ್ಟನೆಗಾಗಿ ವಿಸ್ತೃತ ಪೀಠಕ್ಕೆ ವರ್ಗಾಯಿಸಿತ್ತು.

ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಸೆಕ್ಷನ್ 164ರ ಅಡಿ ದಾಖಲಿಸುವ ಸಾಕ್ಷ್ಯವನ್ನು ಪೋಕ್ಸೊ ಕಾಯ್ದೆಯ ಸೆಕ್ಷನ್ 35ರ ಅಡಿಯಲ್ಲೂ ಸಾಕ್ಷ್ಯ ಎಂದು ಪರಿಗಣಿಸಬಹು-ದೆ? ಮತ್ತು ಪೋಕ್ಸೊ ಕಾಯ್ದೆಯಲ್ಲಿ ನಿಗದಿಪಡಿಸಿರುವ ಕಾಲಮಿತಿ ಪಾಲನೆಯಾಗದ ಸಂದರ್ಭದಲ್ಲಿ ಆರೋಪಿಗೆ ಜಾಮೀನು ನೀಡಬಹುದೆ? ಎಂಬ ಪ್ರಶ್ನೆಗಳನ್ನು ಏಕಸದಸ್ಯ ಪೀಠವು ವಿಭಾಗೀಯ ಪೀಠಕ್ಕೆ ವರ್ಗಾಯಿಸಿತ್ತು.

ನ್ಯಾಯಾಲಯವು ಪ್ರಕರಣ-ವನ್ನು ವಿಚಾರಣೆಗೆ ಅಂಗೀಕರಿಸಿದ ದಿನದಿಂದ 30 ದಿನಗಳ ಒಳಗಾಗಿ ಸಂತ್ರಸ್ತ ಮಗುವಿನ ಹೇಳಿಕೆ ದಾಖಲಿ-ಸಿಕೊಳ್ಳಬೇಕು. ಒಂದು ವರ್ಷದೊಳಗೆ ವಿಚಾರಣೆ ಪೂರ್ಣಗೊಳಿಸಬೇ-ಕು ಎಂಬ ಅಂಶಗಳು ಪೋಕ್ಸೊ ಕಾಯ್ದೆಯಲ್ಲಿವೆ. ಈ ಎರಡೂ ಅಂಶಗಳ ಆಧಾರದಲ್ಲಿ ಆರೋಪಿಗೆ ಜಾಮೀನು ಮಂಜೂರು ಮಾಡಬಹುದೆ ಎಂಬ ಪ್ರಶ್ನೆಯ ಕುರಿತು ವಿಭಾಗೀಯ ಪೀಠ ವಿಚಾರಣೆ ನಡೆಸಿತ್ತು.

'ಸಿಆರ್‌ಪಿಸಿ ಸೆಕ್ಷನ್ 164ರ ಅಡಿಯಲ್ಲಿ ದಾಖಲಿಸುವ ಹೇಳಿಕೆಯನ್ನು ಪೋಕ್ಸೊ ಕಾಯ್ದೆಯ ಸೆಕ್ಷನ್ 35ರ ಅಡಿಯಲ್ಲಿ ಸಮಾನವಾಗಿ ಪರಿಗಣಿಸುವಂತಿಲ್ಲ. ಸಿಆರ್‌ಪಿಸಿ ಅಡಿಯಲ್ಲಿ ತನಿಖೆಯ ವೇಳೆಯಲ್ಲಿ ಹೇಳಿಕೆ ದಾಖಲಿಸಲಾಗುತ್ತದೆ. ಆದರೆ, ಪೋಕ್ಸೊ ಕಾಯ್ದೆಯ ಸೆಕ್ಷನ್ 35ರ ಅಡಿಯಲ್ಲಿ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆಯ ವೇಳೆ ಹೇಳಿಕೆ ದಾಖ-ಲಿಸಲಾಗುತ್ತದೆ. ಹೇಳಿಕೆ ದಾಖಲು ಮತ್ತು ವಿಚಾರಣಾ ಅವಧಿಯ ಆಧಾರದಲ್ಲಿ ಆರೋಪಿಗೆ ಜಾಮೀನು ಮಂಜೂರು ಮಾಡುವುದು ಸಂತ್ರಸ್ತ ಮಗುವಿನ ಹಿತಾಸಕ್ತಿ ರಕ್ಷಣೆಗೆ ವಿರುದ್ಧವಾದ ನಡೆಯಾಗುತ್ತದೆ' ಎಂದು ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ.

'ಕಾಯ್ದೆಯಲ್ಲಿ ನಿಗದಿಪಡಿಸಿರುವ ಕಾಲಮಿತಿಯನ್ನೇ ಆಧಾರವಾಗಿಟ್ಟು-ಕೊಂಡು ಆರೋಪಿಗೆ ಜಾಮೀನು ಮಂಜೂರು ಮಾಡಬಹುದು ಎಂಬ ವ್ಯಾಖ್ಯಾನ ಮಾಡಿದರೆ ಎಲ್ಲರೂ ಉದ್ದೇಶಪೂರ್ವಕವಾ-ಗಿ ವಿಚಾರಣೆ ವಿಳಂಬವಾಗುವಂತೆ ಮಾಡಿ ಜಾಮೀನು ಪಡೆದುಕೊಳ್ಳಲು ಯತ್ನಿಸುತ್ತಾರೆ. ಇಂತಹ ಪ್ರಯತ್ನಗಳನ್ನು ಉತ್ತೇಜಿಸಬಾರದು. ಅದು ಪೋಕ್ಸೊ ಕಾಯ್ದೆಯ ಮೂಲ ಉದ್ದೇಶಕ್ಕೆ ವಿರುದ್ಧವಾದುದೂ ಹೌದು' ಎಂದು ನ್ಯಾಯಪೀಠ ಹೇಳಿದೆ.

ಈಗ ಇರುವ ಸಂಖ್ಯೆಯ ವಿಶೇಷ ನ್ಯಾಯಾಲಯಗಳಲ್ಲಿ ಎಲ್ಲ ಪೋಕ್ಸೊ ಪ್ರಕರಣಗಳ ವಿಚಾರಣೆಯನ್ನೂ ಒಂದು ವರ್ಷದೊಳಗೆ ಪೂರ್ಣಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಅಗತ್ಯ ಸಂಖ್ಯೆಯ ವಿಶೇಷ ನ್ಯಾಯಾಲಯಗಳನ್ನು ಅಸ್ತಿತ್ವಕ್ಕೆ ತಂದು, ಅವುಗಳಿಗೆ ಬೇಕಾದ ಮೂಲಸೌಕರ್ಯ ಮತ್ತು ಸಿಬ್ಬಂದಿಯನ್ನು ಒದಗಿಸಬೇಕು ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ನಿಧನ ವಾರ್ತೆ

ಗಂಗಾಬಾಯಿ ದೇಸಾಯಿ

ಹಾಸನ: ಕೌದಿ ಕಲಾವಿದೆ ಗಂಗಾಬಾಯಿ ದೇಸಾಯಿ (75) ಅವರು ಶುಕ್ರವಾರ ಹೃದಯಾಘಾತದಿಂದ ನಿಧನರಾದರು.

ಪತಿ ಸಂಗಪ್ಪ ದೇಸಾಯಿ, ಚಿತ್ರ ಕಲಾವಿದ ಬಿ.ಎಸ್.ದೇಸಾಯಿ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಸಂಜೆ ಜವೇನಹಳ್ಳಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಗಂಗಾಬಾಯಿ ಅವರು ಕೌದಿ ಕಲೆಯನ್ನು ತಮ್ಮ ನೈಪುಣ್ಯತೆಯಿಂದ ಜೀವಂತವಾಗಿಟ್ಟಿದ್ದರು. ಮೈಸೂರು, ಬೆಂಗಳೂರು, ಮಂಗಳೂರು ಸೇರಿ ಹಲವೆಡೆ ಕೌದಿ ಪ್ರದರ್ಶನ ಏರ್ಪಡಿಸಿ-ದ್ದರು. ಅವರ ಸೇವೆ ಗುರುತಿಸಿ ಹಲವು ಸಂಘ, ಸಂಸ್ಥೆಗಳು ಗೌರವಿಸಿದ್ದವು. ಬಸವನ ಬಾಗೇವಾಡಿ ಬಳಿಯ ಚೀರ-ಲದಿನ್ನಿಯವರಾದ ಅವರು, ಹಾಸನದ ವಿದ್ಯಾನಗರದಲ್ಲಿ ತಮ್ಮ ಪುತ್ರರೊಂದಿಗೆ ನೆಲೆಸಿದ್ದರು.

ಡಾ.ವಿಠಲ ಭಂಡಾರಿ

ಕಾರವಾರ: 'ಸಂವಿಧಾನ ಓದು' ಅಭಿಯಾನದ ಮೂಲಕ ಪ್ರಸಿದ್ಧರಾಗಿದ್ದ ಸಿದ್ದಾಪುರದ ಎಂ.ಜಿ.ಸಿ ಮತ್ತು ಜಿ.ಎಚ್.ಡಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ವಿಠಲ ಭಂಡಾರಿ (50) ಅವರು ಶುಕ್ರವಾರ ನಿಧನರಾದರು.

ಅವರು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಕೋವಿಡ್ ಸೋಂಕಿಗೆ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತ್ನಿ, ಹೋರಾಟಗಾರ್ತಿ ಯಮುನಾ ಗಾಂವ್ಕರ್, ಇಬ್ಬರು ಸಹೋದರಿಯರು ಇದ್ದಾರೆ.

ಸಾಹಿತಿ ಆರ್.ವಿ.ಭಂಡಾರಿ ಅವರ ಪುತ್ರರಾಗಿರುವ ವಿಠಲ ಭಂಡಾರಿ, ಹುಟ್ಟೂರು ಹೊನ್ನಾವರದ ಕೆರೆಕೋಣದ 'ಸಹಯಾನ', 'ಚಿಂತನ ಉತ್ತರ ಕನ್ನಡ' ಸೇರಿದಂತೆ ವಿವಿಧ ಸಂಘಟನೆಗಳು, ಅಭಿಯಾನಗಳಲ್ಲಿ ಸಕ್ರಿಯರಾಗಿದ್ದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಿತ್ರದುರ್ಗ
ಸಂ: ಕೃಮಾಇ/ಕೃಉಮಾಸ/ಚಿ/116/2021–22 ದಿನಾಂಕ: 05.05.2021
ತಿದ್ದುಪಡಿ ಪ್ರಕಟಣೆ
2021–22ನೇ ಸಾಲಿಗೆ ಈ ಸಮಿತಿಗೆ 20 ಸಂಖ್ಯೆ ವಿವಿಧ ಪ್ರಕಾರದ ಭದ್ರತಾ ಸಿಬ್ಬಂದಿ ಸರಬರಾಜಿಗಾಗಿ ಮತ್ತು ಮಾರುಕಟ್ಟೆ ಪ್ರಾಂಗಣದ ಸ್ವಚ್ಛತೆ ಕೆಲಸ ನಿರ್ವಹಣೆಗಾಗಿ ಈ ಹಿಂದೆ ಪ್ರಕಟಿಸಲಾಗಿದ್ದ ಇ–ಟೆಂಡರ್ ಪ್ರಕಟಣೆಯಲ್ಲಿ ತಿಳಿಸಲಾಗಿದ್ದ ದಿನಾಂಕಗಳನ್ನು ಈ ಕೆಳಕಂಡಂತೆ ಓದಿಕೊಳ್ಳುವುದು.

1	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	21.05.2021ರ ಅಪರಾಹ್ನ 4:00 ಗಂಟೆಯವರೆಗೆ
2	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ	24.05.2021 ಅಪರಾಹ್ನ 4:00 ಗಂಟೆಗೆ
3	ಆರ್ಥಿಕ ಟೆಂಡರ್ ತೆರೆಯುವ ದಿನಾಂಕ	26.05.2021 ಅಪರಾಹ್ನ 4:00 ಗಂಟೆಗೆ

ಸಹಿ/– ಕಾರ್ಯದರ್ಶಿ   ವಾಸಾಸಂಇ/ಚಿತ್ರದುರ್ಗ/087A/ಜೆಎ/2021–22   ಸಹಿ/– ಅಧ್ಯಕ್ಷರು

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.
ಸಂ:ಕಾಪಾಇಂ/ಪಂರಾಇಂ/ವಿ/ದಾ/ಕಿ.ಇಂ/ಟೆಂಡರ್/2021–22/205
ದಿನಾಂಕ: 06.05.2021
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಈ ವಿಭಾಗ ವ್ಯಾಪ್ತಿಯ ದಾವಣಗೆರೆ ಜಿಲ್ಲೆ, 2019–20ನೇ ಸಾಲಿನ 5054–03–337–0–75–059 ಯೋಜನೆ ಅನುಮೋದನೆಯಾದ ಹರಿಹರ ತಾಲ್ಲೂಕಿನ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯ ಹಾಗೂ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಳನ್ನು ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 21.05.2021 ಸಂಜೆ 5.00 ಘಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–250156 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ವಾಸಾಇ/ಡಿವಿಜಿ/78/ ಎಂಸಿಎ/2021–22   ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ದಾವಣಗೆರೆ.

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ) ಬೆಂಗಳೂರು–25.
ದೂರವಾಣಿ: 080–25584102 / 25594893. ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com
ಸಂಖ್ಯೆ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಕಾಂಟ್ರಾಕ್ಟ್/ಟೆಂಡರ್/2021–2022/43 ದಿನಾಂಕ: 07.05.2021
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್ ಕೆಳಕಂಡ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಟೆಂಡರ್‌ನ್ನು ಆಹ್ವಾನಿಸುತ್ತಿದೆ.
ಅ) ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಡಾಗ್ ಕೆನ್ನೆಲ್ಸ್‌ಗಳು, ಆರ್ಮರೀಸ್‌ಗಳು, ಡಿಎಆರ್ ಕಟ್ಟಡಗಳ ನಿರ್ಮಾಣ.
ಆ) ಮೈಸೂರಿನಲ್ಲಿ ಪೊಲೀಸ್ ಅಧೀಕ್ಷಕರ ನಿವಾಸದ ನಿರ್ಮಾಣ.
ಇ) ಮೈಸೂರಿನಲ್ಲಿನ ಪಿಟಿಎಸ್ ಪೆರೇಡ್ ಮೈದಾನಕ್ಕೆ ಕಾಂಪೌಂಡ್ ಗೋಡೆಯ ನಿರ್ಮಾಣ.
ಅಸಕ್ತ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಹುದು.
ಟೆಂಡರ್ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 12.05.2021 ರಿಂದ ಲಭ್ಯವಿರುತ್ತದೆ. "ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್ ಹೊಂದಿದೆ".
ಸೂಚನೆ: ಇನ್ನು ಮುಂದೆ ಟೆಂಡರ್‌ನ ಯಾವುದೇ ಬದಲಾವಣೆ/ಮಾರ್ಪಾಡುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು ಗುತ್ತಿಗೆಗಳು I/c
DIPR/DDU/BCPL/340/2021-22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕುವೆಂಪು ವಿಶ್ವವಿದ್ಯಾನಿಲಯ
ಕುಲಸಚಿವರು (ಮೌಲ್ಯಮಾಪನ) ರವರ ಕಚೇರಿ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ– 577 451, ಶಿವಮೊಗ್ಗ ಜಿಲ್ಲೆ ಕರ್ನಾಟಕ
ದೂರವಾಣಿ : 08282-256166,9483536166, ಇ–ಮೇಲ್:regexamku@gmail.com
ಸಂಖ್ಯೆ:KU/EB/PS-1/EPMS/548/2021-22 ದಿನಾಂಕ: 06.05.2021
ಟೆಂಡರ್ ಅಧಿಸೂಚನೆ
ಕುವೆಂಪು ವಿಶ್ವವಿದ್ಯಾಲಯ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆ ಪ್ರಕಾರ ಹೆಸರಾಂತ ಮಾರಾಟಗಾರರಿಂದ 'ಹೊರಗುತ್ತಿಗೆ ಆಧಾರದ ಮೇಲೆ ಪರೀಕ್ಷಾ ಪ್ರಕ್ರಿಯೆ ನಿರ್ವಹಣಾ ವ್ಯವಸ್ಥೆಗೆ' ಟೆಂಡರ್ ಆಹ್ವಾನಿಸುತ್ತದೆ. ಕರ್ನಾಟಕ ಇ–ಆಡಳಿತ ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡ ಗುತ್ತಿಗೆದಾರರು ಇ–ಟೆಂಡರ್ ಮೂಲಕ ಭಾಗವಹಿಸಬಹುದು. ಟೆಂಡರ್ ದಾಖಲೆಗಳನ್ನು ಇ– ಪ್ರೊಕ್ಯೂರ್ ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ಅರ್ಹ ಟೆಂಡರ್‌ದಾರರು ಇ–ಪ್ರೊಕ್ಯೂರ್ ಮೆಂಟ್ ವೇದಿಕೆ ಅಡಿಯಲ್ಲಿ ಇ–ಪೋರ್ಟಲ್‌ನಲ್ಲಿ ನಿಗಧಿಪಡಿಸಿರುವ ದಿನಾಂಕದಂದು ಪ್ರಸ್ತಾವನೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕುಲಸಚಿವರು, (ಮೌಲ್ಯಮಾಪನ), ದೂರವಾಣಿ ಸಂಖ್ಯೆ 0882–256166 ಮತ್ತು 9483536166 ಇವರನ್ನು ಸಂಪರ್ಕಿಸಬಹುದು.
ಸಹಿ/– ಕುಲಸಚಿವರು (ಮೌಲ್ಯಮಾಪನ)
ವಾ.ಸಾ.ಸಂ.ಇ./ಶಿ/ನಂ.09–05/ಝೇಂಕಾರ್/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟ ಇವರ ಕಛೇರಿ.
ಟೆಂಡರ ಪ್ರಕಟಣೆ
ಸಂಖ್ಯೆ.ಲೋಇ:ಬಾವಿ:ಪಿಬಿ:ಕೆಡಬ್ಲ್ಯೂ:2020–21/356 ದಿನಾಂಕ: 07–05–2021
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಕೆಡಬ್ಲ್ಯೂ–1,2,3,4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ ಅಹ್ವಾನಿಸಲಾಗಿದೆ. ವರ್ಕ ಇಂಡೆಂಟ್ ನಂ: ಸಾಮಾನ್ಯ: 136850, 133204, 130123, 133821, 133804, 134070, 137237, 137180, 136802, 137249.
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತರೂ1289.64 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ.16.86 ಲಕ್ಷಗಳ ವರೆಗಿನಕಾಮಗಾರಿಗಳಿಗೆ ಟೆಂಡರಅಹ್ವಾನಿಸಲಾಗಿದೆ.
ಅ) ಟೆಂಡರ ಆಕ್ಷೇಪಣೆಗಾಗಿ ನಿಗದಿ ಪಡಿಸಿದ ದಿನಾಂಕ : 21–05–2021ರಂದು ಮಧ್ಯಾಹ್ನ5–30 ಘಂಟೆಯವರೆಗೆ
ಬ) ಟೆಂಡರ ಸ್ವೀಕರಿಸುವ ದಿನಾಂಕ : 22–05–2021ರಂದು ಮಧ್ಯಾಹ್ನ 4–00 ಘಂಟೆಯವರೆಗೆ
ಕ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 23–05–2021ರಂದು ಮಧ್ಯಾಹ್ನ4.30 ಘಂಟೆಯವರೆಗೆ
ಡ) ಆರ್ಥಿಕ ಬಿಡ್ ತೆರೆಯುವ ದಿನಾಂಕ : 26–05–2021ರಂದು ಮಧ್ಯಾಹ್ನ4.30 ಘಂಟೆಯವರೆಗೆ
ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://eproc.karnataka.gov.inರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ (ಪೂ), ಸಯ್ಯಾಜಿರಾವ್ ರಸ್ತೆ ಮೈಸೂರು – 570024 ದೂ/ಫ್ಯಾಕ್ಸ್:0821-2418828
ಸಂಖ್ಯೆ: ಮೈನಪಾ/ಕಾಇಂ(ಪೂ)/ಟಿಎನ್–10/2021–22 ದಿನಾಂಕ: 04–05–2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಮೈಸೂರು ನಗರ ಪಾಲಿಕೆಯ ಅನುದಾನಕ್ಕೆ ಸಂಬಂಧಿಸಿದ ಹರಿಶ್ಚಂದ್ರಘಾಟ್ ಸ್ಮಶಾನದಲ್ಲಿನ ಅನಿಲ ಚಿತಾಗಾರದ ವಾರ್ಷಿಕ ನಿರ್ವಹಣೆ ಒಟ್ಟು 01 ಕಾಮಗಾರಿಗೆ ಮೇಲೆ ಕಾಣಿಸಿದ ಉಲ್ಲೇದನ್ವಯ ಟೆಂಡರನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಚೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 10–05–2021ರ ನಂತರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ: 18–05–2021 ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: 19–05–2021 ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರವರ (ಪೂ) ಕಚೇರಿಯಿಂದ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು (ಪೂ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/YC/125/2021-22

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ.)
ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟ್, ಶೇಷಾದ್ರಿ ರೋಡ್, ಎಸ್.ಜೆ.ಪಿ ಕಾಲೇಜ್ ಎದುರು, ಕೆ.ಆರ್.ಸರ್ಕಲ್, ಬೆಂಗಳೂರು–560 001.
ಮಿಂಚ್ ಅಂಚೆ: ad.kdlws@gmail.com, md.ksmscl@gmail.com
No: KSMSCL/EQPT(2)/TND/BLOOD BAGS & KIT/05/2020-21 Date: 07/05/2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಉಲ್ಲೇಖ: ಈ ಕಛೇರಿಯ ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: KSMSCL/EQPT (2)/TND/ BLOOD BAGS & KIT/05/2020-21 (IND-802), dated: 07/05/2021.
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಈ ಕೆಳಕಂಡ ಟೆಂಡರ್‌ಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.
ಸರ್ಕಾರಿ ಆಸ್ಪತ್ರೆಗಳಲ್ಲಿ ರಕ್ತನಿಧಿ ಕೇಂದ್ರಗಳಲ್ಲಿ ರಕ್ತ ಪರೀಕ್ಷೆಗೆಬೇಕಾಗಿರುವ ಕಿಟ್ಸ್‌ಗಳು ಮತ್ತು ರಕ್ತ ಚೀಲಗಳನ್ನು ಖರೀದಿಸಿ ಪೂರೈಸಲು ಇ–ಟೆಂಡರ್ ಕರೆಯುವ ಬಗ್ಗೆ. (IND-802)
ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://eproc.karnataka.gov.in ನಲ್ಲಿ ದಿನಾಂಕ: 07/05/2021ರಿಂದ ಟೆಂಡರ್‌ಗಳ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು ಕೆ.ಎಸ್.ಎಂ.ಎಸ್.ಸಿ.ಎಲ್. ಬೆಂಗಳೂರು.
DIPR/DDU/Zen/RO-344/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

KRISHNA BHAGYA JALA NIGAM LIMITED.
(A.Government of Karnataka Undertaking)
Office of the Executive Engineer, KBJNL NLBC Division., (Irrigation Department) Hunasagi-585215 Tq :Hunasagi, Dist :Yadigir. State:Karnataka Ph/Fax No-08444-200422
IFT. No.: KBJNL/ NLBC/PB/AWP/2021-22/102 Date:-06.05.2021
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಅಡಿ 2021–22ನೇ ಸಾಲಿನ ಕ್ಲೋಸರ ಹಾಗೂ ವಿಶೇಷ ದುರಸ್ತಿಯ ಕಾಮಗಾರಿಗಳು ಅನುಮೋದನೆಗೊಂಡಿರುತ್ತದೆ. ಒಟ್ಟು 26 ಕಾಮಗಾರಿಗಳಿಗೆ Single Cover System ಮುಖಾಂತರ ಟೆಂಡರ ಆಹ್ವಾನಿಸಲಾಗಿದ್ದು Qualification criteria ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ದರ್ಜೆ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಈ ಕಛೇರಿ ಟೆಂಡರು ಪ್ರಕಟಣೆ ಸಂ. 101/2021–22 ದಿನಾಂಕ: 06–05–2021 ಅಡಿಯಲ್ಲಿ ಮೊಹರಾದ ಶೇಕಡಾವಾರು ಟೆಂಡರ್‌ಗಾಗಿ ಇ–ಪ್ರೋಟಲ್ ಮುಖಾಂತರ http://eproc.karnataka.gov.in/eportal/ines.seam ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ

ಕ್ರ.ಸಂ.	ವಿವರ	ಟೆಂಡರ ಪ್ರಕ್ರಿಯೆಯ ದಿನಾಂಕ
1	ಟೆಂಡರ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ	07.05.2021 ರಿಂದ 17.05.2021 ಸಂಜೆ 5.00 ಗಂಟೆಯವರೆಗೆ
2	ಟೆಂಡರನ್ನು ತರೆಯುವ ದಿನಾಂಕ	19–05–2021 ಸಂಜೆ 5.00 ಗಂಟೆಗೆ

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in/eportal/ines.seam ನಲ್ಲಿ, ವೀಕ್ಷಿಸಬಹುದಾಗಿದ್ದು ಹಾಗೂ ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಇವರಿಂದ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ, ಹುಣಸಗಿ.

ಪುಣ್ಯ ಸ್ಮರಣೆ ಮತ್ತು ಶ್ರದ್ಧಾಂಜಲಿ
ಅಗಲಿದ ನಿಮ್ಮ ಪ್ರೀತಿಪಾತ್ರರಿಗೆ ಶ್ರದ್ಧಾಂಜಲಿ ಅರ್ಪಿಸಲು ಅಥವಾ ಅವರನ್ನು ಸ್ಮರಿಸಲು ಇಲ್ಲವೆ ನಿಮ್ಮ ಬಾಂಧವ್ಯದ ಬಂಧದ ಸವಿನೆನಪಿಗಾಗಿ ಅವರಿಗೊಂದು ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸಲು ನೀವು ಬಯಸಿದ್ದಲ್ಲಿ,
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ದಿನಪತ್ರಿಕೆಗಳಲ್ಲಿ ನಿಮ್ಮ ನಿವೇದನೆಗಳನ್ನು ಪ್ರಕಟಿಸಲು ನೀವು ನಮ್ಮನ್ನು ಪರಿಗಣಿಸಬಹುದು ಮತ್ತು ಇದಕ್ಕೆ ಸಂಬಂಧಿತ ಮಾರ್ಗದರ್ಶನ ನೀಡಲು ನಾವು ಸಿದ್ಧರಿದ್ದೇವೆ.
ದಯವಿಟ್ಟು ಸಂಪರ್ಕಿಸಿ:
DH DECCAN HERALD   ಪ್ರಜಾವಾಣಿ
ಸಂತೋಷ್ ಕುಮಾರ್ : 9880856233
ಜೆರ್ರಿ : 9731810277 | ರವಿಚಂದ್ರ : 9901641752
ವಿಶಾಲ್ : 9845114560 | ತನ್ವೀರ್ : 9886213331
ಇ–ಮೇಲ್ : dhclassifieds@deccanherald.co.in

ಕರ್ನಾಟಕ ಸರ್ಕಾರ
ಕಾರ್ಯಕಾರಿ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
Email : eeudp@kpwd.gov.in
ನಂ./ಪಿಡಬ್ಲ್ಯೂಡಿ/ಯುಡಿಎನ್/ಎನ್‌ಐಟಿ–04/2021–22/ಎಇ2 ದಿನಾಂಕ : 30–04–2021
ಟೆಂಡರು ಪ್ರಕಟಣೆ
ಈ ಕೆಳಕಂಡ ಕಾಮಗಾರಿಗಳಿಗೆ 'ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in' ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಕ್ರ.ಸಂ. (1), (2), (3)ಕ್ಕೆ 18–05–2021 ಮತ್ತು ಕ್ರ.ಸಂ. (4), (5)ಕ್ಕೆ 12.05.2021 ಮತ್ತು ಕ್ರ.ಸಂ. (6)ಕ್ಕೆ 21–05–2021ರ ಸಂಜೆ 5.30 ಘಂಟೆವರೆಗೆ. ಅರ್ಹ ಗುತ್ತಿಗೆದಾರರು : ಕ್ರ.ಸಂ. (1), (2), (3), (4), (6)ಕ್ಕೆ 3ನೇ ದರ್ಜೆ ಮತ್ತು ಮೇಲ್ಪಟ್ಟು, ಕ್ರ.ಸಂ. (5)ಕ್ಕೆ 1ನೇ ದರ್ಜೆ ವಿದ್ಯುತ್ ಗುತ್ತಿಗೆದಾರರು ಟೆಂಡರು ಸಲ್ಲಿಸಬಹುದಾಗಿದೆ.

ಕ್ರ.ಸಂ.	ಕಾಮಗಾರಿಯ ಹೆಸರು	ಟೆಂಡರಿಗಿರಿಸಿದ ಅಂದಾಜು ಮೊಬಲಗು (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	2	3	4
1	ಉಡುಪಿ ಜಿಲ್ಲೆ, ಹೆಬ್ರಿ ತಾಲೂಕು, ಹೆಬ್ರಿ ಲೋಕೋಪಯೋಗಿ ಇಲಾಖೆ ಪ್ರವಾಸಿ ಮಂದಿರದ ಆವರಣದಲ್ಲಿರುವ ಹೊಸ ಪ್ರವಾಸಿ ನಿರ್ಮಾಣಕ್ಕೆ (137122)	118.49	ರೂ. 177,800.00
2	ಉಡುಪಿ ತಾಲೂಕಿನ ಹಿರಿಯಡ್ಕ ಕರ್ನಾಟಕ ಪಬ್ಲಿಕ್ ಶಾಲೆಗೆ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿ (137205)	150.49	ರೂ. 225,800.00
3	ಕುಂದಾಪುರ ತಾಲೂಕು ಕುಂದಾಪುರ ಪಟ್ಟಣದಲ್ಲಿರುವ ಚಿಕ್ಕನ್‌ಸಾಲ್ ರಸ್ತೆಯಲ್ಲಿನ ಸರ್ವೆ ನಂಬ್ರ 63/6ಎ2ನಲ್ಲಿ ನಿರ್ಮಾಣವಾಗಿರುವ ಎರಡು ಅಂತಸ್ತಿನ ಮೊಗವೀರ ಸಮುದಾಯ ಭವನದ ಗೋಡೆ, ಫ್ಲೋರಿಂಗ್, ಕಿಟಿಕಿ ಬಾಗಿಲುಗಳು, ಸ್ಯಾನಿಟರಿ ಫಿಟ್ಟಿಂಗ್, ಬಣ್ಣಬಳಿಯುವುದು, ವಿದ್ಯುದ್ದೀಕರಣ, ಆವರಣಗೋಡೆ ಇತ್ಯಾದಿಗಳನ್ನೊಳಗೊಂಡ ಫಿನಿಶಿಂಗ್ ಕಾಮಗಾರಿ (137068)	143.39	ರೂ. 215,100.00
4	ಉಡುಪಿ ಜಿಲ್ಲೆ, ಕಾಪು ವಿಧಾನ ಸಭಾ ಕ್ಷೇತ್ರದ ಪಡುಬಿದ್ರಿ ನಡಿಪಟ್ಣ ಬೀಚ್ ರಸ್ತೆಯ ಎಂಡ್ ಪಾಯಿಂಟ್‌ನಲ್ಲಿ ಸಂಪರ್ಕ ಸೇತುವೆಗೆ ಕೂಡು ರಸ್ತೆ ನಿರ್ಮಾಣ ಕಾಮಗಾರಿ (135526)	66.68	ರೂ. 133,400.00
5	ಉಡುಪಿ ಜಿಲ್ಲೆ, ಕಾಪು ತಾಲೂಕು, ಕಾಪು ಪುರಸಭೆಗೆ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ 40 ಹೆಚ್. ಪಿ. ವಿದ್ಯುತ್ ಸಂಪರ್ಕ ಕಲ್ಪಿಸುವುದು. (136978)	9.03	ರೂ. 22,600.00
6	ಬ್ರಹ್ಮಾವರ ತಾಲೂಕು, ಶಿರಿಯಾರ ಪಡುಮುಂಡು ರಸ್ತೆಯ ಶಶಿಧರ ಮಾಸ್ಟ್ರ ಮನೆ ಹತ್ತಿರ ಸೇತುವೆ ನಿರ್ಮಾಣ	59.17	ರೂ. 119,000.00

ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರು ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಪ್ರಜಾವಾಣಿ ಶನಿವಾರ, 8 ಮೇ 2021

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

5



ಮಮತೆಯನ್ನೂ ಹಿಂದಿಕ್ಕಿದ ಕರ್ತವ್ಯದ ಕರೆ

ಅಮ್ಮಾ.. ಬಾ ಹತ್ತಿರ



ರೇಷ್ಮಾ

ಅಮ್ಮನೆಂದರೆ ಎಣೆಯಿಲ್ಲದ ಪ್ರೀತಿ, ಅಮ್ಮನೆಂದರೆ ವಿಸ್ಮಯ, ಅವಳೆಂದರೆ ಅದ್ಭುತ. ನವಮಾಸ ಕಂದನನ್ನು ಹೊಟ್ಟೆಯಲ್ಲಿಟ್ಟುಕೊಂಡು ಬಸಿರು, ಬಾಣಂತನದ ನೋವು ಹಾಗೂ ಖುಷಿ ಎರಡನ್ನೂ ಸಮಾನವಾಗಿ ಸ್ವೀಕರಿಸುತ್ತಾ ತನ್ನೆಲ್ಲಾ ಜವಾಬ್ದಾರಿಯೊಂದಿಗೆ ಮಗುವನ್ನು ಜತನ ಮಾಡುವ ತಾಯಿ ಎಂದರೆ ಕರುಣಾಸಾಗರಿಯೇ ಸರಿ. ಆದರೆ ತಾಯಿ ತನ್ನ ಮಗುವನ್ನು ಸಲಹಿ ಬೆಳೆಸಲು ಎದುರಿಸುವ ಸವಾಲುಗಳು ಹಲವಾರು. ಅದರಲ್ಲೂ ದುಡಿಯುವ ತಾಯಂದಿರಿಗೆ ಮಕ್ಕಳ ಲಾಲನೆ–ಪಾಲನೆ ಮಾಡುವ ಕಷ್ಟ ಒಂದು ತೂಕ ಹೆಚ್ಚೇ.

ಈ ಕೋವಿಡ್ ಸಂದರ್ಭದಲ್ಲಂತೂ ಮನೆಯಿಂದ ಹೊರಗೆ ದುಡಿಯುವ ತಾಯಂದಿರಿಗೆ ತಮ್ಮ ಮಕ್ಕಳನ್ನು ನಿಭಾಯಿಸುವುದು ನಿಜಕ್ಕೂ ಅತ್ಯಂತ ಕಠಿಣವಾದ ಸವಾಲು. ಪುಟ್ಟ ಕಂದಮ್ಮನನ್ನು ಅಪ್ಪಿ ಮುದ್ದಾಡಲೂ ಸಾಧ್ಯವಾಗದಂತಹ ಸಂದರ್ಭವಿದು. ಕಣ್ಣೆದುರೇ ಕಂದನಿದ್ದರೂ ದೂರದಲ್ಲಿ ನಿಂತು ನೋಡಿ ಸಮಾಧಾನ ಮಾಡಿಕೊಳ್ಳುವುದು ಎಷ್ಟೋ ಅಮ್ಮಂದಿರಿಗೆ ಅನಿವಾರ್ಯವಾಗಿ ಬಿಟ್ಟಿದೆ.

ಈ ದಿನಗಳಲ್ಲಿ ಉದ್ಯೋಗಸ್ಥ ತಾಯಂದಿರು ತಮ್ಮ ಮಕ್ಕಳ ಮೇಲಿನ ಪ್ರೀತಿ– ವಾತ್ಸಲ್ಯ, ಮಮಕಾರಗಳನ್ನು ಬದಿಗಿಟ್ಟು ದುಡಿಯುತ್ತಿದ್ದಾರೆ. ಕರ್ತವ್ಯ ಹಾಗೂ ಮಕ್ಕಳು ಎರಡನ್ನೂ ನಿಭಾಯಿಸುವುದರ ನಡುವೆ ಹಲವು ರೀತಿಯ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ವೈದ್ಯೆಯರು, ನರ್ಸ್‌ಗಳು, ಆಶಾ ಕಾರ್ಯಕರ್ತೆಯರು.. ಹೀಗೆ ಮುಂಚೂಣಿಯಲ್ಲಿರುವವರು ಕಣಕ್ಕಿಳಿದು ಕೋವಿಡ್ ವಿರುದ್ಧ ಹೋರಾಟ ನಡೆಸುತ್ತಿದ್ದರೆ, ಶಿಕ್ಷಕಿಯರದ್ದು ಇನ್ನೊಂದು ಬಗೆಯ ಹೊಣೆಗಾರಿಕೆ. ಮನೆಯೊಳಗೆ ಮಕ್ಕಳನ್ನು ನೋಡಿಕೊಳ್ಳುತ್ತ, ಆನ್‌ಲೈನ್ ತರಗತಿ, ಫೋನ್ ಕರೆಗಳ ಮೂಲಕ ವಿದ್ಯಾರ್ಥಿಗಳನ್ನು ಸಂಪರ್ಕಿಸುತ್ತ ಅವರ ಶಿಕ್ಷಣಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ.

> ಅಮ್ಮನೆಂದರೆ ಎಲ್ಲವನ್ನೂ ಸಹಿಸಬಲ್ಲವಳು. ಈ ಕೋವಿಡ್ ಸಂದರ್ಭದಲ್ಲಂತೂ ದುಡಿಯುವ ತಾಯಿ ತನ್ನ ಮಕ್ಕಳಿಂದ ದೂರ ಇರುವುದನ್ನೂ ಸಹಿಸಬೇಕಾಗಿದೆ. ಕೋವಿಡ್ ಪಿಡುಗಿನ ಮಧ್ಯೆ ಬಂದಿರುವ 'ಅಮ್ಮಂದಿರ ದಿನ' (ಮೇ 9)ದ ಹಿನ್ನೆಲೆಯಲ್ಲಿ ದುಡಿಯುವ ತಾಯಂದಿರು ತಾವು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಹೇಳಿಕೊಂಡಿದ್ದಾರೆ...

ಆದರೆ ಈ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತ, ಒಬ್ಬ ತಾಯಿಯಾಗಿ ದುಡಿಮೆ ಹಾಗೂ ಮಕ್ಕಳು ಎರಡೂ ಬಗೆಯ ಕರ್ತವ್ಯ ನಿಭಾಯಿಸುವ ಬಗೆ ಹೇಗೆ ಎಂಬುದರ ಬಗ್ಗೆ ವಿವಿಧ ಕ್ಷೇತ್ರಗಳ ತಾಯಂದಿರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

'ಮಕ್ಕಳ ಸುರಕ್ಷತೆಯ ಭಯ'

'ನಾನು 2020 ರ ಮಾರ್ಚ್‌ನಿಂದ ಕೋವಿಡ್ ಡ್ಯೂಟಿ ಮಾಡುತ್ತಿದ್ದೇನೆ. ನನ್ನ ಮಕ್ಕಳಿನ್ನೂ ಚಿಕ್ಕವರು. ಅವರನ್ನು ಮನೆಯಲ್ಲಿ ಬಿಟ್ಟು ಹೋಗುವಾಗ ಮನಸ್ಸಿನಲ್ಲಿ ಬೇಸರ ಕಾಡುತ್ತದೆ. ಕೆಲಸಕ್ಕೆ ಹೋಗಿ ಬಂದ ತಕ್ಷಣ ಮಕ್ಕಳ ಜೊತೆ ಬೆರೆಯಲು ಆಗುವುದಿಲ್ಲ. ನನ್ನ ಮಗ ನಾನು ಮನೆಗೆ ಬಂದ ತಕ್ಷಣ ತಬ್ಬಿಕೊಳ್ಳಲು ಬರುತ್ತಾನೆ. ಅವನು ಚಿಕ್ಕವನಾದ ಕಾರಣ ಅವನಿಗೆ ಪರಿಸ್ಥಿತಿ ಅರ್ಥ ಆಗುವುದಿಲ್ಲ. ಆ ಕಾರಣಕ್ಕೆ ನಾನೇ ಅವನಿಂದ ದೂರ ಹೋಗುತ್ತೇನೆ. ಬಂದ ಕೂಡಲೇ ಸ್ನಾನ ಮಾಡಿ ಸ್ಯಾನಿಟೈಸ್ ಮಾಡಿಕೊಳ್ಳುತ್ತೇನೆ. ಮಲಗುವಾಗ ದೂರ ಮಲಗುತ್ತೇನೆ. ಮನೆಯಲ್ಲಿ ಇರುವಾಗಲೂ ಮಾಸ್ಕ್ ಧರಿಸುತ್ತೇನೆ. ಆಕಸ್ಮಿಕವಾಗಿ ನನ್ನಿಂದ ಮಕ್ಕಳಿಗೆ ರೋಗ ತಗಲಿದರೆ ಎಂಬ ಭಯ ಇರುವ ಕಾರಣದಿಂದ ಆದಷ್ಟು ದೂರವೇ ಇರುತ್ತೇನೆ. ಇದೊಂಥರಾ ಮಾನಸಿಕ ಹಿಂಸೆ. ನಮ್ಮ ಕ್ಷೇತ್ರದಲ್ಲಿ ಹಲವು ತಾಯಂದಿರು ವೃತ್ತಿಯ ಸಲುವಾಗಿ ಮಗುವಿಗೆ ಹಾಲೂಡಿಸುವುದನ್ನು ಬಿಟ್ಟಿದ್ದಾರೆ. ಆದರೆ ಈ ಕೆಲಸದಲ್ಲಿ ನಮ್ಮ ಮಕ್ಕಳು, ಕುಟುಂಬದ ಸುರಕ್ಷತೆಯ ಭಯವಿದ್ದರೂ ಆತ್ಮತೃಪ್ತಿ ಇದೆ' ಎನ್ನುತ್ತಾರೆ ಬೆಂಗಳೂರಿನ ಬಿಎಂಸಿಆರ್‌ಐ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನರ್ಸಿಂಗ್ ಆಫೀಸರ್ ಆಗಿರುವ ಸರಿತಾ ಬಿ.ಆರ್.

ಮಗನ ಜೊತೆ ಸಮಯ ಕಳೆಯಲಾಗದ ಅಳಲು

ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯ ವೈದ್ಯೆ ಡಾ. ಸುಷ್ಮಾ ಎಚ್‌.ಆರ್. ತಮ್ಮ ಅನುಭವ ಹೇಳಿಕೊಂಡಿದ್ದು ಹೀಗೆ– 'ಕೋವಿಡ್ ಸಮಯದಲ್ಲಿ ಆಸ್ಪತ್ರೆಗೆ ಹೋಗಿ ರೋಗಿಗಳ ಸೇವೆ ಮಾಡಲೇಬೇಕು. ದಿನವಿಡೀ ಕೋವಿಡ್ ರೋಗಿಗಳ ಜೊತೆ ಕಾಲ ಕಳೆಯುವ ನಮಗೆ ಮನೆಗೆ ಬಂದ ತಕ್ಷಣ ಮಗುವಿನ ಜೊತೆ ಬೆರೆಯಲು ಆಗುವುದಿಲ್ಲ. ಎಷ್ಟೋ ಬಾರಿ 'ಅಮ್ಮಾ..' ಎಂದು ಓಡಿ ಬರುವ ಕಂದನನ್ನು ನೋಡಿದಾಗ ಕರುಳು ಕಿವುಚುತ್ತದೆ. ಆದರೆ ಒಬ್ಬ ವೈದ್ಯೆಯಾಗಿ ಹಾಗೂ ತಾಯಿಯಾಗಿ ನನ್ನ ಮಗನನ್ನು ಸುರಕ್ಷಿತವಾಗಿ ನೋಡಿಕೊಳ್ಳುವುದು ನನ್ನ ಕರ್ತವ್ಯ. ಆ ಕಾರಣಕ್ಕೆ ನಾನು ಅವನನ್ನು ತಕ್ಷಣಕ್ಕೆ ಹತ್ತಿರ ಸೇರಿಸುವುದಿಲ್ಲ. ಮನೆಯಲ್ಲಿ ನನಗೆ ಪತಿ ಹಾಗೂ ಮನೆಯವರ ಸಹಕಾರವಿರುವುದರಿಂದ ಮಗನನ್ನು ನಿಭಾಯಿಸುವುದು ಅಷ್ಟೊಂದು ಕಷ್ಟ ಎನ್ನಿಸುವುದಿಲ್ಲ. ಆದರೂ ತಾಯಿಯಾಗಿ ಮಗುವಿನ ಜೊತೆ ಸಮಯ ಕಳೆಯಲು ಆಗುವುದಿಲ್ಲ ಎಂಬ ಅಳಲಿದೆ'.

ಆನ್‌ಲೈನ್ ಪಾಠದ ಜೊತೆಗೆ ಮಕ್ಕಳಿಗೂ ಓದಿಸಬೇಕು..

'ಒಬ್ಬ ಶಿಕ್ಷಕಿಯಾಗಿ ಮನೆಯ ಮಕ್ಕಳು ಹಾಗೂ ನನ್ನ ವಿದ್ಯಾರ್ಥಿಗಳನ್ನು ನಿಭಾಯಿಸುವುದು ಸವಾಲೇ ಸರಿ. ನಾನು ಗ್ರಾಮೀಣ ಭಾಗದಲ್ಲಿ ಶಿಕ್ಷಕಿಯಾಗಿರುವ ಕಾರಣ ತಂತ್ರಜ್ಞಾನದ ಮೂಲಕ ಮಕ್ಕಳನ್ನು ತಲುಪುವುದು ಕಷ್ಟ. ನಾನು ಗೂಗಲ್ ಡಾಕ್ಯುಮೆಂಟ್ ಮೂಲಕ, ಫೋನ್ ಕರೆಯ ಮೂಲಕ ವಿದ್ಯಾರ್ಥಿಗಳನ್ನು ಸಂಪರ್ಕಿಸಲು ಪ್ರಯತ್ನ ಮಾಡುತ್ತೇನೆ. ಇದಕ್ಕಾಗಿ ಬಹಳ ಸಮಯ ಕಂಪ್ಯೂಟರ್ ಹಾಗೂ ಮೊಬೈಲ್‌ನಲ್ಲಿ ಕಳೆಯಬೇಕಾಗುತ್ತದೆ. ಅಂತಹ ಸಮಯದಲ್ಲಿ ನನ್ನ ಮಕ್ಕಳೊಂದಿಗೆ ಸಮಯ ಕಳೆಯಲು ಕಷ್ಟವಾಗುತ್ತದೆ. ಪಾಠ ಬೋಧನೆ ಹಾಗೂ ವಿದ್ಯಾರ್ಥಿಗಳನ್ನು ಸಂಪರ್ಕಿಸುವ ವೇಳೆ ನನ್ನ ಮಕ್ಕಳನ್ನು ಸುಮ್ಮನಿರಿಸಬೇಕು. ಅವರಿಗೂ ಬೇಸರವಾಗದಂತೆ ನೋಡಿಕೊಳ್ಳಬೇಕು. ಬಿಡುವಿನ ವೇಳೆ ಅವರಿಗೆ ಪಾಠ ಓದಿಸುವ ಜೊತೆಗೆ ಕೆಲ ಹೊತ್ತು ಅವರೊಂದಿಗೆ ಬೆರೆಯುತ್ತೇನೆ. ಇದರಿಂದ ಅವರಿಗೂ ಸಂತಸವಾಗುತ್ತದೆ' ಎನ್ನುತ್ತಾರೆ ಪಿರಿಯಾಪಟ್ಟಣ ತಾಲ್ಲೂಕಿನ ಚಿಕ್ಕನೇರಳೆ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ ವಿದ್ಯಾ ಹೆಗ್ಡೆ. ❖

ಬಿಡದ ಬೆನ್ನುನೋವಿಗೆ ಸರಳ ಪರಿಹಾರ

ಮನಸ್ವಿ

ಕೋವಿಡ್ ಕಾರಣದಿಂದ ಕಳೆದೊಂದು ವರ್ಷದಿಂದ ಬಹುತೇಕರು ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿರಬಹುದು. ಇದರಿಂದಾಗಿ ಕೆಲಸದ ಸಮಯವೂ ಏರುಪೇರಾಗಿದೆ. ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ನಿರ್ದಿಷ್ಟ ಸಮಯ ಎಂಬುದಿತ್ತು. ಆದರೆ ಈಗ ಹಾಗಿಲ್ಲ. ಬೆಳಗಿನಿಂದ ರಾತ್ರಿಯವರೆಗೆ ಲ್ಯಾಪ್‌ಟಾಪ್ ಅಥವಾ ಕಂಪ್ಯೂಟರ್ ಮುಂದೆ ಕುಳಿತುಕೊಳ್ಳಬೇಕಾಗಿದೆ. ಅದರಲ್ಲೂ ಹೆಣ್ಣುಮಕ್ಕಳಿಗೆ ಕಚೇರಿ ಕೆಲಸ, ಮನೆಗೆಲಸದೊಂದಿಗೆ ಮಕ್ಕಳನ್ನು ನೋಡಿಕೊಳ್ಳುವ ಹೊಣೆಯೂ ಸೇರಿದೆ. ಈ ರೀತಿ ಬಿಡುವಿಲ್ಲದೇ ನಿರಂತರವಾಗಿ ಸಿಸ್ಟಂ ಮುಂದೆ ಕುಳಿತು ಕೆಲಸ ಮಾಡುವುದು ಬೆನ್ನು ನೋವಿಗೆ ಕಾರಣವಾಗಿದೆ.

'ವರ್ಕ್ ಫ್ರಂ ಹೋಮ್' ಆರಂಭವಾದಾಗಿನಿಂದಲೂ ಬೆನ್ನುನೋವಿನ ಸಮಸ್ಯೆ ಹೆಚ್ಚಾಗಿದೆ ಎಂಬುದು ಹಲವು ಹೆಣ್ಣುಮಕ್ಕಳ ಅಳಲು. ಇದಕ್ಕೆ ಕಾರಣಗಳು ಹಲವಿರಬಹುದು. ನೆಲದ ಮೇಲೆ, ಸೋಫಾ ಮೇಲೆ ಕುಳಿತು ಕೆಲಸ ಮಾಡುವುದು, ಹಾಸಿಗೆ ಅಥವಾ ಮಂಚದ ಮೇಲೆ ಮಲಗಿ ಕೆಲಸ ಮಾಡುವುದು, ಕುರ್ಚಿಯಲ್ಲಿ ಸರಿಯಾದ ಕ್ರಮದಲ್ಲಿ ಕುಳಿತುಕೊಳ್ಳದೇ ಇರುವುದು.. ಈ ಎಲ್ಲವೂ ಬೆನ್ನು ನೋವಿನ ಸಮಸ್ಯೆ ಹೆಚ್ಚಲು ಕಾರಣಗಳು. ಆದರೆ ಕುಳಿತುಕೊಳ್ಳುವ ರೀತಿಯಲ್ಲಿ ಕೆಲವೊಂದು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡರೆ ಖಂಡಿತ ಪರಿಹಾರ ಕಂಡುಕೊಳ್ಳಬಹುದು.

ಬೆನ್ನಿನ ಕೆಳಭಾಗಕ್ಕೆ ಆಧಾರ ನೀಡಿ

ಕುರ್ಚಿಯಲ್ಲಿ, ಹಾಸಿಗೆ ಮೇಲೆ ಅಥವಾ ನೆಲದ ಮೇಲೆ ಕುಳಿತು ಕೆಲಸ ಮಾಡುವ ಮುನ್ನ ಬೆನ್ನಿನ ಕೆಳಭಾಗಕ್ಕೆ ಟವಲ್‌ನಿಂದ ಸುತ್ತಿಕೊಳ್ಳಿ. ಕುರ್ಚಿ ಅಥವಾ ನೆಲ ಯಾವುದೇ ಆಗಿರಲಿ, ಕೆಳಬೆನ್ನಿಗೆ ಆಧಾರ ನೀಡುವಂತೆ ಚೌಕಾಕಾರದ ದಿಂಬು ಇರಿಸಿಕೊಳ್ಳಿ. ಇದರಿಂದ ಬೆನ್ನಿನ ಕೆಳಭಾಗದಲ್ಲಿ ನೋವು ಉಂಟಾಗುವುದನ್ನು ಕಡಿಮೆ ಮಾಡಬಹುದು. ಜೊತೆಗೆ ಆದಷ್ಟು ನೇರವಾಗಿ ಕುಳಿತುಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಿ.

ಡೆಸ್ಕ್‌ಟಾಪ್ ಸರಿಯಾಗಿ ಸೆಟ್‌ಮಾಡಿ

ಕೆಲಸ ಮಾಡುವ ಮುನ್ನ ಡೆಸ್ಕ್‌ಟಾಪ್ ಅನ್ನು ಸರಿಯಾಗಿ ಸೆಟ್ ಮಾಡಿಕೊಳ್ಳುವುದು ಅವಶ್ಯ. ಇದರಿಂದ ಕತ್ತು ಹಾಗೂ ಬೆನ್ನು ನೋವಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಕಚೇರಿಯಲ್ಲಿ ಇರುವಂತೆ ಮಾಡಿಕೊಳ್ಳಲು ಸಾಧ್ಯವಾಗದಿದ್ದರೂ ಸಾಧ್ಯವಾಗುವ ರೀತಿಯಲ್ಲಿ ಹೊಂದಿಸಿಕೊಳ್ಳಿ.

- ಕಂಪ್ಯೂಟರ್ ಸ್ಕ್ರೀನ್ ನಿಮ್ಮ ತೋಳಿನ ಉದ್ದಕ್ಕೆ ಸಮವಾಗಿರಬೇಕು.
- ಕಂಪ್ಯೂಟರ್‌ನ ಮೇಲಿನ ತುದಿಯು ನಿಮ್ಮ ಕಣ್ಣಿನ ದೃಷ್ಟಿಗೆ ಸಮವಾಗಿರಬೇಕು

ಗಂಟೆಗೊಮ್ಮೆ ಎದ್ದು ತಿರುಗಾಡಿ

ಕೆಲಸ ಮಾಡುವಾಗ ಆಗಾಗ ಕುಳಿತುಕೊಳ್ಳುವುದು, ಎದ್ದು ನಿಲ್ಲುವುದು ಮಾಡಬೇಕು. ಅದರೊಂದಿಗೆ ಗಂಟೆಗೊಮ್ಮೆ ಎದ್ದು ತಿರುಗಾಡುವುದು ಅಗತ್ಯ. ಒಂದೇ ಭಂಗಿಯಲ್ಲಿ ಬಹಳ ಹೊತ್ತು ಒಂದೇ ಕಡೆ ಕುಳಿತುಕೊಳ್ಳುವುದರಿಂದ ಕೂಡ ಬೆನ್ನು ನೋವು ಕಾಣಿಸಿಕೊಳ್ಳುತ್ತದೆ. ಮನೆಯ ಒಳಗೆ ಅಥವಾ ಟೆರೇಸ್ ಮೇಲೆ 5 ನಿಮಿಷ ತಿರುಗಾಡಿದ ನಂತರ ಮತ್ತೆ ಕೆಲಸ ಆರಂಭಿಸಿ.

ಸರಿಯಾದ ಕ್ರಮದಲ್ಲಿ ಉಸಿರಾಟ

ಸರಿಯಾದ ಕ್ರಮದಲ್ಲಿ ಉಸಿರಾಟ ನಡೆಸುವುದರಿಂದಲೂ ದೇಹಕ್ಕೆ ಆರಾಮ ಸಿಗುತ್ತದೆ. ಅಲ್ಲದೇ ಇದರಿಂದ ಮಧ್ಯ ಹಾಗೂ ಕೆಳ ಬೆನ್ನಿನ ಭಾಗದ ಸ್ನಾಯುಗಳಿಗೂ ಆರಾಮ ಎನ್ನಿಸುತ್ತದೆ. ಉಸಿರಾಟಕ್ಕೆ ಸಂಬಂಧಿಸಿದ ಕೆಲವೊಂದು ವ್ಯಾಯಾಮಗಳು ಕೆಳ ಬೆನ್ನು ನೋವಿನ ಸಮಸ್ಯೆಗೆ ಪರಿಹಾರ ಒದಗಿಸುತ್ತವೆ.

ಕುಳಿತುಕೊಳ್ಳುವ ರೀತಿ ಬದಲಿಸಿ

ನಿಮಗೆ ಪದೇ ಪದೇ ಬೆನ್ನುನೋವು ಕಾಣಿಸಿಕೊಳ್ಳುತ್ತಿದೆ ಎನ್ನಿಸಿದರೆ ನೀವು ಕುಳಿತುಕೊಳ್ಳುವ ರೀತಿ ಸರಿಯಿಲ್ಲ ಎಂದು ಅರ್ಥ. ಆ ಕಾರಣಕ್ಕೆ ಕುಳಿತುಕೊಳ್ಳುವ ರೀತಿಯನ್ನು ಬದಲಿಸಿ ನೋಡಿ. ದೀರ್ಘಕಾಲದವರೆಗೆ ಒಂದೇ ರೀತಿ ಕುಳಿತುಕೊಳ್ಳುವುದು ಹಾಗೂ ಮುಂದಕ್ಕೆ ಬಾಗಿ ಕುಳಿತುಕೊಳ್ಳುವುದರಿಂದ ಬೆನ್ನು ನೋವು ಕಾಣಿಸಬಹುದು. ಕುರ್ಚಿಯಲ್ಲಿ ಕುಳಿತುಕೊಳ್ಳುವಾಗ ಮೊಣಕಾಲನ್ನು 90 ಡಿಗ್ರಿಗೆ ಬಗ್ಗಿಸಿ ನೆಲಕ್ಕೆ ಪಾದಗಳನ್ನು ಒರಗಿಸಿ ಇರಿಸಿಕೊಳ್ಳಬೇಕು.

ಹಾಸಿಗೆ ಮೇಲೆ ಮಲಗಿ ಕೆಲಸ ಮಾಡುವ ಅಭ್ಯಾಸ ಬೇಡ

ಹಾಸಿಗೆ ಮೇಲೆ ಮಲಗಿಕೊಂಡು ಕೆಲಸ ಮಾಡುವುದು ನಿಮಗೆ ಆರಾಮ ಎನ್ನಿಸಬಹುದು. ಆದರೆ ಮಲಗಿಕೊಂಡು ಕೆಲಸ ಮಾಡುವುದು ಕುಳಿತುಕೊಂಡು ಕೆಲಸ ಮಾಡುವುದಕ್ಕಿಂತಲೂ ಅಪಾಯಕಾರಿ. ಹೀಗಾಗಿ ಆದಷ್ಟು ಹಾಸಿಗೆ ಮೇಲೆ ಕೆಲಸ ಮಾಡುವುದಕ್ಕೆ ಕಡಿವಾಣ ಹಾಕಿ. ❖

ಮಟನ್ ಕೈಮಾ ಉಂಡೆ ಸಾರು, ಸುಕ್ಕಾ

ನಳಪಾಕ

ರೇಖಾ ಎಂ.

ಮಟನ್ ಕೈಮಾ ಉಂಡೆ ಸಾರು

ಬೇಕಾಗುವ ಸಾಮಗ್ರಿಗಳು: ಮಟನ್ –250 ಗ್ರಾಂ, ಮಟನ್ ಮೂಳೆ – 4 ಪೀಸ್, ಹುರಿಗಡಲೆ ಪುಡಿ – 1 ಚಮಚ, ಅರಿಸಿನ – 1/4 ಚಮಚ, ಖಾರದಪುಡಿ – 1 ಚಮಚ, ಕೊತ್ತಂಬರಿ ಪುಡಿ – 2 ಚಮಚ, ಲವಂಗ, ಚಕ್ಕೆ, ಗಸಗಸೆ – 1/2 ಚಮಚ, ಸೋಂಪು– 1/2 ಚಮಚ, ತೆಂಗಿನತುರಿ – ಅರ್ಧ ಕಪ್, ಈರುಳ್ಳಿ – 3, ಹಸಿಮೆಣಸಿನಕಾಯಿ – 1, ಅರ್ಧ ಇಂಚು ಶುಂಠಿ, ಬೆಳ್ಳುಳ್ಳಿ – 8 –9 ಎಸಳು, ಕೊತ್ತಂಬರಿ ಸೊಪ್ಪು, ಕಾಳುಮೆಣಸಿನ ಪುಡಿ – 1/2 ಚಮಚ, ಮಟನ್ ಮಸಾಲ– 1/2 ಚಮಚ, ಅಡುಗೆ ಎಣ್ಣೆ, ರುಚಿಗೆ ತಕ್ಕಷ್ಟು ಉಪ್ಪು.

ಕೈಮಾ ಉಂಡೆ ಮಾಡಲು: ಶುಂಠಿ ಬೆಳ್ಳುಳ್ಳಿ ಪೇಸ್ಟ್– 1/2 ಚಮಚ, ಈರುಳ್ಳಿ–2, ಕೊತ್ತಂಬರಿ ಸೊಪ್ಪು– 1ಕಪ್.

ತಯಾರಿಸುವ ವಿಧಾನ: ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿ, ಈರುಳ್ಳಿ, ಬೆಳ್ಳುಳ್ಳಿ, ಶುಂಠಿ, ಲವಂಗ, ಚಕ್ಕೆ, ಗಸಗಸೆ, ಕಾಳುಮೆಣಸು, ಸೋಂಪು ಹಾಕಿ ಹುರಿಯಬೇಕು. ನಂತರ ಟೊಮೆಟೊ ಹಾಕಿ ಸ್ವಲ್ಪ ಹುರಿಯಬೇಕು. ತಣ್ಣಗಾದ ಮೇಲೆ ತೆಂಗಿನಕಾಯಿ ತುರಿ ಮತ್ತು ಕೊತ್ತಂಬರಿ ಸೊಪ್ಪು, ಖಾರದ ಪುಡಿ, ಕೊತ್ತಂಬರಿ ಪುಡಿ ಹಾಕಿ ಸ್ವಲ್ಪ ನೀರು ಬೆರೆಸಿ, ನುಣ್ಣಗೆ ರುಬ್ಬಬೇಕು. ತಯಾರಾದ ಮಸಾಲೆಯಲ್ಲಿ 2 ಚಮಚ ಬೇರೆಯೇ ತೆಗೆದಿಡಿ.

ಇನ್ನೊಂದು ಪಾತ್ರೆಗೆ ಸ್ವಲ್ಪ ಎಣ್ಣೆ ಹಾಕಿ, ಈರುಳ್ಳಿ ಮತ್ತು ಮಟನ್ ಮೂಳೆ ಹಾಕಿ ಹುರಿಯಿರಿ. ಸ್ವಲ್ಪ ಅರಿಸಿನ ಸೇರಿಸಿ. ನಂತರ ರುಬ್ಬಿದ ಮಸಾಲೆಯನ್ನು ಅದಕ್ಕೆ ಹಾಕಿ. ಹದಕ್ಕೆ ತಕ್ಕಂತೆ ನೀರು ಬೆರೆಸಿ ಕುದಿಸಿ. ತೊಳೆದಿಟ್ಟ ಮಟನ್ ಮತ್ತು ತೆಗೆದಿಟ್ಟ ರುಬ್ಬಿದ ಮಸಾಲೆಯನ್ನು ಬೆರೆಸಿ ಮಿಕ್ಸಿಗೆ ಹಾಕಿ. ಹೆಚ್ಚು ರುಬ್ಬಬೇಡಿ. ತರಿತರಿಯಾಗಿ ಇರಬೇಕು. ಉಂಡೆ ಕಟ್ಟುವಂತಾದರೆ ಸಾಕು. ರುಬ್ಬಿದ ಮಟನ್‌ಗೆ ಮೆಣಸಿನ ಪುಡಿ, ಉಪ್ಪು, ಶುಂಠಿ, ಬೆಳ್ಳುಳ್ಳಿ ಪೇಸ್ಟ್, ಈರುಳ್ಳಿ, ಕೊತ್ತಂಬರಿ ಸೊಪ್ಪು, ಕಡಲೆಹಿಟ್ಟು ಹಾಕಿ ಕಲೆಸಿಕೊಂಡು, ಉಂಡೆ ಮಾಡಿಕೊಳ್ಳಬೇಕು. ಸಾರು ಚೆನ್ನಾಗಿ ಕುದಿದ ಮೇಲೆ ಉಂಡೆಯನ್ನು ಅದಕ್ಕೆ ಹಾಕಿ. ಹದಿನೈದು ನಿಮಿಷ ಕಡಿಮೆ ಉರಿಯಲ್ಲಿ ಬೇಯಿಸಿದರೆ ರುಚಿಯಾದ ಕೈಮಾ ತಿನ್ನಲು ತಯಾರಾಗುತ್ತದೆ.

ಪ್ರಜಾವಾಣಿ ನೋಡಿಯೊ

ರೆಸಿಪಿ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಾರು



ಬೇಕಾಗುವ ಸಾಮಗ್ರಿಗಳು: ಮೇಕೆ ಮಟನ್ – ಅರ್ಧ ಕೆಜಿ, ಅರಿಸಿನ –1 ಚಮಚ, ಕೊತ್ತಂಬರಿ ಪುಡಿ – 3 ಚಮಚ, ಖಾರದ ಪುಡಿ – 2 ಚಮಚ, ಗರಂ ಮಸಾಲ – 1 ಚಮಚ, ಎಣ್ಣೆ – 2 ಚಮಚ, ಕೊತ್ತಂಬರಿ – 1/2 ಕಪ್, ರುಚಿಗೆ ತಕ್ಕಷ್ಟು ಉಪ್ಪು

ರುಬ್ಬಲು ಬೇಕಾಗುವ ಸಾಮಗ್ರಿಗಳು: ಹುರಿಗಡಲೆ – 1 ಚಮಚ, ಕತ್ತರಿಸಿಟ್ಟುಕೊಂಡ ತೆಂಗಿನಕಾಯಿ – 1/2 ಕಪ್, ಪುದಿನ – 1/2 ಕಪ್, ಟೊಮೆಟೊ – 1, ಈರುಳ್ಳಿ – 1, ಶುಂಠಿ – 2 ಇಂಚು, ಹಸಿಮೆಣಸು – 3, ಕೊತ್ತಂಬರಿ ಸೊಪ್ಪು – 1/4 ಕಪ್

ತಯಾರಿಸುವ ವಿಧಾನ: ಕುಕರ್‌ಗೆ ಮಟನ್ ಮತ್ತು ನೀರು, ಎಣ್ಣೆ, ಪುದಿನ, ಕೊತ್ತಂಬರಿ ಸೊಪ್ಪು, ಅರಿಸಿನ, ಖಾರದ ಪುಡಿ, ಉಪ್ಪು ಹಾಕಿ ಕಲೆಸಿ, 4–5 ವಿಷಲ್ ಹಾಕಿ ಬೇಯಿಸಿ. ಹುರಿದುಕೊಂಡ ಸಾಮಗ್ರಿಗಳನ್ನು ರುಬ್ಬಬೇಕು. ಬೆಂದ ಮಟನ್‌ಗೆ ಅರಿಸಿನ, ಕೊತ್ತಂಬರಿ ಬೀಜದ ಪುಡಿ, ಖಾರದ ಪುಡಿ ಮತ್ತು ರುಬ್ಬಿದ ಮಸಾಲೆಯನ್ನು ಹಾಕಬೇಕು. ರುಚಿಗೆ ತಕ್ಕಷ್ಟು ಉಪ್ಪು, ಕೊತ್ತಂಬರಿ ಸೊಪ್ಪು ಹಾಕಬೇಕು. ಹಸಿ ವಾಸನೆ ಹೋಗುವವರೆಗೂ ಹುರಿದುಕೊಳ್ಳಬೇಕು. ಬೇಕಾದಷ್ಟು ನೀರು ಹಾಕಿ ಬೆರೆಸಬೇಕು. ಮುಚ್ಚಳ ಮುಚ್ಚಿ ಒಂದು ವಿಷಲ್ ಕೂಗಿಸಿದರೆ ಸಾರು ತಯಾರಾಗುತ್ತದೆ.

ಸುಕ್ಕಾ

ಬೇಕಾಗುವ ಸಾಮಗ್ರಿಗಳು: ಬೇಯಿಸಿಕೊಂಡ ಮಟನ್ ಮಾಂಸ – 300 ಗ್ರಾಂ, ಗುಂಟೂರು ಮೆಣಸು– 8, ಕೊತ್ತಂಬರಿಕಾಳು –2 ಚಮಚ, ಜೀರಿಗೆ – 1/2 ಚಮಚ, ಕಾಳುಮೆಣಸು – 2 ಚಮಚ, ಈರುಳ್ಳಿ – 2, ಕೊತ್ತಂಬರಿ ಸೊಪ್ಪು – 1/4 ಕಪ್, ಕರಿಬೇವು – 1/4 ಕಪ್, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 1/2 ಚಮಚ, ಹಸಿಮೆಣಸಿನಕಾಯಿ – 2, ಒಗ್ಗರಣೆಗೆ – ಒಣ ಮೆಣಸು, ಎಣ್ಣೆ, ರುಚಿಗೆ ತಕ್ಕಷ್ಟು ಉಪ್ಪು

ತಯಾರಿಸುವ ವಿಧಾನ: ಬಾಣಲೆಗೆ ಕೊತ್ತಂಬರಿ ಕಾಳು, ಜೀರಿಗೆ, ಕಾಳುಮೆಣಸು, ಒಣ ಮೆಣಸು ಹಾಕಿ ಹುರಿಯಬೇಕು. ತಣ್ಣಗಾದ ಮೇಲೆ ನೀರು ಬೆರೆಸದೇ ರುಬ್ಬಬೇಕು. ಬಾಣಲೆಗೆ ಎಣ್ಣೆ ಹಾಕಿ ಈರುಳ್ಳಿ, ಹಸಿಮೆಣಸು, ಕರಿಬೇವು, ಶುಂಠಿ, ಬೆಳ್ಳುಳ್ಳಿ ಪೇಸ್ಟ್ ಹಾಕಿ ಹುರಿಯಬೇಕು. ನಂತರ ಅದಕ್ಕೆ ಬೇಯಿಸಿಟ್ಟುಕೊಂಡ ಮಟನ್ ಸೇರಿಸಬೇಕು. ರುಚಿಗೆ ತಕ್ಕಂತೆ ಉಪ್ಪು ಸೇರಿಸಿ. ಅದು ಸರಿಯಾಗಿ ಬೆಂದ ನಂತರ, ತಯಾರಿಸಿಟ್ಟುಕೊಂಡ ಸುಕ್ಕಾ ಮಸಾಲೆ ಸೇರಿಸಬೇಕು. ಕೊನೆಯಲ್ಲಿ ಕೊತ್ತಂಬರಿಸೊಪ್ಪು, ಕರಿಬೇವು ಸೇರಿಸಿ, ಡ್ರೈ ರೋಸ್ಟ್ ಮಾಡಿದರೆ ಸವಿಯಾದ ಮಟನ್ ಸುಕ್ಕಾ ತಯಾರಾಗುತ್ತದೆ.

ಗರ್ಭಿಣಿಯರಿಗೆ ಕೋವಿಡ್ ಲಸಿಕೆ ಹಾಕಿಸಬಹುದೇ?

ಸ್ಪಂದನ

ಡಾ. ವೀಣಾ ಎಸ್. ಭಟ್

- **ನನಗೆ 33 ವರ್ಷ. ಗರ್ಭಿಣಿಯಾಗಿದ್ದು ಜ್ವರ ಬಂದಿದೆ. ಏನು ಮಾಡಬೇಕು? ಗರ್ಭಧಾರಣೆಯಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಬಹುದೇ?**

ರೂಪಾ, ಶಿವಮೊಗ್ಗ

ರೂಪಾರವರೇ, ನೀವು ಎಷ್ಟು ತಿಂಗಳು ಗರ್ಭಿಣಿ ಎಂಬುದನ್ನು ತಿಳಿಸಿಲ್ಲ. ಜ್ವರ ಎಂದರೆ ಮನುಷ್ಯನ ದೇಹದ ಉಷ್ಣತೆ ಅಥವಾ ತಾಪಮಾನ ಮಾಮೂಲಿ ಮಟ್ಟ (37.20 ಸೆಂಟಿಗ್ರೇಡ್ ಅಥವಾ 98.60 ಎಫ್)ಕ್ಕಿಂತ ಹೆಚ್ಚಾಗಿರುವುದು. ಜ್ವರ ಎಂದರೆ ಶರೀರದ ತಾಪಮಾನ 100.40 ಎಫ್‌ಗಿಂತ ಹೆಚ್ಚಿರುವುದು. ಜ್ವರ ಕೇವಲ ರೋಗದ ಲಕ್ಷಣವೇ ಹೊರತು ಜ್ವರವೇ ಕಾಯಿಲೆಯಲ್ಲ. ಎಲ್ಲ ಜನಸಾಮಾನ್ಯರು ಈ ಕೋವಿಡ್‌ನ ಸಾಂಕ್ರಾಮಿಕ ಕಾಲದಲ್ಲಂತೂ ಜ್ವರ ಬಂದರೆ ಭಯಭೀತರಾಗಿಬಿಡುತ್ತಾರೆ. ಶರೀರದ ಮೇಲೆ ರೋಗಾಣುಗಳ ದಾಳಿಯಾದಾಗ (ಬ್ಯಾಕ್ಟೀರಿಯಾ, ವೈರಸ್, ಇತ್ಯಾದಿ) ನಮ್ಮ ದೇಹದಲ್ಲಿ ರಾಸಾಯನಿಕಗಳು (ಐಎಲ್-1 ಮತ್ತು ಟಿಎನ್‌ಎಫ್) ಬಿಡುಗಡೆಯಾಗಿ ನಮ್ಮ ಶರೀರದಲ್ಲಿರುವ ರೋಗನಿರೋಧಕ ವ್ಯವಸ್ಥೆಗೂ ಹಾಗೂ ರೋಗಾಣುಗಳಿಗೂ ಯುದ್ಧ ಉಂಟಾಗುವುದರ ಚಿಹ್ನೆಯೇ ಜ್ವರದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಬ್ಯಾಕ್ಟೀರಿಯಾ ಅಥವಾ ವೈರಸ್‌ಗಳಿಂದ ಯಾವುದೇ ಅಂಗಗಳಿಗೆ ಸೋಂಕಾದರೆ - ಬಾಯಿ, ಗಂಟಲು, ಹಲ್ಲು, ವಸಡು, ಕಿವಿ, ಮೂಗು, ಕಣ್ಣು, ಸೈನಸ್, ಕರುಳು, ಯಕೃತ್, ಮೂತ್ರನಾಳ, ಮೂತ್ರಪಿಂಡ, ಶ್ವಾಸಕೋಶ, ಮೆದುಳು, ಜನನಾಂಗಗಳು ಕೆಲವೊಮ್ಮೆ ಆಟೋ ಇಮ್ಯೂನ್ ಕಾಯಿಲೆಗಳಲ್ಲಿ ಲ್ಯುಕೀಮಿಯಾ, ಲಿಂಫೋಮಾದಂತಹ ಕ್ಯಾನ್ಸರ್‌ಗಳಲ್ಲೂ ಜ್ವರ ಬರಬಹುದು.

ಗರ್ಭಧಾರಣೆಯಲ್ಲಿ ಸಹಜವಾಗಿಯೇ ರೋಗನಿರೋಧಕ ಶಕ್ತಿ ಕಡಿಮೆಯಾಗುತ್ತದೆ. ಹೀಗಾಗಿ ನೀವು ಕಾಳಜಿಯಿಂದಿರುವುದು ಬಹಳ ಮುಖ್ಯ. ಸ್ವಯಂ ಚಿಕಿತ್ಸೆಯನ್ನ ನೀವೇ ಮಾಡಿಕೊಳ್ಳುತ್ತಾ ಮಾತ್ರೆಗಳನ್ನು ತೆಗೆದುಕೊಳ್ಳುವುದು ಮಗುವಿನ ಮೇಲೂ ದುಷ್ಪರಿಣಾಮ ಬೀರಬಹುದು. ಮೊದಲ 3 ತಿಂಗಳ ಗರ್ಭಧಾರಣೆಯಲ್ಲಿ ಫೋಲಿಕ್‌ಆಸಿಡ್ ಮಾತ್ರೆ ಹೊರತಾಗಿ ಬೇರೆ ಯಾವ ಮಾತ್ರೆಯನ್ನೂ ಸೇವಿಸಬಾರದು. ನಿಮ್ಮ ಜ್ವರ ಸಾಧಾರಣ ಫ್ಲೂ ಅಥವಾ ವೈರಸ್ ಜ್ವರವಿರಬಹುದು ಅಥವಾ ಮೂತ್ರದಲ್ಲಿ ಸೋಂಕಾಗಿರಬಹುದು, ಸೈನಸ್ ತೊಂದರೆಯಿಂದಿರಬಹುದು, ತುಂಬಾ ಚಳಿ ಇದ್ದರೆ ಅದು ಮಲೇರಿಯಾ ಜ್ವರವೂ ಇರಬಹುದು. ಡೆಂಗೆ ಜ್ವರದಲ್ಲಿ ಯಾರೋ ಹೊಡೆದು ಕೈ-ಕಾಲು ಮುರಿದ ಹಾಗೇ ಮೈ-ಕೈ ನೋವು ಇರುತ್ತದೆ. ಆದರೆ ನೀವು ಹೆದರದೇ ನೀವೆ ಒಂದು ಥರ್ಮಾಮೀಟ್ ಅನ್ನು ಮನೆಯಲ್ಲಿಟ್ಟುಕೊಂಡು ಆಗಾಗ ದೇಹದ ತಾಪಮಾನ ನೋಡಿಕೊಳ್ಳುತ್ತಿದ್ದು ನಿಮಗೆ ಜ್ವರ 100.40 ಎಫ್‌ಗಿಂತ ಹೆಚ್ಚಿದ್ದರೆ ಪ್ಯಾರಾಸಿಟಮಾಲ್ 500 ಮಿ.ಗ್ರಾಂ ಮಾತ್ರೆಯನ್ನು ಸೇವಿಸಿ. ತೆಳ್ಳಗಿನ ಹತ್ತಿಬಟ್ಟೆಯನ್ನು ಧರಿಸಿ, ಬಟ್ಟೆಯನ್ನು ನೀರಿನಲ್ಲಿ ಅದ್ದಿ ಮೈ ಒರೆಸಿಕೊಳ್ಳಿ. ಸಾಮಾನ್ಯ ಫ್ಲೂ ಅಥವಾ ಇನ್‌ಫ್ಲುಯೆಂಜಾ ಜ್ವರವಾಗಿದ್ದರೆ ಮೂಗಲ್ಲಿ ನೀರು ಸೋರುವುದು, ಮೈ-ಕೈ ನೋವು, ತಲೆನೋವು, ನಡುಕ, ಚಳಿ, ವಾಂತಿ, ಸುಸ್ತು ಎಲ್ಲವೂ ಆಗಬಹುದು. ಉಸಿರಾಟದ ತೊಂದರೆಯೂ ಆಗಬಹುದು. ಈ ತೊಂದರೆಗಳು ಕೋವಿಡ್ ಸೋಂಕಿನಲ್ಲೂ ಆಗುತ್ತವೆ. ಇವೆಲ್ಲಾ ತೊಂದರೆಯಿದ್ದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ. ಈ ಕೋವಿಡ್ ಪಿಡುಗಿನಲ್ಲಿ ಎಲ್ಲ ಜ್ವರವೂ ಅದರಿಂದಲೇ ಅಂದುಕೊಂಡೇ ಭಯಪಡಬಾರದು. ನೆಗಡಿ, ತಲೆಭಾರಕ್ಕೆ ಮನೆಯಲ್ಲೇ ಹಬೆ ತೆಗೆದುಕೊಳ್ಳಬಹುದು. ಮನೆಯಲ್ಲೇ ಸರಳವಾಗಿ ಕಷಾಯ (ಪುದಿನ, ಶುಂಠಿ, ತುಳಸಿ, ಕಾಳುಮೆಣಸು, ಅರಿಸಿನ ಇತ್ಯಾದಿ ಹಾಕಿ) ಮಾಡಿಕೊಳ್ಳುವುದು. ನಿಮ್ಮ ವೈದ್ಯರನ್ನು ಸಂಪರ್ಕಿಸಿ.

ಕೋವಿಡ್ ಲಸಿಕೆ ಗರ್ಭಧಾರಣೆಯಲ್ಲಿ ಸುರಕ್ಷಿತವೋ ಅಲ್ಲವೋ ಎಂಬುದಾಗಿ ಸಾಕಷ್ಟು ಅಧ್ಯಯನಗಳು ನಡೆದಿಲ್ಲ. ಕೇಂದ್ರ ಸರ್ಕಾರ ಲಸಿಕಾ ಮಾರ್ಗಸೂಚಿ ಇನ್ನಷ್ಟೇ ಕೊಡಬೇಕಾಗಿದೆ. ಆದರೆ ಅಮೆರಿಕ ಸ್ತ್ರೀರೋಗ ಸಂಘ ಹಾಗೂ ರಾಯಲ್ ಕಾಲೇಜ್ ಸ್ತ್ರೀರೋಗ ಸಂಘದ ಮಾರ್ಗಸೂಚಿ ಪ್ರಕಾರ ಗರ್ಭಿಣಿಯರು ಕೋವಿಡ್ ಲಸಿಕೆ ಹಾಕಿಸಬಹುದು. ಭಾರತದಲ್ಲೂ ಈ ಬಗ್ಗೆ ಮಾರ್ಗಸೂಚಿ ಬಂದ ಮೇಲಷ್ಟೇ ನೀವು ಹಾಕಿಸಿಕೊಳ್ಳಿ.

- **ನನಗೆ 32 ವರ್ಷ, ನಾನು ಈಗ 6 ತಿಂಗಳು ಗರ್ಭಿಣಿಯಾಗಿದ್ದು, ನನ್ನ ಅತ್ತೆಗೆ ಕೋವಿಡ್ ಪಾಸಿಟಿವ್ ಬಂದಿದೆ. ಅದಕ್ಕೆ ನನಗೀಗ ಭಯವಾಗುತ್ತಿದೆ. ನಾನೂ ಪರೀಕ್ಷಿಸಿಕೊಳ್ಳಬೇಕೆ? ನಮ್ಮ ಅಮ್ಮನ ಮನೆ ಇದೇ ಊರಿನಲ್ಲಿದೆ, ಅಲ್ಲಿ ಹೋಗಿರಲೇ ನಾನು?**

ಮುಕ್ತಾ, ತರೀಕೆರೆ

ಮುಕ್ತಾರವರೇ ನಿಮ್ಮ ಅತ್ತೆಗೆ ಈಗ ಕೋವಿಡ್ ಪಾಸಿಟಿವ್ ಎಂದು ಬಂದರೆ ಅವರಿಗೆ ಟ್ರಯಾಜ್ ಮಾಡುತ್ತಾರೆ. ಅಂದರೆ ಅವರಿಗಿರುವ ರೋಗಲಕ್ಷಣಗಳ ಮೇಲೆ ಮನೆಯಲ್ಲೇ ಅವರನ್ನು ಪ್ರತ್ಯೇಕವಾಗಿಟ್ಟು ಸಲಹೆ ಸೂಚನೆ ಕೊಟ್ಟು ನೋಡಿಕೊಳ್ಳುವುದೋ ಅಥವಾ ಕೋವಿಡ್ ಸೆಂಟರ್‌ನಲ್ಲಿಡುವುದೋ ಎಂದು ಆರೋಗ್ಯಾಧಿಕಾರಿಗಳು ನಿರ್ಣಯಿಸುತ್ತಾರೆ. ಈ ಬಗ್ಗೆ ಕುಟುಂಬದ ಸದಸ್ಯರಿಗೂ, ಅಕ್ಕ-ಪಕ್ಕದ ಮನೆಯವರಿಗೂ ತಿಳಿದಿರಬೇಕು. ಯಾವುದೇ ರೋಗಲಕ್ಷಣಗಳಿಲ್ಲದೆ ಮನೆಯಲ್ಲಿದ್ದರೂ ಶರೀರದ ತಾಪಮಾನ, ನಾಡಿಮಿಡಿತದ ಬಗ್ಗೆ, ರಕ್ತದೊತ್ತಡ ಇನ್ನಿತರ ಆರೋಗ್ಯದ ಸಮಸ್ಯೆಗಳ ಬಗ್ಗೆ ವಿಚಾರಿಸುತ್ತಾ ಮೇಲ್ವಿಚಾರಣೆಯಲ್ಲೇ ಇರುತ್ತಾರೆ. ಅವುಗಳಿಗೆಲ್ಲಾ ಆರೋಗ್ಯ ಇಲಾಖೆ ಮಾರ್ಗಸೂಚಿಯನ್ನು ಕೊಟ್ಟಿದೆ. ನೀವು ಈ ಬಗ್ಗೆ ವಿಚಲಿತರಾಗದೇ ನೀವು ಕೂಡ ಕೋವಿಡ್ ಟೆಸ್ಟ್ ಮಾಡಿಸಿಕೊಂಡು ಮನೆಯಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು, ಸೋಪ್‌ನಿಂದ ಸ್ವಚ್ಛವಾಗಿ ಕೈತೊಳೆದುಕೊಳ್ಳುತ್ತಿರುವುದು ಇವೆಲ್ಲಾ ಮಾಡಿಕೊಳ್ಳುತ್ತಿರಬೇಕು.

ನಿಮ್ಮ ಅಮ್ಮನ ಮನೆಗೆ ಹೋಗುವುದು ತಪ್ಪೇನಿಲ್ಲ. ಆದರೆ ಈ ಸಂದರ್ಭದಲ್ಲಿ ನಿಮ್ಮಮ್ಮನ ಮನೆಯಲ್ಲೂ ಯಾರಿಗೆ ಬೇಕಾದರೂ ಕೋವಿಡ್ ಬರಬಹುದು. ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಮನೆಯಲ್ಲೇ ನಿಮ್ಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಹೆಚ್ಚು ಹಣ್ಣು, ತರಕಾರಿ, ವಿಟಮಿನ್ ಸಿ, ಝಿಂಕ್ ಇತ್ಯಾದಿ ಹೆಚ್ಚಿರುವ ಹಣ್ಣುಗಳಾದ ಮೋಸಂಬೆ, ಕಿತ್ತಳೆ, ಇನ್ನಿತರ ತರಕಾರಿಗಳನ್ನು ಸೇವಿಸುತ್ತಾ ಸುಲಭವಾದ ಉಸಿರಾಟದ ಅಭ್ಯಾಸಗಳನ್ನು ಮಾಡುತ್ತಾ ಧೈರ್ಯವಾಗಿರಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಸುಭಾಷಿತ

ಮನುಷ್ಯಕುಲದ ಹಿರಿಮೆಯು ಮನುಷ್ಯನಾಗಿ ಇರುವುದರಲ್ಲಿ ಇಲ್ಲ, ಮಾನವೀಯವಾಗಿ ಇರುವುದರಲ್ಲಿ ಇದೆ.

-ಮಹಾತ್ಮ ಗಾಂಧಿ

ದಮನಕಾರಿ ನೀತಿಗೆ ಕಡಿವಾಣ ಜನಹಿತ ಕಾಯ್ದ 'ಸುಪ್ರೀಂ' ತೀರ್ಪು

'ಆನ್‌ಲೈನ್' ವೇದಿಕೆಗಳ ಮೂಲಕ ಮಾಹಿತಿ ಹಂಚಿಕೊಳ್ಳುವುದರ ಮೇಲೆ ನಿರ್ಬಂಧ ವಿಧಿಸುವ ಕ್ರಿಯೆಗಳನ್ನು ತಡೆಯಬೇಕಿದೆ. ಹೀಗೆ ತಡೆಯಬೇಕಿರುವುದು ಮಾಹಿತಿ ಹಂಚಿಕೊಳ್ಳುವ ವ್ಯಕ್ತಿಗಳ ಹಿತಾಸಕ್ತಿಗೆ ಪೂರಕವಷ್ಟೇ ಅಲ್ಲದೆ, ದೇಶದ ಪ್ರಜಾತಾಂತ್ರಿಕ ರಚನೆಯ ಹಿತದ ದೃಷ್ಟಿಯಿಂದಲೂ ಮುಖ್ಯ. 'ಇಂತಹ ಮಾಹಿತಿ ತಕ್ಷಣಕ್ಕೆ ಸಿಗದಿದ್ದರೆ, ಕೋವಿಡ್-19 ಸಾಂಕ್ರಾಮಿಕವು ಈಗಿನ ಸ್ಥಿತಿಗಿಂತ ಹೆಚ್ಚು ದುರಂತಮಯವಾಗಿ ಪರಿವರ್ತನೆ ಕಾಣಬಹುದು...' ಎಂದು ನ್ಯಾಯಮೂರ್ತಿಗಳಾದ ಧನಂಜಯ ವೈ. ಚಂದ್ರಚೂಡ್, ಎಲ್.ನಾಗೇಶ್ವರ ರಾವ್ ಮತ್ತು ಎಸ್.ರವೀಂದ್ರ ಭಟ್ ಅವರಿದ್ದ ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು ಕಳೆದ ವಾರ ನೀಡಿದ ತೀರ್ಪಿನಲ್ಲಿ ಹೇಳಿದೆ. ಜನರ ಹಕ್ಕುಗಳ ಪರವಾಗಿ, ಪ್ರಭುತ್ವದ ದಮನಕಾರಿ ಧೋರಣೆಯ ವಿರುದ್ಧವಾಗಿ ನೀಡಿದ ತೀರ್ಪಿನ ರೀತಿಯಲ್ಲಿಯೂ ಇದನ್ನು ಓದಿಕೊಳ್ಳಬಹುದು. ಸಾಂಕ್ರಾಮಿಕದ ಸಂದರ್ಭದಲ್ಲಿ ಸಾರ್ವಜನಿಕರು ತಮ್ಮ ಪ್ರೀತಿಪಾತ್ರರಿಗೆ ಆಮ್ಲಜನಕ ಬೇಕಿದೆ ಅಥವಾ ಇನ್ಯಾವುದೋ ತುರ್ತು ವೈದ್ಯಕೀಯ ನೆರವಿನ ಅಗತ್ಯವಿದೆ ಎಂದು ಸಾಮಾಜಿಕ ಜಾಲತಾಣಗಳ ಮೂಲಕ ಕೇಳಿಕೊಳ್ಳುವುದು ಕೆಲವು ಸರ್ಕಾರಗಳಿಗೆ ರುಚಿಸುತ್ತಿಲ್ಲ. ಹಾಗೆ ಸಹಾಯ ಯಾಚಿಸುವುದು ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತದೆ, ಇತರರ ಎದುರು ದೇಶದ ಪ್ರತಿಷ್ಠೆಗೆ ಕುಂದು ತರುತ್ತದೆ ಎಂದೆಲ್ಲ ಸರ್ಕಾರಗಳು ಯೋಚಿಸುವುದಿದೆ. ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರವು ಜನರ ಮೂಲಭೂತ ಹಕ್ಕನ್ನು ದಮನ ಮಾಡುವ ದಿಸೆಯಲ್ಲಿ ಒಂದು ಹೆಜ್ಜೆ ಮುಂದೆ ಇರಿಸಿ, ಈ ರೀತಿ ಸಾಮಾಜಿಕ ಮಾಧ್ಯಮಗಳ ಮೂಲಕ 'ತಪ್ಪು ಮಾಹಿತಿ ರವಾನಿಸುವವರ' ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗುವುದು, ಅವರ ಆಸ್ತಿಯನ್ನು ವಶಕ್ಕೆ ತೆಗೆದುಕೊಳ್ಳಲಾಗುವುದು ಎಂದು ಹೇಳಿತ್ತು. ತನ್ನ ತಾತನಿಗೆ ಆಮ್ಲಜನಕದ ಅಗತ್ಯವಿದೆ ಎಂದು ಹೇಳಿದ ವ್ಯಕ್ತಿಯೊಬ್ಬರ ವಿರುದ್ಧ ಅಲ್ಲಿನ ಪೊಲೀಸರು 'ತಪ್ಪು ಮಾಹಿತಿ' ಹರಡಿದ ಆರೋಪದ ಅಡಿ ಪ್ರಕರಣ ಕೂಡ ದಾಖಲಿಸಿಕೊಂಡ ವರದಿಗಳಿವೆ.

ಸಹಾಯ ಯಾಚಿಸುವವರತ್ತ ತಾಯಿಯ ಮಮತೆ ಹರಿಸಬೇಕಿದ್ದ ಸರ್ಕಾರಗಳು, ಅಂಥವರ ವಿರುದ್ಧ ಪೊಲೀಸರ ಮೂಲಕ ಕ್ರಮ ಜರುಗಿಸುತ್ತವೆ ಎಂಬುದು ದೇಶದ ಪ್ರಜಾತಂತ್ರ ವ್ಯವಸ್ಥೆಗೆ ಒಂದು ಕಪ್ಪು ಚುಕ್ಕೆ ಇದ್ದಂತೆ

ಈಗ ಸುಪ್ರೀಂ ಕೋರ್ಟ್ ಹೇಳಿರುವ ಮಾತುಗಳು ಸರ್ಕಾರದ ಕಡೆಯಿಂದಲೇ ನಡೆಯುವ ಇಂತಹ ದಮನಕಾರಿ ಕೃತ್ಯಗಳಿಗೆ ಕಡಿವಾಣ ಹಾಕಲು ನೆರವಾಗುತ್ತವೆ. ಸಾಮಾಜಿಕ ಜಾಲತಾಣಗಳ ಮೂಲಕ ಸಹಾಯ ಯಾಚಿಸುವವರ ವಿರುದ್ಧ ಕ್ರಮ ಜರುಗಿಸಿದರೆ ನ್ಯಾಯಾಂಗ ನಿಂದನೆ ಕಾನೂನಿನ ಅಡಿ ಮೊಕದ್ದಮೆ ದಾಖಲಿಸಿಕೊಳ್ಳಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಕಠಿಣ ಎಚ್ಚರಿಕೆ ರವಾನಿಸಿದೆ. 'ತಮ್ಮ ಪ್ರೀತಿಪಾತ್ರರಿಗೆ ಸಹಾಯ ಬೇಕಾಗಿದೆ ಎಂದು ಸಾಮಾಜಿಕ ಜಾಲತಾಣಗಳ ಮೂಲಕ ನೆರವು ಕೇಳುವವರ ಕಷ್ಟವನ್ನು ಪ್ರಭುತ್ವವು ಇನ್ನಷ್ಟು ಹೆಚ್ಚಿಸಬಾರದು' ಎಂದು ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ. ಜನ ಕಷ್ಟ ಹೇಳಿಕೊಳ್ಳುವುದು 'ದೇಶದ ಪ್ರತಿಷ್ಠೆಗೆ ಕುಂದು ತರುವಂಥದ್ದು', 'ಜನರಲ್ಲಿ ಭೀತಿ ಮೂಡಿಸುವ ಉದ್ದೇಶದ್ದು', 'ಆಡಳಿತ ವ್ಯವಸ್ಥೆಗೆ ಕೆಟ್ಟ ಹೆಸರು ತರುವಂಥದ್ದು' ಎಂದು ಮಾಹಿತಿ ಪ್ರವಾಹದ ಇಂದಿನ ಕಾಲಘಟ್ಟದಲ್ಲಿ ಸರ್ಕಾರಗಳೇ ಹೇಳುವುದು ಖಂಡನೀಯ. ಸಹಾಯ ಯಾಚಿಸುವವರತ್ತ ತಾಯಿಯ ಮಮತೆ ಹರಿಸಬೇಕಿದ್ದ ಸರ್ಕಾರಗಳು, ಅಂಥವರ ವಿರುದ್ಧ ಪೊಲೀಸರ ಮೂಲಕ ಕ್ರಮ ಜರುಗಿಸುತ್ತವೆ ಎಂಬುದು ದೇಶದ ಪ್ರಜಾತಂತ್ರ ವ್ಯವಸ್ಥೆಗೆ ಒಂದು ಕಪ್ಪು ಚುಕ್ಕೆ ಇದ್ದಂತೆ. ಸುಪ್ರೀಂ ಕೋರ್ಟ್‌ನ ಈ ತೀರ್ಪು ಇಂತಹ ಎಲ್ಲೆ ಮೀರಿದ ವರ್ತನೆಗಳಿಗೆ ಕಡಿವಾಣ ಹಾಕುತ್ತದೆ ಎಂಬ ಭರವಸೆ ಹೊಂದಬಹುದು. 1973ರಲ್ಲಿ ಮಹಾರಾಷ್ಟ್ರ ಕಂಡ ಬರಗಾಲವು 1943ರಲ್ಲಿ ಬಂಗಾಳ ಕಂಡ ಕ್ಷಾಮದಷ್ಟು ಭೀಕರ ಪರಿಣಾಮವನ್ನು ಬೀರಲಿಲ್ಲ. ಇದಕ್ಕೆ ಒಂದು ಕಾರಣ, ಮಾಹಿತಿ ವಿಪುಲವಾಗಿ ಸಿಗುತ್ತಿದ್ದುದು ಹಾಗೂ ಮಾಹಿತಿ ಸಿಕ್ಕಿದುದರ ಪರಿಣಾಮವಾಗಿ, ಸಮಸ್ಯೆ ಇದೆ ಎಂಬುದನ್ನು ಗುರುತಿಸಿದ್ದು. ಈ ಅಂಶವನ್ನು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಈ ಸಾಂಕ್ರಾಮಿಕದ ನೆನಪುಗಳು ಸಮೂಹದ ಪ್ರಜ್ಞೆಯಲ್ಲಿ ಇರಬೇಕು ಎಂದಾದರೆ, ಸಾರ್ವಜನಿಕರು ಸಾಮಾಜಿಕ ಜಾಲತಾಣಗಳ ಮೂಲಕ ಈ ರೀತಿ ಮಾಹಿತಿ ಹಂಚಿಕೊಳ್ಳುವುದು ಅಗತ್ಯವಾಗುತ್ತದೆ ಎಂದೂ ಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿದೆ. ನಮ್ಮನ್ನು ಇಂದು ಕಾಡುತ್ತಿರುವ ಸಮಸ್ಯೆಗಳ ಅರಿವನ್ನು ಮುಂದಿನ ಕಾಲಕ್ಕೂ ವರ್ಗಾಯಿಸಲು ಈ ನೆನಪುಗಳು ನೆರವಾಗುತ್ತವೆ. ಸಾಮೂಹಿಕ ಪ್ರಜ್ಞೆಯಲ್ಲಿ ಈ ನೆನಪುಗಳು ಇರುವಂತೆ ಮಾಡುವಲ್ಲಿ ನ್ಯಾಯಾಲಯಗಳು ಹೊಂದಿರುವ ಪಾತ್ರವನ್ನು ಉಪೇಕ್ಷಿಸುವಂತೆ ಇಲ್ಲ ಎಂದೂ ಕೋರ್ಟ್ ಹೇಳಿದೆ. ಈ ದುರಿತ ಕಾಲದ ನೆನಪುಗಳು ಮುಂದಿನ ತಲೆಮಾರುಗಳಿಗೆ ವರ್ಗಾವಣೆ ಆದಾಗ, ಆ ತಲೆಮಾರುಗಳು ಇಂದಿನ ತಪ್ಪುಗಳು ಮರುಕಳಿಸದಂತೆ ನೋಡಿಕೊಳ್ಳಬಹುದು. ಹಾಗಾಗಬೇಕು ಎಂದಾದರೆ, ಇಂದಿನ ಎಲ್ಲ ಅನುಭವಗಳು ಸಾಮಾಜಿಕ ಜಾಲತಾಣಗಳ ಮೂಲಕ ಅಥವಾ ಇತರ ಯಾವುದೇ ಮಾಧ್ಯಮದ ಮೂಲಕ ದಾಖಲಾಗಬೇಕು. ಜನ ಕಡುಕಷ್ಟ ಎದುರಿಸುತ್ತಿರುವ ಈ ಸಂದರ್ಭದಲ್ಲಿ ಬಂದಿರುವ ಸುಪ್ರೀಂ ಕೋರ್ಟ್‌ನ ಈ ತೀರ್ಪು, ಅದರಲ್ಲಿನ ಇಂತಹ ಮಾನವೀಯ ಮಾತುಗಳು ನಾಡಿನ ಸಮಷ್ಟಿ ಪ್ರಜ್ಞೆಯ ಮೇಲೆ ಬಹುಕಾಲ ಪ್ರಭಾವ ಬೀರುವುದು ಖಂಡಿತ.

ದಿನದ ಟ್ವೀಟ್

ಬೇಕಾಗಿದೆ ಉಚಿತ ಲಸಿಕೆ

ಸಾರ್ವತ್ರಿಕವಾಗಿ ಉಚಿತ ಲಸಿಕೆ ನೀಡಲು ನಿರ್ದೇಶಿಸುವಂತೆ ಕೋರಿ ಬಂಗಾಳ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಸಿಗಬೇಕಾದ ಈ ಸವಲತ್ತಿಗಾಗಿನ ಹೋರಾಟದಲ್ಲಿ ಬಂಗಾಳವು ಇಂತಹ ಕ್ರಮಕ್ಕೆ ಮುಂದಾದ ಮೊದಲ ರಾಜ್ಯವಾಗಿರುವುದು ಹೆಮ್ಮೆಯ ವಿಷಯವಾಗಿದೆ.

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

25 ವರ್ಷಗಳ ಹಿಂದೆ

ಬುಧವಾರ, 8-5-1996

• ಕರುಣಾಕರನ್ ಹೇಳಿಕೆ ಖಂಡನೆಗೆ ಮೌಖಿಕ ಆದೇಶ

ಬೆಂಗಳೂರು, ಮೇ 7– ಚುನಾವಣೆಯ ಬಳಿಕ ಕಾಂಗ್ರೆ ನಾಯಕತ್ವದಲ್ಲಿ ಬದಲಾವಣೆ ಆಗಬೇಕು ಎನ್ನುವ ಮೂಲಕ ಎಐಸಿಸಿ ಅಧ್ಯಕ್ಷ ಪಿ.ವಿ.ನರಸಿಂಹ ರಾವ್ ಅವರಿಗೆ ಸವಾಲನ್ನು ಒಡ್ಡಿರುವ ಕೇಂದ್ರ ಸಚಿವ ಕೆ.ಕರುಣಾಕರನ್ ಹೇಳಿಕೆಯು ದೇಶದ ಉದ್ದಗಲಕ್ಕೆ ಕಾಂಗ್ರೆ ಪಾಳಯದಲ್ಲಿ ಬಿರುಗಾಳಿಯನ್ನು ಎಬ್ಬಿಸಿದೆ.

ಫಲಿತಾಂಶವನ್ನು ಸ್ವೀಕರಿಸಲು ದೇಶ ಸಜ್ಜಾಗಿರುವಾಗಲೇ ಬಂದಪ್ಪಳಿಸಿದ ಕರುಣಾಕರನ್ ಹೇಳಿಕೆಯನ್ನು ಎಲ್ಲಾ ಕಾಂಗ್ರೆ ಮುಖಂಡರೂ ಖಂಡಿಸಿ ಹೇಳಿಕೆ ನೀಡಬೇಕು ಎಂದು ಪಕ್ಷದ ಹೈಕಮಾಂಡ್ ನೀಡಿರುವ ಮೌಖಿಕ ಆದೇಶ ಗಮನಿಸಿದರೆ, ಹೈಕಮಾಂಡ್ ಕೂಡಾ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ ಎಂದೇ ಅರ್ಥ ಎಂದು ಹಿರಿಯ ಕಾಂಗ್ರೆ ಮುಖಂಡರೊಬ್ಬರು ಇಲ್ಲಿ ಅಭಿಪ್ರಾಯಪಟ್ಟಿದ್ದಾರೆ.

• ಮತ ಎಣಿಕೆ ಇಂದು ಆರಂಭ

ಬೆಂಗಳೂರು, ಮೇ 7– ರಾಜ್ಯದ 27 ಲೋಕಸಭಾ ಕ್ಷೇತ್ರಗಳಲ್ಲಿ ನಾಳೆ ಪ್ರಾರಂಭ ಆಗಲಿರುವ ಮತಗಳ ಎಣಿಕೆ ಕಾರ್ಯಕ್ಕೆ ಚುನಾವಣಾ ಆಯೋಗ ಎಲ್ಲ ತಯಾರಿ ನಡೆಸಿದೆ.

ಗುರುವಾರ ಬೆಳಿಗ್ಗೆ 9ರ ವೇಳೆಗೆ ಬಹುತೇಕ ಎಲ್ಲ ಕ್ಷೇತ್ರಗಳ ಫಲಿತಾಂಶ ಹೊರಬೀಳಲಿದೆ.

50 ವರ್ಷಗಳ ಹಿಂದೆ

ಶನಿವಾರ, 8-5-1971

• ಬಾಂಗ್ಲಾದೇಶ ಸರ್ಕಾರಕ್ಕೆ ಭಾರತದ ಮಾನ್ಯತೆ ಕೂಡಲೆ ಇಲ್ಲ: ಇಂದಿರಾ

ನವದೆಹಲಿ, ಮೇ 7– ಭಾರತವು ಬಾಂಗ್ಲಾದೇಶ ಸರ್ಕಾರಕ್ಕೆ ಈ ಕೂಡಲೇ ಮಾನ್ಯತೆ ನೀಡುವ ಸಂಭವ ಇಲ್ಲ ಎಂದು ಪ್ರಧಾನಿ ಇಂದಿರಾ ಗಾಂಧಿ ಇಂದು ಸಂಸತ್‌ನಲ್ಲಿನ ವಿರೋಧ ಪಕ್ಷದ ನಾಯಕರಿಗೆ ತಿಳಿಸಿದರು.

ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡುವ ಬಗ್ಗೆ ಭಾರತವು ಮಿತ್ರರಾಷ್ಟ್ರಗಳೊಂದಿಗೆ ಪ್ರಸ್ತಾಪಿಸುತ್ತಲೇ ಇದೆ. ಆದರೆ, ಬೇರೆ ಯಾವ ರಾಷ್ಟ್ರವೂ ಮಾನ್ಯತೆ ನೀಡಲು ಇಚ್ಛಿಸುತ್ತಿರುವಂತೆ ಕಾಣಬರುತ್ತಿಲ್ಲ ಎಂದರು.

• ಬಜೆಟ್ ಮಂಡನೆಗೆ ಅಡ್ಡಿ, ಧರಣಿ

ಬೆಂಗಳೂರು, ಮೇ 7– ಆಯವ್ಯಯ ಮಂಡನೆಗೆ ಕ್ರಿಯಾಲೋಪಗಳ ಮೂಲಕ ಇಂದು ನಗರ ಕಾರ್ಪೊರೇಷನ್ ಸಭೆಯಲ್ಲಿ ಸುಮಾರು ನೂರೈವತ್ತು ನಿಮಿಷಗಳ ಕಾಲ ಅಡ್ಡಿ ತಂದ ವಿರೋಧ ಪಕ್ಷದ ಹಲವು ಸದಸ್ಯರು, ತಮ್ಮ ಯತ್ನ ವಿಫಲವಾದಾಗ ಮೇಯರ್ ಶ್ರೀ ಜೆ.ಲಿಂಗಯ್ಯ ಅವರ ವೇದಿಕೆಯ ಮೇಲೆ ಧರಣಿ ಸತ್ಯಾಗ್ರಹ ಹೂಡಿದರು.

ಮೇಯರ್ ಅವರು ನಿಯಮಗಳನ್ನು ಗಾಳಿಗೆ ತೂರಿದ್ದಾರೆಂದು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು.

ಕಾರ್ಬನ್ ಡೈ ಆಕ್ಸೈಡ್ ಉತ್ಸರ್ಜನೆಯ ನಿಯಂತ್ರಣಕ್ಕೆ ಈಗಿನಿಂದಲೇ ಕಾರ್ಯತಂತ್ರ ರೂಪಿಸಬೇಕಿದೆ

ಶೂನ್ಯ ಉತ್ಸರ್ಜನೆ: ಭಾರತಕ್ಕೆ ಸವಾಲು

ವಿಶ್ಲೇಷಣೆ

ಟಿ.ಆರ್.ಅನಂತರಾಮು

ಜಗತ್ತು ಭೂದಿನ ಆಚರಿಸುತ್ತಿದ್ದ ಅದೇ ದಿನ (ಏ. 22) ಅಮೆರಿಕದ ಅಧ್ಯಕ್ಷ ಜೋ ಬೈಡನ್, ವಾಷಿಂಗ್ಟನ್‌ನಲ್ಲಿ 40 ರಾಷ್ಟ್ರಗಳ ಜಾಲಗೋಷ್ಠಿ ಏರ್ಪಡಿಸಿದ್ದರು. ಒಂದರ್ಥದಲ್ಲಿ ಇದು ಕೂಡ ತುರ್ತೇ. ಇದರಲ್ಲಿ ಭಾರತದ ಪ್ರಧಾನಿಯೂ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕಾಗಿತ್ತು. ಇದು ಶೂನ್ಯ ಉತ್ಸರ್ಜನೆ ಕುರಿತ ಗೋಷ್ಠಿ. ಶೂನ್ಯ ಉತ್ಸರ್ಜನೆ ಎಂದರೆ ಕಾರ್ಬನ್ ಡೈ ಆಕ್ಸೈಡ್ ಉತ್ಸರ್ಜನೆಯನ್ನು ಏಕಾಏಕಿ 'ಸೊನ್ನೆ' ಹಂತಕ್ಕೆ ತರುವುದಲ್ಲ. ವಾಯುಗೋಳಕ್ಕೆ ಇದರ ಜಮೆ ಆಗುತ್ತಲೇ ಇರುತ್ತದೆ, ಆದರೆ ಅಷ್ಟೇ ಪ್ರಮಾಣದ ಉತ್ಸರ್ಜನೆಯನ್ನು ಹೀರಿಕೊಳ್ಳುವ ತಂತ್ರಜ್ಞಾನ ಅಳವಡಿಸುವುದು; ಅಂದರೆ ಹೊಸ ಹೊರೆ ಶೂನ್ಯ. ಅಭಿವೃದ್ಧಿ ಹೊಂದಿರುವ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ಬದ್ಧತೆಯನ್ನು ಬಾಯಿಬಿಟ್ಟು ಹೇಳಲೆಂದೇ ಯೋಜಿಸಿದ ಜಾಲಗೋಷ್ಠಿ.

ಇದರಲ್ಲಿ ಎರಡು ಬೆಳವಣಿಗೆಗಳನ್ನು ಗಮನಿಸಬಹುದು. ಒಂದು, 2015ರ ಪ್ಯಾರಿಸ್ ಒಪ್ಪಂದಕ್ಕೆ ಅಮೆರಿಕ ಬದ್ಧವಲ್ಲವೆಂದು ಹೊರನಡೆದು ಜಗತ್ತಿಗೆ ಡೊನಾಲ್ಡ್ ಟ್ರಂಪ್ ಅಸಮಾಧಾನದ ಕಿಡಿ ಹೊತ್ತಿಸಿದ್ದರು. ಪ್ಯಾರಿಸ್ ಒಪ್ಪಂದದ ಪ್ರಕಾರ, ಕೈಗಾರಿಕಾ ಯುಗಕ್ಕಿಂತ ಮೊದಲು ವಾಯುಗೋಳದಲ್ಲಿದ್ದ ಉಷ್ಣತೆಯ ಮಟ್ಟಕ್ಕೆ ಈಗಿನ ಉಷ್ಣತೆಯನ್ನು ತರುವುದು. ಅಮೆರಿಕದ ಪ್ರತೀ ಪ್ರಜೆಯ ತಲಾವಾರು ವಾರ್ಷಿಕ ಕಾರ್ಬನ್ ಡೈ ಆಕ್ಸೈಡ್ ಹೊರೆ ಇಪ್ಪತ್ತು ಟನ್ನುಗಳಷ್ಟು ಎಂಬ ಕರಾಳ ಸತ್ಯ ಗೊತ್ತಿದ್ದರೂ ಟ್ರಂಪ್ ಅಹಂಕಾರದ ಮಾತನ್ನಾಡಿದ್ದರು. ಈಗಿನ ಅಧ್ಯಕ್ಷ ಬೈಡನ್, ಪ್ಯಾರಿಸ್ ಒಪ್ಪಂದಕ್ಕೆ ಅಮೆರಿಕ ಬದ್ಧವೆಂದು ಜಗತ್ತಿಗೆ ಸಾರಲೇಬೇಕಾಗಿತ್ತು. 2030ರ ಹೊತ್ತಿಗೆ ಅಮೆರಿಕ ಈಗಿನ ಉತ್ಸರ್ಜನೆಯ ಶೇ 52ರಷ್ಟು ಭಾಗವನ್ನು ಕಡಿಮೆಗೊಳಿಸುತ್ತದೆ, 2050ರ ಹೊತ್ತಿಗೆ ಶೂನ್ಯ ಉತ್ಸರ್ಜನೆಗೆ ಬದ್ಧ ಎಂದು ಬೈಡನ್ ಘೋಷಿಸಿದಾಗ, ಉಳಿದ 39 ರಾಷ್ಟ್ರಗಳಿಗೆ ಇದು ಪೀಠಿಕೆಯಾಯಿತು.

ಎರಡನೆಯ ಸಂಗತಿ, ಬದ್ಧತೆಯಿಂದ ಸದಾ ನುಣುಚಿಕೊಳ್ಳುತ್ತಿದ್ದ ಚೀನಾ ಈ ಬಾರಿ ಚೌಕಾಸಿಗೆ ಇಳಿದು, ತಮ್ಮ ದೇಶಕ್ಕೆ 2060ರವರೆಗೆ ಅವಕಾಶ ಕೊಡಿ ಎಂದು ಗೋಗರೆಯಿತು. ಜಗತ್ತಿನ ಎರಡನೇ ಅತಿ ಮಾಲಿನ್ಯಕಾರಕ ದೇಶ ಚೀನಾ ಈ ಹಿಂದೆ ಇಂಥ ಬದ್ಧತೆಯನ್ನು ಪ್ರದರ್ಶಿಸಿಯೇ ಇರಲಿಲ್ಲ. ಕಲ್ಲಿದ್ದಲು ಬಳಸುವ ರಾಷ್ಟ್ರಗಳಲ್ಲಿ ಚೀನಾ ಈಗಲೂ ಮೊದಲ ಸ್ಥಾನದಲ್ಲಿದೆ. ಇಲ್ಲಿ ಭಾಗವಹಿಸಿದ್ದ ಭಾರತ, ಜರ್ಮನಿ, ಫ್ರಾನ್ಸ್, ಜಪಾನ್, ರಷ್ಯಾ, ಚೀನಾ ಒಂದೊಂದೂ ತಮ್ಮ ಗುರಿ ಕುರಿತು ಸ್ಪಷ್ಟ ವಿಚಾರಗಳನ್ನು ಮುಂದಿಟ್ಟವು. ಶೂನ್ಯ ಉತ್ಸರ್ಜನೆಯಲ್ಲಿ ಯುರೋಪು ಇತರ ದೇಶಗಳಿಗೆ ಮಾರ್ಗದರ್ಶಿಯಾಗಲಿದೆ ಎಂದು ಯುರೋಪಿಯನ್ ಕಮಿಷನ್ ಪ್ರತಿನಿಧಿ ವಿಶ್ವಾಸದಿಂದಲೇ ಹೇಳಿದರು. ಬಡ ರಾಷ್ಟ್ರಗಳಿಗೆ ಮಾಲಿನ್ಯ ನಿವಾರಕ ಯಂತ್ರೋಪಕರಣಗಳನ್ನು ಕೊಡುವುದಕ್ಕೆ ಆದ್ಯತೆ ನೀಡಿ ಎಂದು ರಷ್ಯಾವು ಗೋಷ್ಠಿಯ ಗುರಿಯನ್ನು ಇನ್ನೊಂದೆಡೆಗೆ ಸೆಳೆಯಿತು. ಎಲ್ಲ ದೇಶಗಳ ಒಕ್ಕೊರಲಿನ ನಿರ್ಧಾರ- 2030ರ ಹೊತ್ತಿಗೆ ಅರ್ಧ ದಾರಿ ಕ್ರಮಿಸುವುದು. 2050ರ ಹೊತ್ತಿಗೆ ಎದೆತಟ್ಟಿ 'ನಮ್ಮದು ಶೂನ್ಯ ಉತ್ಸರ್ಜನೆಯ ದೇಶ' ಎಂದು ಹೇಳುವುದು ಆಗಿತ್ತು.

ಭಾರತ ಎರಡು ವಿಚಾರಗಳಲ್ಲಿ ಜಾಣತನ ತೋರಿಸಿತು. 2030ರ ಹೊತ್ತಿಗೆ ನಮ್ಮ ಶಕ್ತಿ ಬೇಡಿಕೆಯ ಶೇ 40ರಷ್ಟು ಮೂಲವು ನವೀಕರಿಸಬಹುದಾದ ಇಂಧನದಿಂದ ಬರುತ್ತದೆ ಎಂಬ ಬದ್ಧತೆಯನ್ನು ತೋರಿಸಿತು. ಹೀಗೆ ತೋರುವಾಗ ಮೆರೆದ ಜಾಣ್ಮೆ ಎಂದರೆ, ಜಾಗತಿಕವಾಗಿ ಕಾರ್ಬನ್ ಡೈ ಆಕ್ಸೈಡ್‌ನ ಹೊರೆ ಇತರ ದೇಶಗಳಿಗೆ ಹೋಲಿಸಿದರೆ ನಮ್ಮದು ತೀರಾ ಕಡಿಮೆ. ವಾರ್ಷಿಕ ತಲಾವಾರು ಎರಡು ಟನ್ನು ಅಷ್ಟೇ. 135 ಕೋಟಿ ಜನರ ಲೆಕ್ಕದಲ್ಲಿ ಇದು ನಗಣ್ಯ ಎನ್ನುವಂತೆ ಬಿಂಬಿಸಿತು. ಆದರೆ ಭೂಮಿಯ ಪರಿಸ್ಥಿತಿ ಲೆಕ್ಕ ಹಾಕಿದರೆ, ಭಾರತದಿಂದಲೇ 270 ಕೋಟಿ ಟನ್ನು ವಾರ್ಷಿಕ ಉತ್ಸರ್ಜನೆ ಎಂದರೆ ಅದು ವಾಯುಗೋಳಕ್ಕೆ ಭಾರ ಅಲ್ಲವೇ? ಇದೇ ಸಂದರ್ಭದಲ್ಲಿ ಅಮೆರಿಕದೊಂದಿಗೆ ಶುದ್ಧ ಶಕ್ತಿಗಾಗಿ ಮಾಡಿಕೊಂಡ ಒಪ್ಪಂದ ಭಾರತದ ಮಟ್ಟಿಗೆ ಒಂದು ದೊಡ್ಡ ಹೆಜ್ಜೆ ಎನ್ನಬಹುದು. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಭಾರತ ತನ್ನ ನಿಲುವನ್ನು ವ್ಯಕ್ತಪಡಿಸಿದೆ. 2030ರ ಹೊತ್ತಿಗೆ, ನವೀಕರಿಸಬಹುದಾದ ಶಕ್ತಿ ಮೂಲದಿಂದ 450 ಗಿಗಾವಾಟ್ ವಿದ್ಯುತ್ ಉತ್ಪಾದನೆಯ ಗುರಿ ಇಟ್ಟುಕೊಂಡಿದೆ.

ಈ ಸಂದರ್ಭದಲ್ಲಿ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾದ ಪ್ರಶ್ನೆಗಳು ಬೇರೆಯವೇ ಇವೆ. ಇಡೀ ಭಾರತದಲ್ಲಿ ಶೇ 70ರಷ್ಟು ಶಕ್ತಿ ಸದ್ಯದಲ್ಲಿ ಪೂರೈಕೆಯಾಗುತ್ತಿರುವುದು ಉಷ್ಣಸ್ಥಾವರಗಳಿಂದಲೇ. ಕಲ್ಲಿದ್ದಲು ಬಳಕೆ ಇಲ್ಲಿ ಅನಿವಾರ್ಯ. ಭಾರತದಲ್ಲಿ ಇನ್ನೂ ನೂರು ವರ್ಷ ಬಳಸುವಷ್ಟು ಕಲ್ಲಿದ್ದಲು ಸಂಪನ್ಮೂಲವಿದೆ ಎಂದು ಕಲ್ಲಿದ್ದಲು ಸಚಿವಾಲಯವೇ ಖಾತರಿಪಡಿಸಿದೆ- ಅಂದರೆ 3.20 ಲಕ್ಷ ಕೋಟಿ ಟನ್ನು ಕಲ್ಲಿದ್ದಲು. ಇಷ್ಟು ಸಂಪನ್ಮೂಲವನ್ನು ಭಾರತ ಕಡೆಗಣಿಸುವುದೇ? ವಿಷಾದವೆಂದರೆ, ಹೆಚ್ಚಿನ ಪಾಲು ಕಲ್ಲಿದ್ದಲು ಕಳಪೆ ದರ್ಜೆಯದು, ಅಂದರೆ ಪ್ರಬಲ ಮಾಲಿನ್ಯಕಾರಕ. ಹಂತಹಂತವಾಗಿಯಾದರೂ ನಮ್ಮಲ್ಲಿ ಉಷ್ಣಸ್ಥಾವರಗಳ ಅವಲಂಬನೆಯನ್ನು ಕಡಿಮೆ ಮಾಡುವ ಮಾತು ಯಾವ ಗೋಷ್ಠಿಗಳಲ್ಲೂ ಪ್ರಸ್ತಾಪಕ್ಕೆ ಬಂದಿಲ್ಲ. ಹೆಚ್ಚಿನ ಪಾಲು ಉಷ್ಣಸ್ಥಾವರಗಳು ತಮ್ಮಲ್ಲಿ ಆಯುಷ್ಯದ ಕೊನೆಯ ಹಂತದಲ್ಲಿವೆ, ಅಂದರೆ ಉತ್ಸರ್ಜನೆಯೂ ಹೆಚ್ಚು. ಇಲ್ಲಿ ಇನ್ನೊಂದು ಸತ್ಯವಿದೆ. ಪೆಟ್ರೋಲಿಯಂ ಉತ್ಪನ್ನ ಮತ್ತು ಉತ್ಪಾದನಾ ಸಂಸ್ಥೆಗಳ ಮೇಲೆ ಹಾಕುವ ತೆರಿಗೆಯಿಂದಾಗಿ ಭಾರತಕ್ಕೆ ವಾರ್ಷಿಕ ₹ 3.80 ಲಕ್ಷ ಕೋಟಿ ಆದಾಯ ಬರುತ್ತಿದೆ. ಇದನ್ನು ಭಾರತ ಲಘುವಾಗಿ ಪರಿಗಣಿಸಲು ಆದೀತೆ?

ಹಿಮಾಲಯ ಶ್ರೇಣಿಯ ನದಿಗಳನ್ನುಳಿದರೆ ಹೆಚ್ಚು ಕಡಿಮೆ ಜಲವಿದ್ಯುತ್ ಯೋಜನೆಗಳ ಗರಿಷ್ಠ ಬಳಕೆ ನಮ್ಮಲ್ಲಾಗಿದೆ. ಆದರೆ ಇದೇ ಫೆಬ್ರುವರಿ ತಿಂಗಳಲ್ಲಿ ನಂದಾದೇವಿ ಪರ್ವತದಿಂದ ಹಿಮನದಿಯ ತುಂಡೊಂದು ಕಿತ್ತುಬಂದು ಋಷಿಗಂಗಾ-ತಪೋವನದ ಭಾಗದಲ್ಲಿ ಜಲವಿದ್ಯುತ್ ಯೋಜನೆಗಳನ್ನೇ ನಾಶಪಡಿಸಿದಾಗ, ಇಡೀ ಗಂಗಾನದಿಯ ಪಾತ್ರದುದ್ದಕ್ಕೂ ಯೋಜಿಸಿದ್ದ ಜಲವಿದ್ಯುತ್ ಯೋಜನೆಗಳನ್ನು ಸ್ಥಗಿತಗೊಳಿಸಬೇಕಾಯಿತು. ರಾಷ್ಟ್ರದ ಒಟ್ಟು ಶಕ್ತಿಯ ಉತ್ಪಾದನೆಯಲ್ಲಿ ಸದ್ಯ 22 ಪರಮಾಣು ಸ್ಥಾವರಗಳಿಂದ ಪಡೆಯುತ್ತಿರುವ ವಿದ್ಯುತ್ 4,300 ಮೆಗಾವಾಟ್‌ಗಳಷ್ಟು. ಅಂದರೆ ಈ ಮೂಲದ ಕೊಡುಗೆ ಶೇ 5 ಅಷ್ಟೇ. ಫುಕುಶಿಮಾ ದುರಂತದ ನಂತರವೂ ಭಾರತ ತಲೆಕೆಡಿಸಿಕೊಂಡಿಲ್ಲ. ಇನ್ನೂ ಏಳು ಪರಮಾಣು ಸ್ಥಾವರಗಳ ನಿರ್ಮಾಣದಲ್ಲಿ ತೊಡಗಿದೆ. 2030ರ ಹೊತ್ತಿಗೆ ಭಾರತ ತನ್ನ ಆಂತರಿಕ ಬಳಕೆಗೆ ಬೇಕಾದ ಶೇ 25ರಷ್ಟು ವಿದ್ಯುತ್ ಶಕ್ತಿಯನ್ನು ಈ ಮೂಲದಿಂದಲೇ ಪಡೆಯುವ ಗುರಿ ಇಟ್ಟುಕೊಂಡಿರುವುದು ಕಳವಳಕಾರಿ.

ಸೌರಶಕ್ತಿಗೆ ಸಿಕ್ಕಷ್ಟು ಪ್ರಾಶಸ್ತ್ಯವು ಗಾಳಿಯಿಂದ ಪಡೆಯುವ ವಿದ್ಯುತ್ ಶಕ್ತಿಗೆ ಸಿಕ್ಕುತ್ತಿಲ್ಲ. ಆದರೂ ಈ ಮೂಲದಿಂದ ಶೇ 10ರಷ್ಟು ಶಕ್ತಿ ಪೂರೈಕೆಯಾಗುತ್ತಿದೆ. ಆದರೆ ಇದು ಅನಿಶ್ಚಿತ. ಗಾಳಿಯ ದಿಕ್ಕು ಮತ್ತು ವೇಗ ಬದಲಾದರೆ ವಿದ್ಯುತ್ ಉತ್ಪಾದನೆಯಲ್ಲಿ ಏರಿಳಿತ ತಲೆದೋರುತ್ತದೆ. ಹಾಗೆಯೇ 2031ರ ಹೊತ್ತಿಗೆ ಭಾರತ ಸರ್ಕಾರ ವಿದ್ಯುತ್ ವಾಹನಗಳ ಉತ್ಪಾದನೆಗೆ 31,000 ಕೋಟಿ ರೂಪಾಯಿ ತೊಡಗಿಸುವುದಾಗಿ ಇತ್ತೀಚೆಗೆ ನಿರ್ಣಯವೊಂದನ್ನು ಕೈಗೊಂಡಿದೆ. ಜೊತೆಗೆ ಇದರಿಂದಾಗಿ 55,000 ಮಂದಿಗೆ ಉದ್ಯೋಗ ದೊರೆಯುವುದಾಗಿಯೂ ಹೇಳಿದೆ. ಆದರೆ ಈ ಕುರಿತು ಸ್ಪಷ್ಟ ಚಿತ್ರಣಗಳಿಲ್ಲ. ಖಾಸಗಿ ಸಂಸ್ಥೆಗಳಿಗೆ ಈ ದಿಸೆಯಲ್ಲಿ ಯಾವ ಪ್ರಮಾಣದ ಅನುದಾನ ಸಿಗುತ್ತದೆ ಎಂಬುದರ ಬಗ್ಗೆಯೂ ಗೋಜಲುಗಳಿವೆ. ಇದರ ಜೊತೆಗೆ ವಿದ್ಯುತ್ತಿನ ಮೂಲ ಯಾವುದು ಎಂಬ ಪ್ರಶ್ನೆಯೂ ಅಷ್ಟೇ ಗಂಭೀರವಾದುದು.

ಭಾರತ ಈಗಿನಿಂದಲೇ ಕಾರ್ಬನ್ ಡೈ ಆಕ್ಸೈಡ್ ಉತ್ಸರ್ಜನೆಯ ನಿಯಂತ್ರಣಕ್ಕೆ ಕಾರ್ಯತಂತ್ರ ರೂಪಿಸಬೇಕಾಗಿದೆ. ಶೂನ್ಯ ಉತ್ಸರ್ಜನೆಗೆ ಇದೇ ಆರಂಭಿಕ ಹೆಜ್ಜೆಯಾಗಬೇಕು.

ಚುರುಮುರಿ

ಕೊನೆಯ ನಗು!

• ಎಸ್.ಬಿ.ರಂಗನಾಥ್

ಬೆಳ್ಳಂಬೆಳಿಗ್ಗೆ ಮನೆಗೆಲಸದ ಮಮ್ತಾಜ್ 'ದೀದಿ ದೀದಿ' ಎಂದು ಬಾಗಿಲು ಬಡಿದಳು.

ಕೂಲಿ ಕೆಲಸಕ್ಕೆ ಹೋಗುವುದರೊಳಗೆ ನಮ್ಮ ಮನೆಕೆಲಸ ಮಾಡಬೇಕಿದ್ದುದರಿಂದ ಮುಂಜಾನೆಯೇ ಕೆಲಸಕ್ಕೆ ಬರುತ್ತಿದ್ದಳು.

'ದಾದಾ' ಎಂದು ಕರೆಯುತ್ತಿದ್ದಂತೆ ಬಾಗಿಲು ತೆರೆಯುತ್ತಿದ್ದೆ. ಇವತ್ತು 'ದೀದಿ' ಎನ್ನುತ್ತಿದ್ದಾಳೆ! ದೀದಿಯೇ ತೆರೆಯಲಿ ಎಂದು ಸುಮ್ಮನಿದ್ದೆ.

'ಕೂಗ್ತಿರೋದು ಕೇಳಿಸ್ತಿಲ್ವೇನ್ರೀ?'- ಬಂದೇಬಿಡ್ತು ಫರ್ಮಾನ್.

'ಕರೆದದ್ದು ನಿನ್ನನ್ನ' ಎಂದು ಮೆಲ್ಲಗೆ ಗೊಣಗಿಕೊಳ್ಳುತ್ತಾ ಬಾಗಿಲು ತೆರೆದೆ.

'ಇನ್ಮೇಲೆ ಹೆಸ್ರು ನನ್ನದಾದ್ರೂ ಕೆಲ್ಸ ನಿಮ್ದೇ... ನೋಡಿದ್ರಲ್ಲಾ, ಮೋದಿಗಿಂತ ದೀದಿಯೇ ಮೇಲು. ಮುಖ್ಯಮಂತ್ರಿಯಾಗಿ ಹ್ಯಾಟ್ರಿಕ್ ಹೊಡೆದೇಬಿಟ್ರು!'

'ಮಮ್ತಾಜ್, ದೀದಿ ಕಡೆಗೆ ಯಾಕೆ ಪಕ್ಷಾಂತರ ಮಾಡಿದ್ಳೂಂತ ಗೊತ್ತಾಯ್ತು'.

'ಮನೆಯ ಮಗಳ ಮೇಲೆ 'ಶಾ'ಣೇರು ಮಾಡಿದ ಮೋಡಿ(ದಿ) ಏನೂ ವರ್ಕ್‌ಔಟ್ ಆಗ್ಲಿಲ್ವಲ್ಲ. ವ್ಹೀಲ್ ಚೇರಿನಲ್ಲೇ ಶುರು ಮಾಡಿದ ಆಟದಲ್ಲಿ ಆಕೇದೇ ಕೊನೇ ನಗು!' ಎಂದು ಗಹಗಹಿಸಿ ನಕ್ಕಳು.

ವಿಷಯಾಂತರಿಸಲು, 'ಯಾಕೆ ಹಾಗೆ ನಗ್ತೀಯ? ವಿಶ್ವ ನಗುವಿನ ದಿನ ಮುಗಿದು ಹೋಯ್ತಲ್ಲ?' ಎಂದೆ.

'ಹೆಂಗಸರ ಮೇಲೆ ಮೀಸೆ ತಿರುಗಿಸೋ ನಿಮ್ಮಂಥೋರಿಗೆ ನಾಚ್ಕೆಯಾಗ್ಬೇಕು... ಗೊತ್ತಿದೆಯಲ್ಲ, ಕೇರಳದ ಚುನಾವಣೇಲಿ ಶೈಲಜಾ ಟೀಚರ್ ಅರವತ್ತೊಂದು ಸಾವಿರ ಮತಗಳ ಅಂತರದಿಂದ ಗೆದ್ದು ದಾಖಲೆ ಮಾಡಿದ್ದು!'

'ಅಷ್ಟೊಂದು ವೋಟು ಹೇಗೆ ಬಂದವೋ?'

'ಕೊರೊನಾ ಕಾಲದಲ್ಲಿ ದಕ್ಷತೆಯಿಂದ ಕೆಲಸ ಮಾಡಿರೋ ಮೂವರು ವಿಶ್ವ ನಾಯಕಿಯರಲ್ಲಿ ಅವರೊಬ್ರು. ಆರೋಗ್ಯ ಮಂತ್ರಿಯಾಗಿದ್ದ ಆಕೆ ಆಮ್ಲಜನಕ ಉತ್ಪಾದನಾ ಘಟಕಗಳನ್ನ ಸ್ಥಾಪಿಸಿ ಬೇರೆ ರಾಜ್ಯಗಳಿಗೂ ಆಮ್ಲಜನಕ ಕೊಟ್ರಂತೆ'!

ಅಷ್ಟರಲ್ಲಿ ಮಮ್ತಾಜ್ ಪೇಪರ್ ತಂದಿಟ್ಟಳು. 'ಆಮ್ಲಜನಕದ ಕೊರತೆಯಿಂದ ಇಪ್ಪತ್ನಾಲ್ಕು ಜನರ ಸಾವು... ಮುಖ್ಯಮಂತ್ರಿ ಮನೆ, ವಿಧಾನಸೌಧದ ಮುಂದೆ ಕೊರೊನಾ ಸೋಂಕಿತರ ಗೋಳು... ದುಡ್ಡಿಗಾಗಿ ಬೆಡ್ಡು...'

ಉಸಿರು ಕಟ್ಟಿದಂತಾಗಿ ಕೆಮ್ಮಿದೆ. ನನ್ನಾಕೆಯ ಕುಟುಕು, 'ವಿಶ್ವ ಅಸ್ತಮಾ ದಿನ ಬಂದು ಹೋಯ್ತುಲ್ಲಾ'!

ಸಂಗತ

ಹಾಡು, ಹಾರು, ಮೇಲಕ್ಕೇರು!

ವಾಯುಗುಣದ ಹಲವು ಸೂಕ್ಷ್ಮ ಹೊಳಹುಗಳನ್ನು ಬಿತ್ತರಿಸುವ ಹಕ್ಕಿ ವಲಸೆಯು ಅಚ್ಚರಿಯ ಜೊತೆಗೆ ಎಚ್ಚರಿಕೆಯನ್ನೂ ನೀಡುತ್ತದೆ

• ಗುರುರಾಜ್ ಎಸ್.ದಾವಣಗೆರೆ

ಸಿಂಗ್, ಫ್ಲೈ, ಸೋರ್- ಲೈಕ್ ಎ ಬರ್ಡ್. ಇದು ಈ ವರ್ಷದ 'ವಿಶ್ವ ವಲಸೆ ಹಕ್ಕಿಗಳ ದಿನ'ದ (ಮೇ 8) ಧ್ಯೇಯವಾಕ್ಯ. ಲಕ್ಷಾಂತರ ಮೈಲಿ ದೂರ ಹಾರಿ ವಲಸೆ ಬಂದು, ವಲಸೆ ಹೋಗಿ, ವಿವಿಧ ಬಣ್ಣ, ಗಾತ್ರ, ಕೂಗು, ಗೂಡು ಮತ್ತು ಜೀವನಕ್ರಮಗಳಿಂದ ನಮ್ಮಲ್ಲಿ ವಿಪರೀತ ಕುತೂಹಲ ಹುಟ್ಟಿಸಿ, ಕಳೆ ಕೀಟ ನಿಯಂತ್ರಿಸಿ, ಆಹಾರ ಉತ್ಪಾದನೆಗೂ ನೆರವಾಗುವ ವಲಸೆ ಹಕ್ಕಿಗಳು ಸಂತತಿ ವೃದ್ಧಿಸಿಕೊಂಡು, ಜೈವಿಕ ಸರಪಳಿಯನ್ನು ಮತ್ತಷ್ಟು ಬಿಗಿಗೊಳಿಸಿ ಮೂಲ ಸ್ಥಾನಗಳಿಗೆ ಹಿಂದಿರುಗುತ್ತವೆ.

ಋತುಮಾನಕ್ಕೆ ಅನುಗುಣವಾಗಿ ಹಗಲು ಕಡಿಮೆಯಾಗಿ, ಶೀತ ಹೆಚ್ಚಾಗಿ ಆಹಾರದ ಕೊರತೆ ಎದುರಾದಾಗ ಭಾರತ ಉಪಖಂಡದ ಕಡೆ ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳು, ಸೆಂಟ್ರಲ್ ಏಷ್ಯನ್ ಫ್ಲೈವೇ ಮೂಲಕ 30 ದೇಶಗಳ ಮೇಲೆ ಹಾದು ಬರುತ್ತವೆ. ಪ್ರತಿವರ್ಷ ಸೆಪ್ಟೆಂಬರ್– ಅಕ್ಟೋಬರ್‌ನಲ್ಲಿ 29 ವಿವಿಧ ದೇಶಗಳಿಂದ ನಮ್ಮ ಪ್ರದೇಶಗಳಿಗೆ ವಲಸೆ ಬಂದು, ಮೊಟ್ಟೆ ಇಟ್ಟು, ಮರಿಗಳಿಗೆ ಜನ್ಮ ನೀಡಿ ಮಾರ್ಚ್–ಏಪ್ರಿಲ್ ವೇಳೆಗೆ ಸ್ವಸ್ಥಾನಗಳಿಗೆ ಮರಳುತ್ತವೆ.

ನಮ್ಮ ರಂಗನತಿಟ್ಟು, ರಾಜಸ್ಥಾನದ ಭರತ್‌ಪುರ, ಒಡಿಶಾದ ಚಿಲ್ಕಾ ಸರೋವರ, ಜಾಮ್‌ನಗರ್‌ನ ಖಿಜಾದಿಯ, ಚೆನ್ನೈನ ಪಲ್ಲಿಕರ್ಣೈ, ಆಂಧ್ರಪ್ರದೇಶದ ಪುಲಿಕಾಟ್ ಪಕ್ಷಿಧಾಮಗಳಲ್ಲಿ ಪ್ರತಿವರ್ಷ ವಿದೇಶಗಳಿಂದ ಆಗಮಿಸುವ ಹಕ್ಕಿಗಳದ್ದೇ ಕಲರವ.

ವಲಸೆ ಬರುವ ಹಕ್ಕಿಗಳೇನೂ ಸುಮ್ಮನೆ ಬರುತ್ತವೆ ಎಂದುಕೊಂಡಿರಾ? ಯುರೋಪ್ ಮತ್ತು ಮಧ್ಯ ಏಷ್ಯಾದಿಂದ ಹಾರಿ ಸಾವಿರಾರು ಕಿ.ಮೀ. ದೂರ ಕ್ರಮಿಸುವ ಆಲಿವ್ ಹಸಿರು ಬಣ್ಣದ ಉಲಿಯಕ್ಕಿಗಳು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ನುಗ್ಗಿ, ಕಿವಿ ತೂತಾಗುವಂತೆ ಹಾಡುತ್ತಾ ತಾವು ಗೂಡುಕಟ್ಟುವ ಮರದ ಸುತ್ತ ನಾಲ್ಕು ಪ್ರದಕ್ಷಿಣೆ ಹಾಕಿ ನಂತರ ವಿರಮಿಸುತ್ತವೆ. ಕೇವಲ 20 ಗ್ರಾಂ ತೂಕದ ಸೈಬೀರಿಯಾದ 'ಲಿಟಲ್‌ಸ್ಟಿಂಟ್' ಹಕ್ಕಿ ಸುಮಾರು 8,000 ಕಿ.ಮೀ. ದೂರದಿಂದ ತಮಿಳುನಾಡಿನ ಪಾಯಿಂಟ್ ಕಾಲಿಮೆರಿ ಪಕ್ಷಿಧಾಮಕ್ಕೆ ಬರುತ್ತದೆ. ಅಮುರ್ ಫಾಲ್ಕನ್ ರಷ್ಯಾದಿಂದ ಹೊರಟು ನಾಗಾಲ್ಯಾಂಡ್‌ನ ಡೊಯಾಂಗ್ ಸರೋವರಕ್ಕೆ ಬಂದು ಆಫ್ರಿಕಾ ತಲುಪಲು 22,000 ಕಿ.ಮೀ. ಕ್ರಮಿಸುತ್ತದೆ. ಗ್ರೇ ವ್ಯಾಗ್‌ಟೇಲ್ (ಬೂದು ಕುಂಡೆಕುಸ್ಕ) ಕಳೆದ ಐದು ವರ್ಷಗಳಿಂದ ಸತತವಾಗಿ ಮಧ್ಯ ಏಷ್ಯಾ ಮತ್ತು ರಷ್ಯಾದಿಂದ ತಮಿಳುನಾಡಿನ ವಾಲ್‌ಪರೈಗೆ ಬರುತ್ತಿದೆ. ಹಿಮಾಲಯದ ತಪ್ಪಲಿನ ನವರಂಗ ಹಕ್ಕಿ (ಇಂಡಿಯನ್ ಪಿಟ್ಟ) ಅಲ್ಲಿನ ಚಳಿ ತಾಳಲಾರದೆ ದಕ್ಷಿಣ ಭಾರತಕ್ಕೆ ಬರುತ್ತದೆ.

ಹಿಮಾಚಲದ ರೋಸ್‌ಫಿಂಚ್, ನೀಲಗಿರಿ ವಲಯದ ರಸ್ತೆಗಳ ಪಕ್ಕ ಕಾಳು ಹೆಕ್ಕುತ್ತಿರುವುದನ್ನು ಪ್ರತಿವರ್ಷ ಕಾಣುತ್ತೇವೆ. ಅಕ್ಟೋಬರ್‌ನಲ್ಲಿ ಫ್ಲೆಮಿಂಗೋಗಳು ಪುಲಿಕಾಟ್ ಪಕ್ಷಿಧಾಮದಲ್ಲಿ ಠಿಕಾಣಿ ಹೂಡಿರುತ್ತವೆ! ವಲಸೆ ಹಕ್ಕಿಗಳ ಅಧ್ಯಯನಕ್ಕಾಗಿ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯವರು 3,000 ಹಕ್ಕಿಗಳಿಗೆ ಗುರುತಿನ ಬಳೆ ತೊಡಿಸಿದ್ದಾರೆ.

ವಲಸೆ ಮಾರ್ಗದುದ್ದಕ್ಕೂ ಬೀಜ ಪ್ರಸರಣ ಮಾಡಿ ಹೊಸ ಸಸ್ಯ ಸಂಪತ್ತನ್ನು ವೃದ್ಧಿಸುತ್ತ, ಗೂಡು ಕಟ್ಟಿ, ಮೊಟ್ಟೆ ಇಟ್ಟು, ಮರಿ ಮಾಡುವ ಹಕ್ಕಿಗಳು ಸುತ್ತಲಿನ ಹೊಲ- ಗದ್ದೆಗಳಲ್ಲಿ ರೈತನಿಗೆ ಶತ್ರುವಾಗಿ ಕಾಡುವ ಕಳೆ ಕೀಟಗಳನ್ನು ಧ್ವಂಸ ಮಾಡುತ್ತವೆ. ಮಿಡತೆ ಹಾವಳಿಯನ್ನು ತಡೆಯುತ್ತವೆ. ಹಕ್ಕಿ ಹಿಕ್ಕೆಯ ಸಾರಜನಕ, ಮೊಟ್ಟೆ ಕವಚಗಳ ಕ್ಯಾಲ್ಸಿಯಂ ಮತ್ತು ಇತರ ಮಿನರಲ್‌ಗಳು ಮಣ್ಣಿನ ಫಲವತ್ತತೆ ಹೆಚ್ಚಿಸುತ್ತವೆ.

ಬೇಟೆ ಹಕ್ಕಿಗಳ ಕಣ್ಣಿಗೆ ಬೀಳದಿರಲು ಬಹುತೇಕ ಹಕ್ಕಿಗಳು ರಾತ್ರಿಯ ವೇಳೆ ವಲಸೆ ಕೈಗೊಳ್ಳುತ್ತವೆ. ಕೆಲವೊಮ್ಮೆ ನಗರಗಳ ಪ್ರಖರ ದೀಪದ ಬೆಳಕು ಪಕ್ಷಿಗಳ ದಾರಿ ತಪ್ಪಿಸುತ್ತದೆ. ಭೂಮಿಯ ಗುರುತ್ವಾಕರ್ಷಣೆಯನ್ನೇ ಆಧಾರವಾಗಿಟ್ಟು 'ಮ್ಯಾಗ್ನೆಟಿಕ್ ಮ್ಯಾಪ್'ಗಳನ್ನು ಬಳಸಿ ವಿಶ್ವದ ವಿವಿಧ ಮೂಲೆಗಳನ್ನು ತಲುಪುತ್ತವೆ. ಕಲುಷಿತ ಕೀಟನಾಶಕಭರಿತ ನೀರಿನ ತಾಣಗಳು, ಕಡಿಮೆಯಾಗುತ್ತಿರುವ ನಡುಗಡ್ಡೆಗಳು, ಪಕ್ಷಿಬೇಟೆ, ಮೊಟ್ಟೆಗಳ ಸೇವನೆ ಮತ್ತು ನಾಶದಿಂದಾಗಿ ವಿಶ್ವದ 212 ಜಾತಿಯ ವಲಸೆ ಹಕ್ಕಿಗಳು ಅಳಿವಿನಂಚಿಗೆ ಸರಿದಿವೆ. ಮೀನು ಮತ್ತು ಕೀಟಗಳ ದೇಹದಲ್ಲೂ ಭಾರದ ಲೋಹಗಳು ಸೇರುವುದರಿಂದ, ಭಕ್ಷಿಸುವ ಹಕ್ಕಿಗಳ ಹೊಟ್ಟೆಗೂ ವಿಷ ಸೇರುತ್ತಿದೆ. ವಿದ್ಯುತ್ ತಂತಿ, ಗಾಳಿವಿದ್ಯುತ್ ಯಂತ್ರದ ರೆಕ್ಕೆಗಳಿಗೆ ಸಿಲುಕಿ ಮತ್ತು ಅನಿಯಂತ್ರಿತ ಮೀನುಗಾರಿಕೆಯಿಂದ ಆಹಾರ ಸಿಗದೆ ಹಕ್ಕಿಗಳು ಹಸಿವಿನಿಂದ ಸತ್ತ ಉದಾಹರಣೆಗಳೂ ಇವೆ.



ವಲಸೆ ಬರುವ ಹಕ್ಕಿಗಳು ಕೆಲವು ಸಲ ಬರ್ಡ್‌ಫ್ಲೂ ಅನ್ನು ತರುತ್ತವೆ. ಕಳೆದ ವರ್ಷ ಯುರೋಪ್ ಮತ್ತು ಸೌದಿ ಅರೇಬಿಯಾದಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡು, ಅಲ್ಲಿಂದ ವಲಸೆ ಬಂದ ಹಕ್ಕಿಗಳು ಕೇರಳ, ರಾಜಸ್ಥಾನ, ಮಧ್ಯಪ್ರದೇಶ, ಹಿಮಾಚಲದಲ್ಲಿ ಜ್ವರ ಹಬ್ಬಿಸಿದ್ದರಿಂದ ಭಾರಿ ಸಂಖ್ಯೆಯ ಹಕ್ಕಿಗಳು ಸಾವನ್ನಪ್ಪಿದ್ದವು. ಗೂಡು ಕಟ್ಟುವ ಜಾಗ ಒತ್ತುವರಿಯಾಗಿ, ವಲಸೆ ಬರುವ ಪಕ್ಷಿಗಳ ಹಿಂಡು ಜಾಸ್ತಿಯಾಗಿ, ಅವುಗಳ ಮಧ್ಯೆ ಅಂತರವಿಲ್ಲದೆ ಜ್ವರದ ವೈರಸ್ ಶೀಘ್ರವಾಗಿ ಹಬ್ಬುತ್ತದೆ ಎನ್ನುವ ತಜ್ಞರು, ಹಕ್ಕಿಗಳಿಗೂ ಪರಸ್ಪರ ಅಂತರ ಬೇಕು ಎನ್ನುತ್ತಾರೆ.

ವಾಚಕರ ವಾಣಿ

ಮನುಷ್ಯ ಸಾಯುವುದಕ್ಕಿಂತ ಮುಂಚೆ...

ಆಸ್ಪತ್ರೆಯಲ್ಲಿ ಹಾಸಿಗೆ ಬ್ಲಾಕಿಂಗ್ ದಂಧೆ, ರೆಮಿಡಿಸಿವಿರ್ ಮಾತ್ರೆ ಕಾಳಸಂತೆಯಲ್ಲಿ ಮಾರಾಟ, ಆಮ್ಲಜನಕ ಸರಬರಾಜು ಮಾಡಲು ಜಿಲ್ಲಾಡಳಿತಗಳ ಕಿತ್ತಾಟ, ಪೂರ್ತಿ ಹಣ ಪಾವತಿ ಮಾಡದಿದ್ದಕ್ಕೆ ಶವ ಕೊಡಲು ನಿರಾಕರಣೆ, ಶವ ಸಾಗಿಸುವ ಆಂಬುಲೆನ್ಸ್‌ನ ದುಬಾರಿ ಶುಲ್ಕ ಪಾವತಿಗಾಗಿ ತಾಳಿ ಮಾರಾಟ, ಆಹಾರಧಾನ್ಯ ಕೇಳಿದ್ದಕ್ಕೆ 'ಸಾಯುವುದೇ ಒಳ್ಳೆಯದು' ಎಂದ ಮಂತ್ರಿ... ಇದನ್ನೆಲ್ಲ ನೋಡುತ್ತಿದ್ದರೆ, ಮನುಷ್ಯ ಸಾಯುವುದಕ್ಕೆ ಮುಂಚೆ ಮನುಷ್ಯತ್ವ ಸತ್ತು ಹೋಗುತ್ತಿದೆಯೇನೋ ಎನಿಸುತ್ತದೆ.

ಲಕ್ಷಾಂತರ ಜೀವಿಗಳು ಈ ಭೂಮಿಯ ಮೇಲೆ ಜೀವಿಸಲು ಪ್ರಕೃತಿ ಅವಕಾಶ ಮಾಡಿಕೊಟ್ಟಿದೆ. ಆದರೆ ಮನುಷ್ಯನಷ್ಟು ನಿಕೃಷ್ಟ ಮತ್ತು ನೀಚತನದಿಂದ ಯಾವ ಜೀವಿಯೂ ಬದುಕುತ್ತಿಲ್ಲ. ಇದನ್ನು ಕಂಡೇ ಈಗ ಪ್ರಕೃತಿ ಈ ಪಾಠ ಕಲಿಸುತ್ತಿರಬಹುದು. ಪಾಠ ಕಲಿಯುತ್ತೇವೆಯೇ...?

ವಿ.ತಿಪ್ಪೇಸ್ವಾಮಿ, ಹಿರಿಯೂರು

'ಹಾಸಿಗೆ ಬ್ಲಾಕಿಂಗ್' ಬಯಲಿನ ಉದ್ದೇಶವೇನು?

ಸಂಸದ ತೇಜಸ್ವಿ ಸೂರ್ಯ ಮತ್ತು ತಂಡದವರು ಬಿಬಿಎಂಪಿ ಸಿಬ್ಬಂದಿಯ 'ಹಾಸಿಗೆ ಬ್ಲಾಕಿಂಗ್' ಕರ್ಮಕಾಂಡವನ್ನು ಬಯಲು ಮಾಡಿರುವುದು ಒಳ್ಳೆಯ ಕೆಲಸ. ಆದರೆ ಅದನ್ನು ಪತ್ರಿಕಾಗೋಷ್ಠಿಯ ಮುಖಾಂತರ ಸಾರ್ವಜನಿಕರಿಗೆ ತಿಳಿಸಿದ ಹಿಂದಿನ ಉದ್ದೇಶವೇನು? ಅವರದೇ ಪಕ್ಷದ ಸರ್ಕಾರ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವಾಗ, ಪ್ರಕರಣದ ಬಗ್ಗೆ ಅನುಮಾನ ಬಂದ ಕೂಡಲೇ ಮುಖ್ಯಮಂತ್ರಿಯವರಿಗೆ ದಾಖಲೆ ಒದಗಿಸಿ, ತನಿಖೆ ಮಾಡಿಸಿ, ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಿಸಿ ವ್ಯವಸ್ಥೆಯನ್ನು ಸರಿದಾರಿಗೆ ತರಬಹುದಿತ್ತು. ಮುಖ್ಯಮಂತ್ರಿ ಸಹಕಾರ ಕೊಡದಿದ್ದರೆ ಕೇಂದ್ರ ಸರ್ಕಾರದ ಸಹಾಯ ಪಡೆಯಬಹುದಿತ್ತು. ಅದೂ ಆಗದಿದ್ದರೆ ನ್ಯಾಯಾಲಯದ ಮೊರೆ ಹೋಗಬಹುದಿತ್ತು.

ಅದ್ಯಾವುದನ್ನೂ ಮಾಡದೆ ನೇರವಾಗಿ ಪತ್ರಿಕಾಗೋಷ್ಠಿಯ ಮುಖಾಂತರ ತಮ್ಮ ಸರ್ಕಾರದ ಅಧೀನದಲ್ಲಿರುವ ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನಲಾದ ಹಗರಣವನ್ನು ಬಯಲು ಮಾಡಿದ್ದು ಯಾಕಾಗಿ? ಪ್ರಚಾರದ ಸಲುವಾಗಿಯೇ? ಅಥವಾ ಮುಖ್ಯಮಂತ್ರಿಗೆ ಕೆಟ್ಟ ಹೆಸರು ತರಲೆಂದೇ? ಇದರಿಂದ ಜನರ ಮನಸ್ಸಿನಲ್ಲಿ ಸರ್ಕಾರಿ ವ್ಯವಸ್ಥೆಯ ಮೇಲಿರುವ ಅಲ್ಪ ನಂಬಿಕೆಯೂ ಹೋಗುವುದಿಲ್ಲವೇ? ಪತ್ರಿಕಾ ಪ್ರತಿನಿಧಿಗಳ ಎದುರು ಸಂಯಮದಿಂದ ವರ್ತಿಸದೆ ನಾಲಿಗೆಯನ್ನು ಹರಿಬಿಟ್ಟಿದ್ದರಿಂದ ಏನಾಯಿತು? ಪ್ರಕರಣವು ಕೋಮುಬಣ್ಣ ಪಡೆಯಿತು. ಹಾಸಿಗೆ ಬ್ಲಾಕಿಂಗ್ ವಿಷಯ ಹಿಂದಕ್ಕೆ ಸರಿಯಿತು.

ಸತೀಶ ಎಂ.ಎಸ್. ಭಟ್ಟ, ಬೆಂಗಳೂರು

ಅಂಬೇಡ್ಕರ್ ಮಾತು ಇಂದಿಗೂ ಪ್ರಸ್ತುತ

'ನಾವು ಕಟ್ಟಬೇಕಾಗಿರುವುದು ಶಾಲೆ-ಕಾಲೇಜು, ಆಸ್ಪತ್ರೆಗಳನ್ನೇ ಹೊರತು ದೇವಾಲಯ, ಚರ್ಚು, ಮಸೀದಿಗಳನ್ನಲ್ಲ' ಎಂಬ ಡಾ. ಬಿ.ಆರ್.ಅಂಬೇಡ್ಕರ್ ಅವರ ಮಾತು ತುಂಬಾ ಅರ್ಥಗರ್ಭಿತವಾದದ್ದು. ಪ್ರಸ್ತುತ ಸಂದಿಗ್ಧ ಪರಿಸ್ಥಿತಿಯಲ್ಲಿ ಕೋವಿಡ್ ರೋಗಿಗಳು ಆಸ್ಪತ್ರೆಗಳಲ್ಲಿ ಬೆಡ್ ಸಿಗದೆ, ಆಕ್ಸಿಜನ್ ಸಿಗದೆ ಪ್ರಾಣ ಬಿಡುತ್ತಿರುವುದನ್ನು ನೋಡಿದರೆ, ಈ ಮಾತು ಈಗಲೂ ಎಷ್ಟು ಪ್ರಸ್ತುತ ಮತ್ತು ಮಹತ್ವದ್ದಾಗಿದೆ ಎಂಬುದು ತಿಳಿಯುತ್ತದೆ.

ಏಕೆಂದರೆ ಇಂದಿಗೂ ನಮ್ಮ ಜನಪ್ರತಿನಿಧಿಗಳು ತಮ್ಮ ಸ್ವಾರ್ಥಕ್ಕಾಗಿ ಜಾತಿ-ಧರ್ಮಗಳ ಬೆನ್ನು ಹತ್ತಿ, ಕೋಟಿ ಕೋಟಿ ಹಣ ಖರ್ಚು ಮಾಡಿ ದೇವಾಲಯ, ಮಂದಿರ, ಚರ್ಚು, ಮಸೀದಿಗಳನ್ನೇ ನಿರ್ಮಾಣ ಮಾಡುತ್ತಿದ್ದಾರೆ. ಆದರೆ ಸುಸಜ್ಜಿತ ಶಾಲೆ-ಕಾಲೇಜು, ಆಸ್ಪತ್ರೆಗಳ ಕೊರತೆ ಕಂಡುಬರುತ್ತಿದೆ. ಇದು ನಮ್ಮ ದೇಶದ ಇಂದಿನ ದುಃಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಈಗಲಾದರೂ ನಮ್ಮ ಸರ್ಕಾರ ಮತ್ತು ರಾಜಕಾರಣಿಗಳು ಅಂಬೇಡ್ಕರ್ ಅವರ ಈ ಮಾತನ್ನು ಗಂಭೀರವಾಗಿ ಪರಿಗಣಿಸಿ, ಜನಸಂಖ್ಯೆಗೆ ಅನುಗುಣವಾಗಿ ವೈದ್ಯಕೀಯ ಮತ್ತು ಶಾಲಾ ಕಾಲೇಜು ಸೌಲಭ್ಯ ಒದಗಿಸಬೇಕು.

ಸದಾಶಿವ ಎಂ. ಮುರಗೋಡ, ರಾಮದುರ್ಗ, ಬೆಳಗಾವಿ

ಲಾಕ್‌ಡೌನ್ ವೇಳೆ ಸರ್ಕಾರ ಏನು ಮಾಡುತ್ತದೆ?

ರಾಜ್ಯ ಸರ್ಕಾರವು ಈ ತಿಂಗಳ 10ರಿಂದ 24ರವರೆಗೆ ಲಾಕ್‌ಡೌನ್ ಘೋಷಿಸಿದೆ. ಅದಕ್ಕೆ ಯಾವ ವೈಜ್ಞಾನಿಕ ಹಿನ್ನೆಲೆ ಇದೆಯೋ ಗೊತ್ತಿಲ್ಲ. ಒಂದು ವೇಳೆ ಇದ್ದರೂ ಅದನ್ನು ಜನರಿಗೆ ತಿಳಿಸಿ ಹೇಳುವ ಪ್ರಯತ್ನವನ್ನು ಅದು ಮಾಡಿಲ್ಲ. ಹಾಗಾಗಿ ಇದರ ಬಗ್ಗೆ ನಮಗೆ ಕೆಲವು ಸ್ಪಷ್ಟೀಕರಣಗಳು ಬೇಕು. ಅವೆಂದರೆ:

ಲಾಕ್‌ಡೌನ್ ಅವಧಿಯನ್ನು ಯಾವ ಉದ್ದೇಶಕ್ಕಾಗಿ ಸರ್ಕಾರ ಬಳಸಿಕೊಳ್ಳುತ್ತದೆ? ಅಂದರೆ ಈ ಅವಧಿಯಲ್ಲಿ ಕೊರೊನಾ ನಿಯಂತ್ರಣಕ್ಕೆ ಯಾವ ಕಾರ್ಯಯೋಜನೆ ರೂಪಿಸಿಕೊಂಡಿದೆ? ಆರೋಗ್ಯ ಸೇವೆಯನ್ನು ಉತ್ತಮಪಡಿಸಿಕೊಳ್ಳಲು ಅದು ಏನೇನು ಯೋಜನೆಗಳನ್ನು ಹಾಕಿಕೊಂಡಿದೆ? ಆಸ್ಪತ್ರೆ, ಆಕ್ಸಿಜನ್, ಔಷಧಿ, ವೈದ್ಯಕೀಯ ಸಿಬ್ಬಂದಿಯಂಥ ಸೇವೆಗಳನ್ನು ಈಗಿರುವುದಕ್ಕಿಂತ ಹೇಗೆ ಸದೃಢಗೊಳಿಸುತ್ತದೆ? ಈಗಾಗಲೇ ಜರ್ಜರಿತವಾಗಿ ಹೋಗಿರುವ ಬಡವರು, ಕೂಲಿಕಾರ್ಮಿಕರು, ಗಾರ್ಮೆಂಟ್ಸ್ ನೌಕರರು, ಮೀನುಗಾರರು, ಟ್ಯಾಕ್ಸಿ, ಆಟೊ ಚಾಲಕರ ಬದುಕನ್ನು ಮೇಲೆತ್ತಲು ಸರ್ಕಾರದ ಬಳಿ ಯಾವ ಯೋಜನೆಗಳಿವೆ?

ಲಾಕ್‌ಡೌನ್ ಮುಗಿದ ತಕ್ಷಣ ಎಲ್ಲ ನಾಗರಿಕರಿಗೂ ಲಸಿಕೆ ಹಾಕಲು ತಳಮಟ್ಟದಿಂದಲೇ ಕಾರ್ಯಪಡೆಯನ್ನು ಸಜ್ಜುಗೊಳಿಸಲು ಈ ಅವಧಿಯನ್ನು ಬಳಸಿಕೊಳ್ಳುತ್ತದೆಯೇ? ಪಕ್ಕದ ರಾಜ್ಯಗಳಲ್ಲಿ ಅಲ್ಲಿನ ಸರ್ಕಾರಗಳು ಜನರನ್ನು ಕೋವಿಡ್ ಸಂಕಷ್ಟದಿಂದ ಮೇಲೆತ್ತಲು ಪಕ್ಷಭೇದ ಮರೆತು ಶ್ರಮಿಸುತ್ತಿವೆ. ತಮಿಳುನಾಡು ಮುಖ್ಯಮಂತ್ರಿ ಹುದ್ದೆಯನ್ನು ವಹಿಸಿಕೊಂಡ ಸ್ಟಾಲಿನ್ ಮೊತ್ತಮೊದಲನೆಯದಾಗಿ ಸಹಿ ಹಾಕಿದ ಫೈಲ್, ಪ್ರತೀ ಕುಟುಂಬಕ್ಕೂ ₹ 2 ಸಾವಿರದ ಕೊಡುಗೆ ಮತ್ತು ಉಚಿತ ವೈದ್ಯಕೀಯ ಸೇವೆಗೆ ಸಂಬಂಧಿಸಿದ್ದು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ನೀರು ಮತ್ತು ವಿದ್ಯುತ್ ಬಿಲ್ ಮನ್ನಾ ಮಾಡಿದ್ದಲ್ಲದೆ, ಬಡವ ಬಲ್ಲಿದ ಎಂಬ ಭೇದವಿಲ್ಲದೆ ಪ್ರತೀ ಕುಟುಂಬಕ್ಕೂ ಪಡಿತರ ಸಿಗುವ ವ್ಯವಸ್ಥೆ ಮಾಡಿದ್ದಾರೆ. ಆಂಧ್ರ ಪ್ರದೇಶದ ಜಗನ್ಮೋಹನ ರೆಡ್ಡಿ ಅವರು ಉಚಿತ ವೈದ್ಯಕೀಯ ಸೇವಾ ವ್ಯವಸ್ಥೆ ಮಾಡಿದ್ದಾರೆ. ನಮ್ಮ ರಾಜ್ಯ ನಮಗೇನು ಕೊಡಲಿದೆ?

ಉಷಾ ಕಟ್ಟೆಮನೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜನರ ಹಿತ, ಪ್ರಾದೇಶಿಕ ಅಸ್ಮಿತೆಯನ್ನು ಕಾಯಲು ಸಾಧ್ಯವಿರುವುದು ಪ್ರಾದೇಶಿಕ ಪಕ್ಷಗಳಿಗೋ ರಾಷ್ಟ್ರೀಯ ಪಕ್ಷಗಳಿಗೋ?

ಅಧಿಕಾರದ ಕೇಂದ್ರೀಕರಣ ಭಾರತದ ಪ್ರಗತಿಗೆ ಪೂರಕವಲ್ಲ

• ಸುಧೀಂದ್ರ ಕುಲಕರ್ಣಿ



> ತಾನೇ ಸರ್ವಸ್ವವಾಗಿ ಆಡಳಿತ ನಡೆಸಬೇಕು ಮತ್ತು ಈ ರಾಜಕೀಯ ಶಕ್ತಿಯನ್ನುಪಯೋಗಿಸಿ ದೇಶದ ಸಂವಿಧಾನವನ್ನೇ ಬದಲಿಸಿ ಭಾರತವನ್ನು 'ಹಿಂದೂ ರಾಷ್ಟ್ರ'ವಾಗಿ ಘೋಷಿಸುವ ಬಿಜೆಪಿಯ ದೂರದೃಷ್ಟಿಪರ ಯೋಜನೆಗೆ ಹೊಡೆತ ಬಿದ್ದಿದೆ. ಕೋವಿಡ್ ಎರಡನೇ ಅಲೆಯನ್ನು ಎದುರಿಸುವಲ್ಲಿ ಪೂರ್ತಿಯಾಗಿ ವಿಫಲವಾಗಿರುವುದರಿಂದ ಪ್ರಧಾನಿಯವರ ಜನಪ್ರಿಯತೆ ಕುಗ್ಗುತ್ತಿದೆ

ದೇಶ ಮತ್ತು ಪ್ರದೇಶ ಇವುಗಳ ನಡುವೆ ಕೇವಲ ಒಂದೇ ಅಕ್ಷರದ ಅಂತರವಿದೆ. ಪ್ರದೇಶಗಳಿಲ್ಲದೆ (ಅಂದರೆ ರಾಜ್ಯ) ದೇಶವಿಲ್ಲ. ದೇಶದ ಐಕ್ಯತೆ ಮತ್ತು ಸಂರಕ್ಷಣೆಗಳಿಲ್ಲದೆ ಪ್ರದೇಶಗಳಿಗೆ ಪ್ರತ್ಯೇಕ ಅಸ್ತಿತ್ವವೂ ಇಲ್ಲ, ಭೂತ ಭವಿಷ್ಯಗಳೂ ಇಲ್ಲ. ನಮ್ಮ ಸಂವಿಧಾನದ ಮೊದಲ ಕಲಮಿನಲ್ಲಿಯೇ ಹೇಳಿರುವುದೇನೆಂದರೆ 'ಭಾರತವು ರಾಜ್ಯಗಳ ಒಕ್ಕೂಟವಾಗಿದೆ'. ಭಾರತದ ಐತಿಹಾಸಿಕ ವೈವಿಧ್ಯ ಮತ್ತು ಬಹುತ್ವಗಳನ್ನು ಸರಿಯಾಗಿ ಗುರುತಿಸಿ ದೇಶ ಮತ್ತು ಪ್ರದೇಶಗಳ ಸಂಬಂಧ ಅವಿಭಾಜ್ಯವಾಗಿರಬೇಕು ಎಂಬುದು ನಮ್ಮ ಸಂವಿಧಾನದ ಅಡಿಪಾಯ.

ಆದರೆ, ಕಾಂಗ್ರೆಸ್ ಸಂಘಟನೆಯೇ ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯಲ್ಲಿ ಇದ್ದ ಕಾರಣದಿಂದಾಗಿ 1947ರ ನಂತರ ದೇಶ ಮತ್ತು ಪ್ರದೇಶಗಳಲ್ಲಿ ಆ ಪಕ್ಷದ ಪ್ರಭುತ್ವ ಸ್ಥಾಪನೆಯಾಯಿತು. 1967ರ ಸಾರ್ವತ್ರಿಕ ಚುನಾವಣೆಯಲ್ಲಿ ಈ ಏಕಪಕ್ಷೀಯ ರಾಜಕೀಯ–ಆಡಳಿತ ಪ್ರಭುತ್ವಕ್ಕೆ ಸವಾಲು ಹುಟ್ಟಿಕೊಂಡಿತು. ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಪ್ರಜಾಪ್ರಭುತ್ವ ಮಾರ್ಗದಿಂದ ಆಯ್ಕೆಗೊಂಡವು. ಆ ನಂತರ ಹಲವು ದಶಕಗಳವರೆಗೆ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಅನೇಕ ರಾಜ್ಯಗಳಲ್ಲಿ ಅದು ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಾ ಹೋಯಿತು. ಆದರೆ, ಪ್ರದೇಶದಲ್ಲಿ ಜನಬೆಂಬಲ ಕಳೆದುಕೊಂಡರೆ ದೇಶದಲ್ಲಿ ಅದು ಅಧಿಕಾರದಲ್ಲಿ ಉಳಿದೀತೇ? ಒಂದು ಕಡೆಗೆ ಪ್ರಾದೇಶಿಕ ಪಕ್ಷಗಳು ಹುಟ್ಟಿ ಬೆಳೆದು ಕಾಂಗ್ರೆಸ್‌ಗೆ ಸವಾಲು ಹಾಕಿದರೆ, ಮತ್ತೊಂದು ಕಡೆಗೆ ಭಾರತೀಯ ಜನತಾ ಪಕ್ಷವು ರಾಷ್ಟ್ರೀಯ ಪಕ್ಷವಾಗಿ ತನ್ನ ಪ್ರಭಾವ ವಲಯವನ್ನು ವಿಶಾಲಗೊಳಿಸಿತು.

1990ರ ದಶಕದಲ್ಲಿ ಅಲ್ಪ ಕಾಲದವರೆಗೆ ಪ್ರಾದೇಶಿಕ ಪಕ್ಷಗಳೇ ಕೇಂದ್ರದಲ್ಲಿ ಸರ್ಕಾರ ಸ್ಥಾಪಿಸಿದರೂ ಆ ಪ್ರಯೋಗ ವಿಫಲವಾಯಿತು. ಈ ವೈಫಲ್ಯದಿಂದಾಗಿ ಬಿಜೆಪಿಗೆ ಬೆಳೆಯಲು ಇನ್ನೂ ಹೆಚ್ಚು ಆಸ್ಪದ ದೊರೆಯಿತು. ಕಾಂಗ್ರೆಸ್ ಮತ್ತು ಬಿಜೆಪಿ ಕೆಲವು ಕಾಲ ಭಾರತದ ಕೇಂದ್ರೀಯ ರಾಜಕಾರಣದಲ್ಲಿ ಎರಡು ಪ್ರಮುಖ ಧ್ರುವಗಳಾಗಿ ಕಂಡು ಬಂದರೂ 2014ರ ಲೋಕಸಭೆ ಚುನಾವಣೆಯ ನಂತರ, ಈ ದ್ವಿ–ಧ್ರುವೀಯ ವಾಸ್ತವವು ಏಕ–ಧ್ರುವೀಯವಾಗಿ ಬದಲಾವಣೆಗೊಂಡಿತು. ಈ ಪರಿವರ್ತನೆಯ ಶ್ರೇಯ ನರೇಂದ್ರ ಮೋದಿಯವರಿಗೇ ಹೋಗಬೇಕು.

ಆದರೆ, ಈಗ ಮತ್ತೊಮ್ಮೆ ಇತಿಹಾಸ ಚಕ್ರ ಬೇರೆ ದಿಕ್ಕಿನಲ್ಲಿ ತಿರುಗುತ್ತಿರುವ ಲಕ್ಷಣಗಳು ಕಂಡು ಬರುತ್ತಿವೆ. ಮೋದಿಯವರ ನೇತೃತ್ವದಲ್ಲಿ ಹಾಗೂ ಅಮಿತ್ ಶಾ ಅವರ ಸಂಘಟನಾತ್ಮಕ ಮುಂದಾಳುತ್ವದಲ್ಲಿ ಕೇಂದ್ರ ಮತ್ತು ಬಹುತೇಕ ಪ್ರದೇಶಗಳಲ್ಲಿ ತನ್ನದೇ ಆದ ಪ್ರಭುತ್ವ ಸ್ಥಾಪಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. 'ಕಾಂಗ್ರೆಸ್‌ಮುಕ್ತ ಭಾರತ'– ಈ ಘೋಷಣೆಯೊಂದಿಗೆ ಕಾಂಗ್ರೆಸ್ ಪಕ್ಷವನ್ನು ತೀರಾ ದುರ್ಬಲಗೊಳಿಸುವುದರಲ್ಲಿ ತಾತ್ಪೂರ್ತಿಕವಾಗಿಯಾದರೂ ಬಿಜೆಪಿಗೆ ಸಾಕಷ್ಟು ಯಶಸ್ಸು ಸಿಕ್ಕಿದೆ. ಇದಕ್ಕೆ 'ಆಪರೇಷನ್ ಕಮಲ'ದಂತಹ ಅನೈತಿಕ ಮತ್ತು ಕುತಂತ್ರಕಾರಿ ಮಾರ್ಗವನ್ನು ಬಿಜೆಪಿ ಅನುಸರಿಸಿದ್ದು ಎಷ್ಟು ಕಾರಣವೋ, ಕಾಂಗ್ರೆಸ್ ಪಕ್ಷದಲ್ಲಿ ನಿರಂತರವಾಗಿ ಇರುವ ನೇತೃತ್ವ ಸಂಕಟವೂ ಅಷ್ಟೇ ಕಾರಣ.

ಕಾಂಗ್ರೆಸ್ ಪಕ್ಷವೆಂಬ ಬಲಾಢ್ಯ ಮಹಾಮರವನ್ನು ಕಡಿದು ಹಾಕುವಲ್ಲಿ ನಮಗೆ ಯಶ ಸಿಕ್ಕಿರುವಾಗ ಈ ಪ್ರಾದೇಶಿಕ ಪಕ್ಷಗಳು ಯಾವ ಮೂಲೆಯ ಕಸಗಳು ಎಂಬ ದರ್ಪ ಬಿಜೆಪಿಯಲ್ಲಿ ಬೆಳೆಯಿತು. ಯಾವ ಪ್ರಾದೇಶಿಕ ಪಕ್ಷಗಳು ತನ್ನ ಮಾತನ್ನು ಕೇಳುತ್ತವೆಯೋ (ಒಡಿಶಾದಲ್ಲಿ ಬಿಜೆಡಿ, ತಮಿಳುನಾಡಿನಲ್ಲಿ ಜಯಲಲಿತಾ ನಂತರದ ಎಐಎಡಿಎಂಕೆ) ಅವುಗಳಿಗೆ ಸಂರಕ್ಷಣೆ ನೀಡುವುದು; ಅವಕಾಶ ಇದ್ದಲ್ಲಿ ಜಾರಿ ನಿರ್ದೇಶನಾಲಯ, ಸಿಬಿಐ ಮುಂತಾದ ಸಂಸ್ಥೆಗಳ ದುರುಪಯೋಗದಿಂದ ಹೆದರಿಸಿ, ಬಾಗಿಸಿ ಪ್ರಾದೇಶಿಕ ಪಕ್ಷಗಳನ್ನು ಹತೋಟಿಯಲ್ಲಿಡುವುದು (ಉತ್ತರ ಪ್ರದೇಶದಲ್ಲಿ ಮಾಯಾವತಿ, ಆಂಧ್ರ ಪ್ರದೇಶದಲ್ಲಿ ಜಗನ್ ರೆಡ್ಡಿ, ತೆಲಂಗಾಣದಲ್ಲಿ ಕೆ.ಚಂದ್ರಶೇಖರ ರಾವ್)– ಇಂಥ ರಣನೀತಿಯನ್ನು ಬಿಜೆಪಿ ಅನುಸರಿಸಿತು.

ಇಷ್ಟಾದರೂ ಉಳಿದೆಲ್ಲ ಪ್ರಾದೇಶಿಕ ಪಕ್ಷಗಳನ್ನು ಸೋಲಿಸುವುದಕ್ಕಾಗಲಿ, ಹೆದರಿಸಿ ಬೆದರಿಸಿ ತನ್ನ ನಿಯಂತ್ರಣಕ್ಕೆ ತರುವುದಕ್ಕಾಗಲಿ ಬಿಜೆಪಿಗೆ ಸಾಧ್ಯವಾಗಿಲ್ಲ. ಇದಕ್ಕೆ ಉದಾಹರಣೆಗಳೆಂದರೆ, ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ ಅವರ ಶಿವಸೇನಾ, ತಮಿಳುನಾಡಿನಲ್ಲಿ ಡಿಎಂಕೆ, ಕೇರಳದಲ್ಲಿ ಸಿಪಿಎಂ ಹಾಗೂ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್.

ಪ್ರಾದೇಶಿಕ ಪಕ್ಷಗಳನ್ನು ಹತ್ತಿಕ್ಕುವ ಬಿಜೆಪಿಯ ಪ್ರಯತ್ನಗಳು ಕಳೆದ ತಿಂಗಳು ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗಳಿಗೆ ನಡೆದ ಚುನಾವಣೆಯ ಫಲಿತಾಂಶದ ನಂತರ ಇನ್ನೂ ಕಷ್ಟಕರವಾಗಲಿವೆ. ಅಸ್ಸಾಂ ಮತ್ತು ಪುಟ್ಟ ಪುದುಚೇರಿ ಬಿಟ್ಟರೆ ಉಳಿದ ಮೂರು ರಾಜ್ಯಗಳಲ್ಲಿ (ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ) ಬಿಜೆಪಿ ಭಾರಿ ಸೋಲುಣ್ಣಬೇಕಾಯಿತು. ಬಂಗಾಳದಲ್ಲಿಯಂತೂ ಇನ್ನೇನು ತನ್ನ ಸರ್ಕಾರವೇ ಬರಲಿದೆ ಎಂಬ ಅತಿ ವಿಶ್ವಾಸದಿಂದ 'ಮೋದಿ ವಿರುದ್ಧ ಮಮತಾ' ಎಂಬಂತೆ ಬಿಜೆಪಿ ಕಾಳಗ ನಡೆಸಿತು. ಬಿಜೆಪಿಯ ಹಿಂದೂ–ಮುಸ್ಲಿಂ ವಿಭಜನಕಾರಿ ರಾಜಕಾರಣ ಪರಮಾವಧಿಗೆ ಮುಟ್ಟಿತು. ಚುನಾವಣಾ ಆಯೋಗವನ್ನು ದುರುಪಯೋಗಪಡಿಸಲಾಯಿತು. ಹೀಗಾಗಿಯೂ ಮಮತಾ ಹೆಚ್ಚಿನ ಬಹುಮತದೊಂದಿಗೆ ಆರಿಸಿ ಬಂದರು. ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ನಡೆದ ಪಂಚಾಯಿತಿ ಚುನಾವಣೆಗಳಲ್ಲಿ ಬಿಜೆಪಿಗೆ ಹಿನ್ನಡೆ ಆಗಿದ್ದರಿಂದ ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಯೋಗಿ ಆದಿತ್ಯನಾಥ ಅವರ ಸರ್ಕಾರ ಹೋಗುವ ಸಾಧ್ಯತೆಗಳು ದಟ್ಟವಾಗಿವೆ.

ಇವೆಲ್ಲದರ ಅರ್ಥವೆಂದರೆ, ಕೇಂದ್ರದಲ್ಲಿಯೂ ಪ್ರದೇಶದಲ್ಲಿಯೂ ತಾನೇ ಸರ್ವಸ್ವವಾಗಿ ಆಡಳಿತ ನಡೆಸಬೇಕು ಮತ್ತು ಈ ರಾಜಕೀಯ ಶಕ್ತಿಯನ್ನುಪಯೋಗಿಸಿ ದೇಶದ ಸಂವಿಧಾನವನ್ನೇ ಬದಲಿಸಿ ಭಾರತವನ್ನು 'ಹಿಂದೂ ರಾಷ್ಟ್ರ'ವಾಗಿ ಘೋಷಿಸುವ ಬಿಜೆಪಿಯ ದೂರದೃಷ್ಟಿಪರ ಯೋಜನೆಗೆ ಹೊಡೆತ ಬಿದ್ದಿದೆ. ಇದೇ ಸಂದರ್ಭದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದ ಎರಡನೇ ಅಲೆಯನ್ನು ಎದುರಿಸುವಲ್ಲಿ ಮೋದಿ ಸರ್ಕಾರ ಪೂರ್ತಿಯಾಗಿ ವಿಫಲವಾಗಿರುವುದರಿಂದ ಪ್ರಧಾನಿಯವರ ಜನಪ್ರಿಯತೆ ಕುಗ್ಗುತ್ತಿದೆ. ಕೋವಿಡ್ ವೈಫಲ್ಯದ ಜತೆಗೆ ತೀವ್ರಗೊಳ್ಳುತ್ತಿರುವ ಆರ್ಥಿಕ ಸಂಕಟವನ್ನು, ಬೆಲೆ ಏರಿಕೆಯನ್ನು ಹಾಗೂ ನಿರುದ್ಯೋಗವನ್ನು ಹಿಂದಕ್ಕೆ ಹಾಕುವಲ್ಲಿಯೂ ಮೋದಿ ಸರ್ಕಾರ ವಿಫಲಗೊಳ್ಳುತ್ತಿರುವುದು ಕಾಣುತ್ತಿದೆ. ಹೀಗಾಗಿ 2024ಕ್ಕೆ ಮೊದಲು ಮತ್ತು ನಂತರ ದೇಶದ ರಾಜಕಾರಣದಲ್ಲಿ ಭಾರಿ ಬದಲಾವಣೆಗಳಾಗಲಿವೆ.

ಈ ಬದಲಾವಣೆಗಳ ಒಂದು ಮಹತ್ವದ ಸ್ವರೂಪವೆಂದರೆ ಮುಂಬರುವ ವರ್ಷಗಳಲ್ಲಿ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ಹೆಚ್ಚಾಗಲಿದೆ. ಮೋದಿಯವರ ಕಳೆದ ಏಳು ವರ್ಷಗಳ ಆಳ್ವಿಕೆಯಲ್ಲಿ ಕೇಂದ್ರ–ರಾಜ್ಯ ಸಂಬಂಧಗಳು ಎಷ್ಟು ಹದಗೆಟ್ಟಿವೆಯೆಂದರೆ, ಸ್ವತಂತ್ರ ಭಾರತದ ಇತಿಹಾಸದಲ್ಲಿ ಎಂದೂ ಇಷ್ಟು ಹದಗೆಟ್ಟಿರಲಿಲ್ಲ. ಪ್ರಧಾನಿಯವರು ಯಾವುದೇ ಮುಖ್ಯಮಂತ್ರಿಗೆ (ತಮ್ಮದೇ ಪಕ್ಷದ ಮುಖ್ಯಮಂತ್ರಿಗಳಿಗೆ ಕೂಡ) ಮಾನ–ಮಹತ್ವ ಕೊಡುವುದಿಲ್ಲ. ಸರ್ಕಾರದ ಎಲ್ಲ ಯೋಜನೆಗಳಲ್ಲಿಯೂ ಅವರೊಬ್ಬರದೇ ಹೆಸರು, ಅವರೊಬ್ಬರಿಗೇ ಪ್ರಚಾರ. ಭಾರತವನ್ನು ಪರೋಕ್ಷವಾಗಿ ಪುಟಿನ್ ಅವರು ರಷ್ಯಾದಲ್ಲಿ ತಂದಂತಹ ಅಧ್ಯಕ್ಷೀಯ ವ್ಯವಸ್ಥೆಯ ಕಡೆಗೆ ಒಯ್ಯುವ ಪ್ರಯತ್ನವನ್ನು ಮೋದಿಯವರು ಮಾಡುತ್ತಿದ್ದಾರೆ. ಇದರಿಂದಾಗಿ, ಮೊದಲು ಹೇಳಿದಂತೆ 'ಭಾರತ ದೇಶ–ಪ್ರದೇಶಗಳ ಒಕ್ಕೂಟ' ಎಂಬ ಸಂವಿಧಾನದ ಆದೇಶವನ್ನೇ ಅವರು ಉಲ್ಲಂಘಿಸುತ್ತಿದ್ದಾರೆ.

ಆದರೆ, ಭಾರತದಲ್ಲಿ ಪ್ರಜಾಪ್ರಭುತ್ವ ಇನ್ನೂ ಜೀವಂತವಾಗಿರುವುದರಿಂದ ಮೋದಿಯವರ ಈ ಸರ್ವಾಧಿಕಾರದ ಕುತಂತ್ರಕ್ಕೆ ಜನರು 'ಇದನ್ನು ನಾವು ಮಾಡಗೊಡುವುದಿಲ್ಲ' ಎಂದು ದಿಟ್ಟವಾಗಿ ಹೇಳುತ್ತಿದ್ದಾರೆ. ಇನ್ನೂ ಜೋರಾಗಿ ಇನ್ನು ಮುಂದೆ ಹೇಳಲಿದ್ದಾರೆ. ಈ ದನಿಗಳನ್ನು ಎತ್ತುವುದರಲ್ಲಿ ಪ್ರಾದೇಶಿಕ ಪಕ್ಷಗಳ ಕಾರ್ಯ ಹೆಚ್ಚಾಗಲಿದೆ. ಕಾಂಗ್ರೆಸ್ ಪ್ರಾದೇಶಿಕ ಪಕ್ಷವಲ್ಲ, ಆದರೆ ಅತ್ಯಂತ ಕ್ಷೀಣಗೊಂಡ ರಾಷ್ಟ್ರೀಯ ಪಕ್ಷವಾಗಿ ಉಳಿದಿದೆ. ಅದು ಕೂಡ ಚೇತರಿಸಿಕೊಂಡು, ಪುನರುಜ್ಜೀವಿತಗೊಂಡರೆ ಮುಂಬರುವ ವರ್ಷಗಳಲ್ಲಿ ಭಾರತದ ಪ್ರಜಾಪ್ರಭುತ್ವ ಉಳಿಯಲು, ಸಂವಿಧಾನದ ಆಶಯಗಳು ಸುರಕ್ಷಿತವಾಗಿರಲು ಹಾಗೂ ದೇಶ–ಪ್ರದೇಶಗಳ ಸಂತುಲಿತ ಪ್ರಗತಿಯಾಗಲು ಸಾಧ್ಯವಾಗುತ್ತದೆ.

(ಲೇಖಕ: ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತ)

ಮೈತ್ರಿಕೂಟದ ಕೇಂದ್ರದಲ್ಲಿ ಪ್ರಬಲ ರಾಷ್ಟ್ರೀಯ ಪಕ್ಷ ಬೇಕೇಬೇಕು

• ಎ. ಸೂರ್ಯಪ್ರಕಾಶ್

> ಒಂದು ಪಕ್ಷದ ಆಳ್ವಿಕೆಯು ಒಳ್ಳೆಯದೇ ಎಂಬ ಪ್ರಶ್ನೆಗೆ ಅಲ್ಲ ಎಂಬುದೇ ಉತ್ತರವಾಗಿದೆ. ಒಂದೇ ಪಕ್ಷದ ಆಳ್ವಿಕೆಯ ಬದಲಿಗೆ, ದೇಶದ ವಿವಿಧ ಭಾಗಗಳ ಪಕ್ಷಗಳನ್ನು ಒಳಗೊಂಡ ಅತ್ಯುತ್ತಮ ಹೊಂದಾಣಿಕೆಯ ಚುನಾವಣಾಪೂರ್ವ ಮೈತ್ರಿಕೂಟ ವ್ಯವಸ್ಥೆಯು ಬೇಕು. ಈ ಮೈತ್ರಿಕೂಟದ ಕೇಂದ್ರದಲ್ಲಿ ಬಲವಾದ ರಾಷ್ಟ್ರೀಯ ಪಕ್ಷವೊಂದು ಬೇಕೇಬೇಕು

ಸ್ವತಂತ್ರ ಭಾರತದ ಪಯಣ 1950ರ ದಶಕದಲ್ಲಿ ಆರಂಭವಾದಾಗ ಕಾಂಗ್ರೆಸ್ ಪಕ್ಷದ ಪಾರಮ್ಯವಿದ್ದ ಏಕ ಪಕ್ಷ ವ್ಯವಸ್ಥೆಯೇ ಇತ್ತು. ಜವಾಹರಲಾಲ್ ನೆಹರೂ ಅವರು ಸರ್ವೋಚ್ಚ ನಾಯಕ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಅವರ ಪಕ್ಷವು ನಿರಾಯಾಸವಾಗಿ 350ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುತ್ತಿತ್ತು; ಬಹುತೇಕ ರಾಜ್ಯಗಳಲ್ಲಿ ಆ ಪಕ್ಷಕ್ಕೇ ಬಹುಮತ ಇತ್ತು. ಇದು ಕಾಂಗ್ರೆಸ್ ಅನ್ನು ದೇಶದ ಏಕೈಕ ರಾಷ್ಟ್ರೀಯ ಪಕ್ಷವಾಗಿಸಿತು. ಲೋಕಸಭಾ ಚುನಾವಣೆಗಳಲ್ಲಿ ಚಲಾವಣೆಯಾದ ಮತಗಳಲ್ಲಿ ಶೇ 42–45ರಷ್ಟು ಮತ್ತು ಶೇ 60ರಷ್ಟು ಸ್ಥಾನಗಳು ಕಾಂಗ್ರೆಸ್ ಪಾಲಾಗುತ್ತಿದ್ದವು. 1967ರವರೆಗೆ ಅಂದರೆ, ಸಮಾಜವಾದಿಗಳು, ಜನಸಂಘ ಮತ್ತು ಹೊಸದಾಗಿ ಸ್ಥಾಪನೆಯಾದ ಪ್ರಾದೇಶಿಕ ಪಕ್ಷಗಳ ಹರಕು–ಮುರುಕು ಮೈತ್ರಿಕೂಟಗಳು ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವ ವರೆಗೆ ಈ ಪ್ರವೃತ್ತಿ ಮುಂದುವರಿದಿತ್ತು.

1971ರ ಬಳಿಕ, ಕಾಂಗ್ರೆಸ್ ಪಕ್ಷವು ಕಳೆದುಕೊಂಡ ನೆಲೆಯನ್ನು ಇಂದಿರಾ ಗಾಂಧಿ ಅವರು ಮರಳಿ ಪಡೆದುಕೊಂಡರು. ಆದರೆ, 1980ರ ದಶಕದಲ್ಲಿ ಪ್ರಾದೇಶಿಕ ಪಕ್ಷಗಳ ಉದಯ ಆರಂಭವಾಯಿತು.

ತಮಿಳುನಾಡಿನಲ್ಲಿ ಕಾಂಗ್ರೆಸ್ ಆಳ್ವಿಕೆಯನ್ನು ಡಿಎಂಕೆ 1967ರಲ್ಲಿಯೇ ಕೊನೆಗೊಳಿಸಿತು. ಆದರೆ, ಪ್ರಾದೇಶಿಕ ಆಶೋತ್ತರಗಳು ಮತ್ತು ಆತ್ಮಗೌರವದ ಆಕಾಂಕ್ಷೆ ನಿಜವಾಗಿಯೂ ಮುನ್ನೆಲೆಗೆ ಬಂದದ್ದು 1983ರಲ್ಲಿ; ಈ ವರ್ಷ, ಕರ್ನಾಟಕ ಕ್ರಾಂತಿ ರಂಗ ಮತ್ತು ಜನತಾ ಪಕ್ಷದ ಮೈತ್ರಿಕೂಟವು ಕಾಂಗ್ರೆಸ್ ಪಕ್ಷಕ್ಕೆ ಆಘಾತಕಾರಿ ಸೋಲುಣಿಸಿತು ಮತ್ತು ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂತು. ಅದೇ ವರ್ಷ ಆಂಧ್ರ ಪ್ರದೇಶದಲ್ಲಿ ಎನ್‌.ಟಿ. ರಾಮರಾವ್ ನೇತೃತ್ವದ ಸರ್ಕಾರವೂ ಅಧಿಕಾರಕ್ಕೆ ಬಂತು. ಅದಾದ ಬಳಿಕ, ತಮಿಳುನಾಡು, ಬಿಹಾರ, ಒಡಿಶಾ, ಪಂಜಾಬ್, ಆಂಧ್ರ ಪ್ರದೇಶ, ತೆಲಂಗಾಣ, ಹರಿಯಾಣ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ದೆಹಲಿ ಮತ್ತು ಕೇರಳದಲ್ಲಿ ಪ್ರಾದೇಶಿಕ ಮತ್ತು ಜಾತಿ ಆಧಾರಿತ ಪಕ್ಷಗಳು ಅಸ್ತಿತ್ವಕ್ಕೆ ಬಂದವು. ಕಾಂಗ್ರೆಸ್ ಪಕ್ಷವನ್ನು ಸೋಲಿಸುವುದೇ ಈ ಎಲ್ಲ ಪಕ್ಷಗಳ ಉದ್ದೇಶವಾಗಿತ್ತು. ಈ ಪಕ್ಷಗಳ ಪ್ರಭಾವ ಎಷ್ಟಿತ್ತು ಎಂದರೆ, ಈ ಎಲ್ಲ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣವಾಗಿ ದಮನ ಮಾಡಲು ಸಾಧ್ಯವಾಯಿತು.

ಈ ಮಧ್ಯೆ ಉಂಟಾದ ಇನ್ನೊಂದು ಬೆಳವಣಿಗೆ ಎಂದರೆ ರಾಷ್ಟ್ರೀಯ ಪಕ್ಷವಾಗಿ ಭಾರತೀಯ ಜನತಾ ಪಕ್ಷದ (ಬಿಜೆಪಿ) ಉದಯ. ಈ ಪಕ್ಷವು ಮುಖ್ಯವಾಗಿ ಉತ್ತರದ ಹಿಂದಿ ಭಾಷಿಕ ರಾಜ್ಯಗಳು, ಗುಜರಾತ್, ಅಸ್ಸಾಂ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷವು ಖಾಲಿ ಮಾಡಿದ ಸ್ಥಾನಕ್ಕೆ ಹೆಚ್ಚು ಶ್ರಮವಿಲ್ಲದೆಯೇ ಬಂದಿದೆ. ಆದರೆ, ಬಿಜೆಪಿಯ ಹಿಡಿತವು ಸರ್ವವ್ಯಾಪಿ ಅಲ್ಲ.

ಈಗ, ಭಾರತದ ರಾಜಕೀಯ ನಕ್ಷೆಯನ್ನು ಬಿಡಿಸಿದರೆ ಬಹುವರ್ಣದ ಚಿತ್ರ ಕಾಣಿಸುತ್ತದೆ– ಕೇರಳದಲ್ಲಿ ಮಾರ್ಕ್ಸ್‌ವಾದಿಗಳು, ತಮಿಳುನಾಡಿನಲ್ಲಿ ಡಿಎಂಕೆ, ಉತ್ತರ ಪ್ರದೇಶ ಮತ್ತು ಕರ್ನಾಟಕ ಸೇರಿ ಹತ್ತನ್ನೆರಡು ರಾಜ್ಯಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು, ಪಂಜಾಬ್, ಛತ್ತೀಸಗಡ, ರಾಜಸ್ಥಾನದಲ್ಲಿ ಕಾಂಗ್ರೆಸ್, ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷ, ತೆಲಂಗಾಣದಲ್ಲಿ ತೆಲಂಗಾಣ ರಾಷ್ಟ್ರ ಸಮಿತಿ, ಆಂಧ್ರ ಪ್ರದೇಶದಲ್ಲಿ ವೈಎಸ್‌ಆರ್ ಕಾಂಗ್ರೆಸ್, ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಈಶಾನ್ಯ ರಾಜ್ಯಗಳಲ್ಲಿ ಹಲವು ಹತ್ತು ರಾಜಕೀಯ ಪಕ್ಷಗಳು ಮತ್ತು ಮೈತ್ರಿಕೂಟಗಳು ಆಳ್ವಿಕೆ ನಡೆಸುತ್ತಿವೆ. ಹಲವು ರಾಜ್ಯಗಳಲ್ಲಿ ಮೈತ್ರಿಕೂಟ ನೇತೃತ್ವದ ಸರ್ಕಾರಗಳಿವೆ. ಹಾಗಾಗಿ, ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವಲ್ಲದೆ, 44 ರಾಜಕೀಯ ಪಕ್ಷಗಳು ರಾಜ್ಯಗಳನ್ನು ಆಳುತ್ತಿವೆ.

ಯಾವುದೇ ದೇಶದಲ್ಲಿ ಇಂತಹ ವೈವಿಧ್ಯವನ್ನು ಕಂಡರೆ ಪಶ್ಚಿಮದ ಜನರ ಮನಸ್ಸು ದಿಗಿಲುಗೊಳ್ಳಬಹುದು. ಆದರೆ, ಎಲ್ಲ ಭಿನ್ನತೆಗಳು ಮತ್ತು ಸಮಸ್ಯೆಗಳ ಜತೆಗೂ ಈ ವೈವಿಧ್ಯವನ್ನು ನಮ್ಮ ಪಯಣದ ಭಾಗವಾಗಿಸಿಕೊಂಡ ಜನ ನಾವು. ಭಾರತದ ಪ್ರಜಾಪ್ರಭುತ್ವಕ್ಕೆ ಭಾರಿ ಹಿನ್ನಡೆಯಾಗಲಿದೆ ಎಂದು ವರ್ಷದ ಆರಂಭದಲ್ಲಿ ಅಂದಾಜಿಸಿದ್ದ ಪಶ್ಚಿಮದ ಹಲವು ವಿದ್ವಾಂಸರು, ಮೇ 2ರಂದು ಪ್ರಕಟವಾದ ಫಲಿತಾಂಶದ ಬಳಿಕ ಬೆಪ್ಪುತಕ್ಕಡಿಗಳಾಗಿದ್ದಾರೆ. ಈ ಫಲಿತಾಂಶವು ಪರಂಪರೆ ಮತ್ತು ಪ್ರಜಾಪ್ರಭುತ್ವಕ್ಕೆ ನಮ್ಮ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿದೆ.

ಒಂದು ಪಕ್ಷದ ಆಳ್ವಿಕೆಯು ಒಳ್ಳೆಯದೇ ಎಂಬ ಪ್ರಶ್ನೆಯನ್ನು ಇದು ನಮ್ಮ ಮುಂದೆ ಇರಿಸುತ್ತದೆ. ಉತ್ತರ ಅಲ್ಲ ಎಂಬುದೇ ಆಗಿದೆ. ಭಾರತದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬಹುತ್ವದ ಹಿನ್ನೆಲೆಯಲ್ಲಿ, ಆದರ್ಶ ರಾಜಕೀಯ ವ್ಯವಸ್ಥೆಯು ದೇಶದ ವೈವಿಧ್ಯವನ್ನು ಪ್ರತಿಬಿಂಬಿಸಬೇಕು ಎಂದೇ ನಾನು ಹೇಳುತ್ತೇನೆ. ಒಂದೇ ಪಕ್ಷದ ಆಳ್ವಿಕೆಯ ಬದಲಿಗೆ, ದೇಶದ ವಿವಿಧ ಭಾಗಗಳ ಪಕ್ಷಗಳನ್ನು ಒಳಗೊಂಡ ಅತ್ಯುತ್ತಮ ಹೊಂದಾಣಿಕೆಯ ಚುನಾವಣಾಪೂರ್ವ ಮೈತ್ರಿಕೂಟ ವ್ಯವಸ್ಥೆಯು ಬೇಕು. ಒಕ್ಕೂಟ ಮಟ್ಟದಲ್ಲಿ ಆಳ್ವಿಕೆ ನಡೆಸಲು ಈ ಮೈತ್ರಿಕೂಟದ ಕೇಂದ್ರದಲ್ಲಿ ಬಲವಾದ ರಾಷ್ಟ್ರೀಯ ಪಕ್ಷವೊಂದು ಬೇಕೇಬೇಕು. ರಾಜ್ಯಗಳಲ್ಲಿ ಪ್ರಾದೇಶಿಕವಾದ ಹಲವು ಪಕ್ಷಗಳಿರಬೇಕು.

ಮೈತ್ರಿಕೂಟವನ್ನು ಗಟ್ಟಿಯಾಗಿ ಇರಿಸುವುದಕ್ಕೆ ಮತ್ತು ಅಗತ್ಯ ಸಂದರ್ಭದಲ್ಲಿ ಕಠಿಣ ನಿರ್ಧಾರ ಕೈಗೊಳ್ಳುವುದಕ್ಕೆ ಪ್ರಬಲವಾದ ಪಕ್ಷವೊಂದು ಬೇಕು; ಹಾಗೆಯೇ ಪ್ರಾದೇಶಿಕವಾಗಿ ಜನರ ಆಶೋತ್ತರಗಳ ಈಡೇರಿಸುವಿಕೆಯೂ ಆಗಬೇಕು. ಈ ಎರಡರ ನಡುವಣ ಸಮತೋಲನವನ್ನು ಇಂತಹದೊಂದು ವ್ಯವಸ್ಥೆಯು ಖಾತರಿಪಡಿಸುತ್ತದೆ.

1980ರ ದಶಕದ ಬಳಿಕದ ಚುನಾವಣಾ ರಾಜಕಾರಣವನ್ನು ಗಮನಿಸಿದರೆ, ಭಾರತದ ರಾಜಕಾರಣ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾವಿಸಿದ್ದ ಒಕ್ಕೂಟ ವ್ಯವಸ್ಥೆಯ ನಡುವೆ ನಂಟು ಇರುವುದನ್ನು ಗುರುತಿಸಬಹುದು.

ಭಾರತದ ಸಂವಿಧಾನವು ಒಕ್ಕೂಟ ವ್ಯವಸ್ಥೆಯದ್ದಾದರೂ ಕೇಂದ್ರದೆಡೆಗೆ ಬಾಗಿರುವಂತಹುದು ಎಂದು ಅಂಬೇಡ್ಕರ್ ಹೇಳಿದ್ದರು. ತುರ್ತುಸ್ಥಿತಿಯಲ್ಲಿ ಕೇಂದ್ರಕ್ಕೆ ವ್ಯಾಪಕವಾದ ಅಧಿಕಾರವನ್ನು ಸಂವಿಧಾನವು ನೀಡಿದೆ. 'ಬಹುಸಂಖ್ಯೆಯ ಜನರ ಅಭಿಪ್ರಾಯ ಪ್ರಕಾರ, ತುರ್ತುಸ್ಥಿತಿಯಲ್ಲಿ ಜನರ ನಿಷ್ಠೆಯು ಕೇಂದ್ರದ ಕಡೆಗಿರಬೇಕೇ ಹೊರತು ರಾಜ್ಯದ ಕಡೆಗಲ್ಲ. ಎಲ್ಲರ ಒಳಿತಿಗಾಗಿ, ಇಡೀ ದೇಶದ ಹಿತಾಸಕ್ತಿಗಾಗಿ ಕೇಂದ್ರ ಮಾತ್ರ ಕೆಲಸ ಮಾಡಲು ಸಾಧ್ಯ' ಎಂದು ಅಂಬೇಡ್ಕರ್ ಹೇಳಿದ್ದರು.

ಅಂಬೇಡ್ಕರ್ ಅವರು ನಿರೂಪಿಸಿದ ಸಾಂವಿಧಾನಿಕ ತತ್ವವನ್ನು ಚುನಾವಣಾ ರಾಜಕೀಯಕ್ಕೆ ಅನ್ವಯಿಸಿದರೆ, ಭಿನ್ನ ರಾಜಕೀಯ ಗುಂಪುಗಳನ್ನು ಒಟ್ಟಾಗಿರಿಸಿ, ಉತ್ತಮ ಆಳ್ವಿಕೆಯನ್ನು ಖಾತರಿಪಡಿಸಲು ಕೇಂದ್ರದಲ್ಲಿನ ಮೈತ್ರಿಕೂಟಕ್ಕೆ ಆಸರೆಯಾಗಿ ಪ್ರಬಲವಾದ ರಾಷ್ಟ್ರೀಯ ಪಕ್ಷದ ಅಗತ್ಯ ಇದೆ ಎಂಬುದು ಅರಿವಾಗುತ್ತದೆ. ಮೈತ್ರಿಕೂಟದಲ್ಲಿ ಸಣ್ಣ ಸಣ್ಣ, ಪ್ರಾದೇಶಿಕ ಪಕ್ಷಗಳೇ ಇದ್ದರೆ, ಎಲ್ಲರನ್ನೂ ಜತೆಗೆ ಒಯ್ಯುವ ಶಕ್ತ ಪಕ್ಷವು ಇಲ್ಲದಿದ್ದರೆ, ಒಂದೊಂದು ಪಕ್ಷವು ಒಂದೊಂದು ದಿಕ್ಕಿಗೆ ಎಳೆದು ಮೈತ್ರಿಕೂಟವೇ ಪತನವಾಗಬಹುದು. ಇದರಿಂದಾಗಿ ಆಡಳಿತವು ಗಂಡಾಂತರಕ್ಕೆ ಒಳಗಾಗುವುದಲ್ಲದೆ ದೇಶದ ಏಕತೆ ಮತ್ತು ಸಮಗ್ರತೆಗೇ ಕುತ್ತು ಬರಬಹುದು.

ಹೀಗೆ ಆಗಲು ನಾವು ಆಸ್ಪದವನ್ನೇ ಕೊಡಬಾರದು.

(ಲೇಖಕ: ಪ್ರಸಾರ ಭಾರತಿ ಮಾಜಿ ಅಧ್ಯಕ್ಷ)

ಗುಂಡಣ್ಣ



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಕೊರೊನಾ ಸೋಲಲಿ ಮಾನವತೆ ಗೆಲ್ಲಲಿ

ಭಾರತದ ಜನರೆಲ್ಲಾ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಕಾಲ ಬಂದಿದೆ. ಈಗಲ್ಲದಿದ್ದರೆ ಇನ್ಯಾವತ್ತೂ ನಾವು ನಮ್ಮ ತಪ್ಪಿನ ಪರ್ಯಾವಲೋಕನ ಮಾಡಿಕೊಳ್ಳುವ ಕಾಲ ಬರುವುದಿಲ್ಲ. ಕೊರೊನಾ ಭಾರತವನ್ನು ಇನ್ನಿಲ್ಲದಂತೆ ಕಾಡುತ್ತಿರುವ ಸಂದರ್ಭದಲ್ಲೂ ನಮ್ಮಲ್ಲೇಕೆ ಮಾನವೀಯತೆ ಮರೆಯಾಗಿ, ಮಾಯಾವೀ ಹಣ ಮೆರೆಯುತ್ತಿದೆ ಎಂಬ ಬಗ್ಗೆ ಯೋಚಿಸಬೇಕಿದೆ.

ಧರ್ಮಗಳ ತವರು, ಸಾಂಸ್ಕೃತಿಕ ಪುಣ್ಯಭೂಮಿ ಭಾರತದಲ್ಲೇಕೆ ಮಾನವತೆ ಸಾಯುತ್ತಿದೆ. ನ್ಯಾಯ-ನೀತಿ-ಧರ್ಮಗಳೇಕೆ ನರಳುತ್ತಿವೆ. ಸಾವಿರಾರು ವರ್ಷಗಳಿಂದ ಋಷಿಗಳು-ಯೋಗಿಗಳು-ದಾರ್ಶನಿಕರು ನೂರಾರು ಪವಿತ್ರ ಗ್ರಂಥಗಳನ್ನು ನೀಡಿದರೂ ಭಾರತೀಯರೇಕೆ ಬೌದ್ಧಿಕವಾಗಿಯಾಗಲಿ, ನೈತಿಕ-ವಾಗಿಯಾಗಲಿ, ಶ್ರೀಮಂತರಾಗುತ್ತಿಲ್ಲ? ಇನ್ನೂ ಶಿಲಾಯುಗದ ಮೌಢ್ಯದಲ್ಲೇಕೆ ಕೊಳೆಯುತ್ತಾ, ದಟ್ಟ ದರಿದ್ರಾವಸ್ಥೆಯನ್ನು ತಲಪುತ್ತಿದ್ದಾರೆ. ಯಾವ ಭೂಮಿ ಜಗತ್ತಿನಲ್ಲೇ ಅತ್ಯಂತ ಪವಿತ್ರವೆಂದು ಪರಿಗಣಿಸಲಾಗಿತ್ತೋ, ಅಂಥ ಪವಿತ್ರ ಭಾರತದ ನೆಲದಲ್ಲಿ ಪಾಪಿಗಳು ಹೇಗೆ ವಿಜೃಂಭಿಸುತ್ತಿದ್ದಾರೆ?

ಅಣುಬಾಂಬ್ ದಾಳಿಗೆ ನಲುಗಿ ಹೋಗಿದ್ದ ಜಪಾನ್ ದಶಮಾನದಲ್ಲಿ ಜಗತ್ತೇ ನಿಬ್ಬೆರಗಾಗುವಂತೆ ಮೇಲೆದ್ದು ನಿಂತಿತು. ಜಾಗತಿಕ ಮಹಾಯುದ್ಧದಲ್ಲಿ ಪುಟ್ಟ ರಾಷ್ಟ್ರ ಜಪಾನಿಗೆ ಸೋತಿದ್ದ ಚೀನಾ ಇಂದು ಜಗತ್ತಿನ ಸರ್ವಶಕ್ತ ರಾಷ್ಟ್ರವಾಗಿದೆ. ಸತತ ಯುದ್ಧದಿಂದ ತತ್ತರಿಸಿದ್ದ ವಿಯೆಟ್ನಾಂ, ನೈತಿಕವಾಗಿ ದಿವಾಳಿ ಅಂಚಿನಲ್ಲಿದ್ದ ಥೈಲ್ಯಾಂಡ್, ಅಪನಂಬಿಕೆಯಲ್ಲೆ ಬೇಯುವ ಉಭಯ ಕೊರಿಯಾ ದೇಶಗಳು ಅಭಿವೃದ್ಧಿ ಕಂಡಿವೆ. ಅಷ್ಟೇ ಏಕೆ, ಅರ್ಧ ಶತಮಾನದ ಹಿಂದಷ್ಟೆ ನವನಾಗರಿಕತೆ ಕಂಡ ಕೀನ್ಯಾ ಸುಧಾರಣೆಯ ಹಾದಿಯಲ್ಲಿದೆ. ಆದರೆ, ಐದು ಸಾವಿರ ವರ್ಷಗಳ ಸುದೀರ್ಘ ನಾಗರಿಕತೆ ಮತ್ತು ಧಾರ್ಮಿಕ ಇತಿಹಾಸ ಹೊಂದಿದ ಭಾರತ ಏಕೆ ಹಿಂದುಳಿಯುತ್ತಿದೆ? ಇಡೀ ವಿಶ್ವಕ್ಕೆ ಮಾನವತೆಯ ಧರ್ಮ ಸಾರಿದ ಭಾರತದಲ್ಲೇಕೆ ಮಾನವೀಯತೆ ಸಾಯುತ್ತಿದೆ?

ಏಕೆಂದರೆ, ಭಾರತೀಯರಿನ್ನೂ ನಾಗರಿಕರಾಗಿರುವುದಿರಲಿ, ಮನುಷ್ಯರಾಗೇ ರೂಪುಗೊಂಡಿಲ್ಲ ಎಂದು ಅನಿಸುತ್ತೆ. ಈ ನೆಲದ ಅಂತಃಸತ್ವವಾದ ಸಹಬಾಳ್ವೆಯ-ನ್ನು ಸಹ ಮೈಗೂಡಿಸಿಕೊಂಡಿಲ್ಲ ಅನ್ನೋದು ಕೊರೊನಾ ದಾಳಿಯ ಸಂದರ್ಭದಲ್ಲಿ ನಿರೂಪಿತವಾಗುತ್ತಿದೆ. ಭಾರತೀಯರು ತಮ್ಮ ಧಾರ್ಮಿಕ-ಸಾಂಸ್ಕೃತಿಕ ಗತಕಾಲದ ಬಗ್ಗೆ ಬೂಟಾಟಿಕೆ ಮಾತಾಡುತ್ತಾ, ಅದನ್ನು ಪ್ರದರ್ಶನಕ್ಕಿಡುವ ಆಷಾಢಭೂತಿ-ಗಳಾಗಿದ್ದಾರೆಯೇ ಹೊರತು, ಶ್ರೀಮಂತ ಸಂಸ್ಕೃತಿಯಂತೆ ಧೀಮಂತಿಕೆಯಿಂದ ಬದುಕುವುದನ್ನು ಕಲಿತಿಲ್ಲ. ಯಾರಿಗೂ ಧರ್ಮವಿಚಾರದಲ್ಲಿ ನಂಬಿಕೆ ಇಲ್ಲ; ದೇವರ ಭಯ ಮೊದಲೇ ಇಲ್ಲ. ನುಡಿದಂತೆ ನಡೆಯುವುದಿಲ್ಲ. ಸತ್ಯವಾಗಿ ನಡೆದವರ ಅನುಸರಿಸುವುದಿಲ್ಲ. ಅಧರ್ಮಮಾರ್ಗದಲ್ಲಿ ಸಂಪಾದಿಸುವವರು ಮಾದರಿಯಾಗುತ್ತಿದ್ದಾರೆ.

ಯಾವಾಗ ಭಾರತೀಯ ಸಮಾಜ ಹಣಕ್ಕೆ ಪ್ರಾಮುಖ್ಯವನ್ನು ಕೊಟ್ಟು, ಭ್ರಷ್ಟಾಚಾರ ಸಾಮಾನ್ಯ ಅಂದುಕೊಂಡಾಗಲೇ ಮಾನವತೆ ಅಳಿದುಹೋಯಿತು. ಅದರ ವಿಕಾರ ರೂಪವನ್ನ ಈಗಿನ ಕೊರೊನಾ ಪಿಡುಗಿನ ಕಾಲದಲ್ಲಿ ಕಾಣುತ್ತಿದ್ದೇವೆ. ಕಾಡುನ್ಯಾಯದಂತಿರುವ ಸಮಾಜದಲ್ಲಿ ಅಕ್ರಮವಾಗಿ ಸಂಪಾದಿಸುವ ಶ್ರೀಮಂತನೇ ಎಲ್ಲರಿಗೂ ಶ್ರೇಷ್ಠವಾಗಿದ್ದಾನೆ. ನ್ಯಾಯಮಾರ್ಗದಲ್ಲಿ ದುಡಿವ ಬಡವ ನಿಕೃಷ್ಟನಾಗು-ತ್ತಿದ್ದಾನೆ. ಇದರಿಂದ ಹಣದ ಮುಂದೆ ಮನುಷ್ಯನ ಜೀವ ಕಾಲಕಸದಂತೆ ತೂರಿ ಹೋಗುತ್ತಿದೆ.

ಭೂಮಿಯ ಮೇಲೆ ಯಾರೂ ಶಾಶ್ವತರಲ್ಲ. ನಾವೆಲ್ಲಾ ಇಂದು ಇದ್ದು ನಾಳೆ ಹೋಗುವ ಅತಿಥಿಗಳಷ್ಟೆ. ಬರಿಗೈಲಿ ಜಗತ್ತಿಗೆ ಬಂದ ನಾವು, ಬರಿಗೈಲೇ ಹೋಗುತ್ತೇವೆ. ಸತ್ತವರಾರೂ ಸಂಪಾದಿಸಿದ್ದನ್ನ ಕೊಂಡೊಯ್ಯುವುದಿಲ್ಲ. ಹೀಗಿದ್ದರೂ, ಹಣಕ್ಕಾಗಿ ಕೊರೋನ ಸಂಕಷ್ಟದಲ್ಲಿ ಬಯಸುವುದು ಪರಮ ಅಸಹ್ಯಕರ. ದೇಶಕ್ಕಾಗಿ ಹೋರಾಡುವ ಯೋಧ, ಹಣಕ್ಕಾಗಿ ಶತ್ರುದೇಶದೊಂ-ದಿಗೆ ಕೈಜೋಡಿಸಿದರೆ ದೇಶದ ಪರಿಸ್ಥಿತಿ ಏನಾಗಬಹುದೋ, ಅದೇ ಆಗುತ್ತಿದೆ ಕೊರೊನಾ ರೋಗಿಗಳ ದೇಹಸ್ಥಿತಿ. ನಮ್ಮಲ್ಲಿ ಉತ್ತಮವಾದುದನ್ನು ಬಳಸುವ ಇಚ್ಛಾಶಕ್ತಿ ಇಲ್ಲದೆ, ಕೊರೊನಾ ವಿರುದ್ಧದ ಹೋರಾಟದಲ್ಲೂ ಸೋಲುತ್ತಿದ್ದೇವೆ. ಕೊರೊನಾ ಸೋತು ಮಾನವತೆ ಗೆಲ್ಲಬೇಕಾದರೆ ನಾವೆಲ್ಲ ಪ್ರಾಮಾಣಿಕವಾಗಿ ಬದುಕುವುದನ್ನು ರೂಢಿಸಿಕೊಳ್ಳಬೇಕು. ಆಗಷ್ಟೆ ಮಾನವತೆಯ ಹಣತೆ ಬೆಳಗಿ, 'ಸಚ್ಚಿದಾನಂದ'ಭಾವದ ಅನುಭೂತಿ ಪ್ರಾಪ್ತವಾಗುವುದು. •

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಪಶ್ಚಿಮ ಬಂಗಾಳದಲ್ಲಿ** ಬಿಜೆಪಿ ಕಾರ್ಯಕರ್ತನನ್ನು ಹತ್ಯೆ ಮಾಡಲಾಗಿದೆ. ಆತನ ಕುಟುಂಬದವರು ಶವದ ಬಳಿ ರೋದಿಸುತ್ತಿದ್ದಾರೆ ಎಂದು ಬಿಂಬಿಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಬಿಜೆಪಿಯ ಹಲವು ನಾಯಕರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

✓ **ಇದು ಸುಳ್ಳುಸುದ್ದಿ** ಎಂದು ಫ್ಯಾಕ್ಟ್‌ಹಂಟ್ ಜಾಲತಾಣವು ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಆಂಧ್ರಪ್ರದೇಶದ ಹಳ್ಳಿಯೊಂದರಲ್ಲಿ ಕೋವಿಡ್ ತಗುಲಿದ್ದ ಕುಟುಂಬವನ್ನು ಊರಿನಿಂದ ಹೊರಗೆ ಗುಡಿಸಲಿನಲ್ಲಿ ಇರಿಸಲಾಗಿತ್ತು. ತೀವ್ರ ಉಸಿರಾಟದಿಂದ ಒದ್ದಾಡುತ್ತಿದ್ದ ವ್ಯಕ್ತಿಗೆ ಆತನ ಮಗಳು ನೀರು ಕುಡಿಸಲು ಯತ್ನಿಸುತ್ತಿರುವ ವಿಡಿಯೊವನ್ನು ಪಶ್ಚಿಮ ಬಂಗಾಳದ ವಿಡಿಯೊ ಎಂದು ತಪ್ಪಾಗಿ ಹಂಚಿಕೊಳ್ಳಲಾಗಿದೆ ಎಂದು ಫ್ಯಾಕ್ಟ್‌ಹಂಟ್ ಹೇಳಿದೆ.

ದಿನ ಭವಿಷ್ಯ

ಶನಿವಾರ ಮೇ 8, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣಿ ದ್ವಾದಶಿ ಗಂ. 30-3 (ಸಾ. 6-05) ಶನಿವಾರ ನಿತ್ಯ ನಕ್ಷತ್ರ ಉತ್ತರಾಭಾದ್ರ ಗಂ. 24-13 (ಹ. 3-45) ವಿಷ್ಕಂಭ ನಾಮ ಯೋಗ ಗಂ 37-13 ತೈತಲ ಕರಣ ಗಂ. 30-3 ವಿಷ ಗಂ. 56-30 ಅಮೃತ ಗಂ. 12-14 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-00 ಸೂರ್ಯಾಸ್ತ: 6-32 ಅದೃಷ್ಟ ಸಂಖ್ಯೆ 6, 7

ಮೇಷ: ವ್ಯಾಪಾರದಲ್ಲಿ ಸಾಧಾರಣ ಲಾಭ. ವಿದ್ಯಾರ್ಥಿಗಳಿಗೆ ಅನುಕೂಲ. ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ತೊಂದರೆ. ಮನಸ್ಸಿಗೆ ಬೇಸರ ಉಂಟಾದೀತು. ವಿನಾಕಾರಣ ಓಡಾಟ ಮಾಡಬೇಕಾಗಬಹುದು.

ವೃಷಭ: ಆರೋಗ್ಯದಲ್ಲಿ ಸುಧಾರಣೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದವರಿಗೆ ಕೀರ್ತಿವೃದ್ಧಿ. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಲಾಭ. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಲಿದ್ದೀರಿ. ಬಂಧು ಮಿತ್ರರ ಸಹಕಾರ.

ಮಿಥುನ: ವ್ಯಾಪಾರ ವ್ಯವಹಾರಗಳಲ್ಲಿ ಸಾಮಾನ್ಯ ಪ್ರಗತಿ. ವಾಸ್ತವ್ಯದ ಅಥವಾ ಉದ್ಯೋಗದಲ್ಲಿನ ಸ್ಥಳ ಬದಲಾವಣೆ ಸಾಧ್ಯತೆ. ಪ್ರಯಾಣದಲ್ಲಿ ತೊಂದರೆಗಳು ಎದುರಾಗುವ ಲಕ್ಷಣ. ಹೊಸ ಕೆಲಸ ಕಾರ್ಯಗಳಲ್ಲಿ ಅಲ್ಪ ಪ್ರಗತಿ.

ಕರ್ಕಾಟಕ: ಮಾನಸಿಕ ಚಿಂತೆಗಳು ಎದುರಾಗುವ ಸಾಧ್ಯತೆ. ವ್ಯವಹಾರದಲ್ಲಿ ಉತ್ತಮ ಪ್ರಗತಿ. ಉದ್ಯೋಗದಲ್ಲಿರುವವರಿಗೆ ಸಾಮಾನ್ಯ ಪ್ರಗತಿ ಕಂಡುಬರುವುದು. ಕೃಷಿ ಕಾಯಕದಲ್ಲಿರುವವರಿಗೆ ಉತ್ತಮ ಫಲ ನಿರೀಕ್ಷೆ.

ಸಿಂಹ: ಕುಟುಂಬದಲ್ಲಿ ನೆಮ್ಮದಿಯ ವಾತಾವರಣ. ಆರೋಗ್ಯದಲ್ಲಿ ಸುಧಾರಣೆ. ಉದ್ದೇಶಿತ ಕಾರ್ಯಗಳಲ್ಲಿ ಯಶಸ್ಸನ್ನು ಹೊಂದುವಿರಿ. ವಿವಾಹಾಕಾಂಕ್ಷಿಗಳಿಗೆ ಅನುಕೂಲಕರ ದಿನ. ಬಂಧು ಮಿತ್ರರ ಸಹಾಯ ದೊರಕಲಿದೆ.

ಕನ್ಯಾ: ಕೃಷಿ ಉತ್ಪನ್ನಗಳಲ್ಲಿ ಸ್ವಲ್ಪಮಟ್ಟಿನ ಕಡಿತ. ಕೆಲಸ ಕಾರ್ಯಗಳ ಸಾಧನೆಗಾಗಿ ಓಡಾಟ. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ. ಬಂಧು ಮಿತ್ರರ ಸಹಕಾರವು ದೊರೆತು ನೆಮ್ಮದಿ ಉಂಟಾಗಲಿದೆ.

ತುಲಾ: ವ್ಯಾಪಾರ ವ್ಯವಹಾರಗಳಲ್ಲಿ ಅಧಿಕ ಲಾಭ. ಕೌಟುಂಬಿಕ ಸೌಖ್ಯ ನಿಮ್ಮದಾಗಲಿದೆ. ಆರೋಗ್ಯದಲ್ಲಿ ಸುಧಾರಣೆ. ಪುಣ್ಯ ಕ್ಷೇತ್ರಗಳ ದರ್ಶನ ಭಾಗ್ಯ. ಬಂಧುಗಳ ಸಹಾಯ ದೊರಕುವುದು.

ವೃಶ್ಚಿಕ: ವ್ಯಾಪಾರ ವ್ಯವಹಾರಗಳಲ್ಲಿ ವಿಶೇಷ ಲಾಭ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ಅಡಚಣೆ. ಉದ್ದೇಶಿತ ಕೆಲಸ ಕಾರ್ಯಗಳಿಗಾಗಿ ಅಲೆದಾಟ ಮಾಡಬೇಕಾದೀತು.

ಧನು: ವ್ಯವಹಾರದಲ್ಲಿ ಧನಲಾಭ. ಆರೋಗ್ಯದಲ್ಲಿ ಸುಧಾರಣೆಯೊಂದಿಗೆ ಬಂಧುಮಿತ್ರರ ಸಹಾಯ. ಕೃಷಿಯಲ್ಲಿ ಉತ್ತಮ ಫಲ. ದುಷ್ಟಜನರ ಸಹವಾಸದಿಂದಾಗಿ ಕಾರ್ಯಗಳಲ್ಲಿ ವಿಘ್ನವನ್ನು ಆಹ್ವಾನಿಸಿಕೊಳ್ಳುವ ಸಾಧ್ಯತೆ.

ಮಕರ: ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅಭಿವೃದ್ಧಿ. ಸ್ಥಿರಾಸ್ತಿ ಸಂಪಾದನೆಯ ಯೋಗವು ಕಂಡುಬರುತ್ತಿದೆ. ಆರ್ಥಿಕ ವ್ಯವಹಾರದಲ್ಲಿ ಅಧಿಕ ಲಾಭವನ್ನು ನಿರೀಕ್ಷಿಸಬಹುದು. ಬಂಧುಗಳೊಡನೆ ವೃಥಾ ವೈಮನಸ್ಸು ಉಂಟಾದೀತು.

ಕುಂಭ: ಕುಟುಂಬ ವರ್ಗದವರಲ್ಲಿ ಅನಾರೋಗ್ಯ ಸಾಧ್ಯತೆ. ಸರ್ಕಾರಿ ಕೆಲಸಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುವುದು. ಧಾರ್ಮಿಕ ಕಾರ್ಯಗಳಿಗಾಗಿ ವೆಚ್ಚ ಭರಿಸಬೇಕಾದೀತು.

ಮೀನ: ಸಜ್ಜನರ ಸಹವಾಸದಿಂದ ಕೀರ್ತಿಲಾಭ. ವ್ಯವಹಾರದಲ್ಲಿ ಉತ್ತಮ ಲಾಭ. ಬಂಧು ಮಿತ್ರರ ಸಹಾಯವನ್ನು ಪಡೆದುಕೊಳ್ಳಲಿದ್ದೀರಿ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ವಿಘ್ನಗಳು ಎದುರಾಗುವ ಸಾಧ್ಯತೆ.

ನಿಮ್ಮ ಜನ್ಮದಿನ 8-ಮೇ ಈ ದಿನ ಅತ್ಯಂತ ಶುಭಕರ. ವ್ಯಾಪಾರ ವ್ಯವಹಾರದಲ್ಲಿ ಸಾಧಾರಣ ಲಾಭಕ್ಕೆ ಕೊರತೆ ಇರಲಾರದು. ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಕಿರುಕುಳ ಉಂಟಾಗುವುದರಿಂದಾಗಿ ಮಾನಸಿಕ ಚಿಂತೆ. ಸಂಗಾತಿಯ ಸಹಾಯದಿಂದಾಗಿ ಕೌಟುಂಬಿಕ ಸಮಸ್ಯೆಗಳಿಂದ ಮುಕ್ತಿ. ನೆಮ್ಮದಿಯ ದಾಂಪತ್ಯ ಜೀವನ.

ಪದಬಂಧ 4590 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಮಣ್ಣಿನ ಬಾನಿ (3)
3.ಸೂಕ್ಷ್ಮವಾಗಿಯೇ ಪರಿಶೀಲಿಸುವವ (4)
5.ವ್ಯಾಕರಣದ ವಿಭಕ್ತಿಗಳಲ್ಲಿ ಮೊದಲನೆಯದು (3)
6.ಅಧಿಕೇಶವನ ಭಕ್ತನ ಹೆಸರಿನಲ್ಲಿರುವ ಬಂಗಾರ (3)
8.ಒಳ್ಳೆಯ ಅದೃಷ್ಟವನ್ನು ಹೊಂದಿರುವುದು (3)
10.ಸಂತಸದಿಂದ ಉಕ್ಕಿದ ಕಣ್ಣೀರು (4)
11.ಇದು ಒಂದು ಜಾತಿಯ ಕಬ್ಬು (3)
12.ಹೊಂಗೆಯ ಮರ ಇಲ್ಲಿದೆ (3)
14.ಬನವಾಸಿಯನ್ನಾಳಿದ ರಾಜವಂಶ (3)
16.ಅತ್ಯಾಸಕ್ತಿಯಿಂದ ಕೂಡಿದವನು (3)
18.ವೇದಾದಿಗಳನ್ನು ಅಧ್ಯಯನ ಮಾಡಿದವನ (4)
19.ಬೆಲೆ ಕೊಟ್ಟು ಕೊಂಡುಕೊಳ್ಳುವಿಕೆ (3)

ಮೇಲಿಂದ ಕೆಳಕ್ಕೆ

2.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)
3.ಆರಂಭವಾಗಿರುವ ವೈಭವ (4)
4.ಸ್ವಲ್ಪ ಕಾಲದಲ್ಲಿಯೇ ನಾಶವಾಗತಕ್ಕದ್ದು (3)
7.ಕಳಿತ ಬಾಳೆಯ ಫಲ (3)
8.ಅಪ್ಪ ಏಕೆ? ಪ್ರಾಚೀನ ವೈದ್ಯ ಇಲ್ಲಿಹನಲ್ಲಾ? (3)
9.ಮುಷ್ಟಶಕ್ತಿಗಳ ಹತ್ತಿರದಲ್ಲಿರುವ ಸಂಖ್ಯೆ! (3)
10.ದೈವ ಧರ್ಮಗಳಲ್ಲಿ ನಂಬಿಕೆಯುಳ್ಳವನು (3)
13.ಈಕೆ ಸೋದರಮಾವನ ಹೆಂಡತಿ (4)
15.ದುಡ್ಡು ಕಾಸು ಇಲ್ಲದವನು (3)
17.ಸಮ್ಮುಖದಲ್ಲಿರುವ ಗೆಳೆಯನನ್ನು ಹುಡುಕಿ! (2)



4589ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಪವೀತ3.ವಿದೂಷಕ 5.ಕಥನ6.ರಂಜಕ8.ಮಂಡೂಕ 9.ಕದ್ದಿ10.ಪದವಿ12.ಅಕಿಂತ 14.ಗಮನಾರ್ಹ15.ಗುಣಾನ

ಮೇಲಿನಿಂದ ಕೆಳಕ್ಕೆ: 1.ಉಪಕಾರ 2.ವಕಟ4.ವಿದಾನ4.ಕಣಿಕ 7.ರಂಜಿತ 8.ಮಂದಾರ 9.ಕವಿದಾನ11.ವಿಕಸನ 12.ಅನಘ13.ಸರಸ

ಸುಡೊಕು 4976

				2		3		
3		6	5		8			
	4			7	3	2		6
	6						7	9
9		1		8				
						1		8
		2	3		7		5	
7	1					6		
		3	4		2		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನು ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4975 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಕಠಿಣ ಕ್ರಮ ತೆಗೆದುಕೊಂಡರೆ 3ನೇ ಅಲೆ ಇರದು

ನವದೆಹಲಿ: 'ಕಠಿಣ ಕ್ರಮಗಳನ್ನು ಕೈಗೊಂಡರೆ ದೇಶದಲ್ಲಿ ಕೊರೊನಾ ಸೋಂಕಿನ ಮೂರನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆ ಇರುವುದಿಲ್ಲ' ಎಂದು ಕೇಂದ್ರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಕೆ.ವಿಜಯರಾಘವನ್ ಶುಕ್ರವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್–19 ಪ್ರಸರಣ ತಡೆಯಲು ರೂಪಿಸಿರುವ ಮಾರ್ಗಸೂಚಿಗಳನ್ನು ಗ್ರಾಮಗಳು, ಜಿಲ್ಲೆಗಳು ಹಾಗೂ ರಾಜ್ಯಗಳಲ್ಲಿ ಎಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ ಎಂಬುದರ ಮೇಲೆ ಮೂರನೇ ಅಲೆ ಕಾಣಿಸಿಕೊಳ್ಳುವುದು ಅವಲಂಬಿಸಿದೆ' ಎಂದರು.

ದೇಶದಲ್ಲಿ ಕೊರೊನಾ ಸೋಂಕಿನ ಮೂರನೇ ಅಲೆ ಅನಿವಾರ್ಯ ಎಂಬ ಹೇಳಿಕೆ ನೀಡಿದ ಎರಡೇ ದಿನದೊಳಗೆ ಅವರಿಂದ ಈ ಅಭಿಪ್ರಾಯ ವ್ಯಕ್ತವಾಗಿದೆ.

ವಿಜಯರಾಘವನ್ ಅವರ ಹೇಳಿಕೆ ರಾಜಕೀಯ ಕೆಸರೆರಚಾಟಕ್ಕೂ ಕಾರಣವಾಗಿತ್ತು. ಕೋವಿಡ್ ಪಿಡುಗಿನ ನಿರ್ವಹಣೆ ಮಾಡುವಲ್ಲಿ ಮೋದಿ ನೇತೃತ್ವದ ಸರ್ಕಾರ ವಿಫಲವಾಗಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು.

ಕೋವಿಡ್ ನಿರ್ವಹಣೆ: ಮೋದಿ ಸರ್ಕಾರ ವಿಫಲ • ಸಮರ್ಥ, ದೂರದೃಷ್ಟಿ ನಾಯಕತ್ವ ಅಗತ್ಯ

ಸರ್ವಪಕ್ಷಗಳ ಸಭೆಗೆ ಸೋನಿಯಾ ಆಗ್ರಹ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ಕೋವಿಡ್ ಪರಿಸ್ಥಿತಿ ನಿರ್ವಹಣೆಯಲ್ಲಿ ವಿಫಲವಾಗಿದೆ' ಎಂದು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, 'ಪರಿಸ್ಥಿತಿ ಕುರಿತ ಚರ್ಚೆಗೆ ಕೂಡಲೇ ಸರ್ವಪಕ್ಷಗಳ ಸಭೆ ಕರೆಯಬೇಕು' ಎಂದು ಒತ್ತಾಯಿಸಿದ್ದಾರೆ.

ವರ್ಚುಯಲ್ ಸ್ವರೂಪದಲ್ಲಿ ನಡೆದ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, 'ಕೋವಿಡ್ ಪರಿಸ್ಥಿತಿಯ ನಿರ್ವಹಣೆಯಲ್ಲಿ ದೇಶದ ವ್ಯವಸ್ಥೆ ಸೋತಿಲ್ಲ. ಆದರೆ, ಇದನ್ನು ನಿಭಾಯಿಸುವಲ್ಲಿ ಮೋದಿ ನೇತೃತ್ವದ ಸರ್ಕಾರ ಪೂರ್ಣ ವಿಫಲವಾಗಿದೆ' ಎಂದು ಹೇಳಿದರು.

'ಈ ಸಂದರ್ಭದಲ್ಲಿ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಒಂದು ದೇಶವಾಗಿ ಇದರ ವಿರುದ್ಧ ಹೋರಾಟ ನಡೆಸಬೇಕಾಗಿದೆ. ಈ ನಿಟ್ಟಿನಲ್ಲಿ ಮೊದಲಿಗೆ ಸರ್ವಪಕ್ಷಗಳ ಸಭೆಯನ್ನು ಕರೆಯಬೇಕು. ಆದರೆ, ಜನರ ಬಗ್ಗೆ ಕಾಳಜಿಯೇ ಇಲ್ಲದ ನಾಯಕತ್ವದಡಿ ದೇಶವಿಂದು ಸಿಲುಕಿದೆ' ಎಂದು ಪ್ರಧಾನಿ ವಿರುದ್ಧ ಹರಿಹಾಯ್ದರು.

'ನಿರ್ವಹಣೆ ಕುರಿತ ವಿಶ್ವಾಸಾರ್ಹತೆ ಮೂಡಿಸಲು ಹಾಗೂ ಸಮಗ್ರ ಕ್ರಿಯಾಯೋಜನೆ ರೂಪಿಸಲು ಸ್ಥಾಯಿ ಸಮಿತಿಗಳ ಸಭೆ ಕರೆಯಬೇಕು. ಪಿಡುಗಿನ ವಿರುದ್ಧದ ಹೋರಾಟ ಎಂದರೆ ಅದು ಸರ್ಕಾರ ಮತ್ತು ನಮ್ಮ ವಿರುದ್ಧ ಅಲ್ಲ. ಅದು ನಮ್ಮ ಮತ್ತು ಕೊರೊನಾ ವಿರುದ್ಧ ಎಂಬುದು ಕಾಂಗ್ರೆಸ್‌ನ ಬಲವಾದ ನಂಬಿಕೆ' ಎಂದು ಹೇಳಿದರು.

'ನಾಯಕತ್ವ ವಿಫಲವಾಗಿದೆ ಎಂಬುದು ಈಗ ಸ್ಪಷ್ಟವಾಗಿದೆ. ಭಾರತದ ಬಲ ಮತ್ತು ಸಂಪನ್ಮೂಲವನ್ನು ವ್ಯವಸ್ಥಿತವಾಗಿ ಕ್ರೋಡೀಕರಿಸಲು ಮೋದಿ ಸರ್ಕಾರ ವಿಫಲವಾಗಿದೆ. ಜನರೆಡೆಗೆ ಕಾಳಜಿಯೇ ಇಲ್ಲದ ರಾಜಕೀಯ ನಾಯಕತ್ವಕ್ಕೆ ಭಾರತ ಸಿಲುಕಿದೆ. ಜನರ ನಿರೀಕ್ಷೆಗೆ ಸ್ಪಂದಿಸಲೂ ಸರ್ಕಾರ ವಿಫಲವಾಗಿದೆ' ಎಂದರು.

ಇದೇ ಸಂದರ್ಭದಲ್ಲಿ ಅವರು ರಾಜ್ಯಸಭೆಯ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ, ಆರೋಗ್ಯ ಸ್ಥಾಯಿ ಸಮಿತಿಯ ವರದಿ ಮಂಡಿಸುವಂತೆ ಹಾಗೂ ಹಾಗೂ ಅದರ ಶಿಫಾರಸುಗಳ ಜಾರಿಗೆ ಒತ್ತು ನೀಡಬೇಕು ಎಂದು ಸಂಬಂಧಿತ ಅಧ್ಯಕ್ಷರ ಗಮನಸೆಳೆಯಬೇಕು' ಎಂದರು.

'ಇನ್ನಷ್ಟು ವಿಳಂಬವಾಗಬಾರದು. ಸಮರ್ಥವಾಗಿ, ತಾಳ್ಮೆಯಿಂದ ಮತ್ತು ದೂರದೃಷ್ಟಿ ಚಿಂತನೆಯ ನಾಯಕತ್ವ ಈಗ ಪರಿಸ್ಥಿತಿ ನಿಭಾಯಿಸಲು ಅಗತ್ಯವಾಗಿದೆ. ಸರ್ಕಾರದ ಅಸಮರ್ಥತೆ ಮತ್ತು ಭಿನ್ನಾಭಿಪ್ರಾಯಗಳ ಭಾರದಿಂದ ದೇಶ ಕುಸಿಯುತ್ತಿದೆ. ಪಕ್ಷದ ಸಂಸದರು ಜನರ ಸೇವೆಗೆ ಮುಂದಾಗಲು ಇದು ಸಕಾಲ' ಎಂದು ಸಲಹೆ ಮಾಡಿದರು.

ಪಿಡುಗಿನಿಂದ ಸಾವಿರಾರು ಜನರು ಸಾಯುತ್ತಿದ್ದಾರೆ. ಆದರೆ, ಮೋದಿ ಸರ್ಕಾರ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದ ಅವರು, ಜನರ ನೋವು ಶಮನಗೊಳಿಸುವ ಕೆಲಸ ಆಗುತ್ತಿಲ್ಲ. ಲಸಿಕೆ ನೀತಿಯು ಸಮರ್ಪಕವಾಗಿಲ್ಲ. ಅಸಂಖ್ಯಾತ ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳ ಜನರು, ಕಡುಬಡವರಿಗೆ ಇನ್ನೂ ಲಸಿಕೆ ತಲುಪಿಲ್ಲ ಎಂದರು.

ಆಮ್ಲಜನಕ ಪೂರೈಸಿ, ಮಮತಾ ಪತ್ರ

ಕೋಲ್ಕತ್ತ (ಪಿಟಿಐ): ಕೋವಿಡ್–19 ಚಿಕಿತ್ಸೆಗಾಗಿ ಆಮ್ಲಜನಕ ಪೂರೈಕೆ ಹೆಚ್ಚಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪತ್ರ ಬರೆದಿದ್ದಾರೆ.

ಬಂಗಾಳದಲ್ಲಿ ಉತ್ಪಾದನೆಯಾಗುವ ಆಮ್ಲಜನಕದಲ್ಲಿ ಕೇಂದ್ರವು ಇತರ ರಾಜ್ಯಗಳಿಗೆ ಹೆಚ್ಚಿನ ಆಮ್ಲಜನಕ ಹಂಚಿಕೆ ಮಾಡುತ್ತಿದೆ. ಬಂಗಾಳಕ್ಕೆ ಹೆಚ್ಚಿನ ಅವಶ್ಯಕತೆಯಿದ್ದರೂ ಇತರ ರಾಜ್ಯಗಳಿಗೆ ಹೆಚ್ಚು ಒದಗಿಸಲಾಗುತ್ತಿದೆ ಎಂದೂ ಮಮತಾ ಹೇಳಿದ್ದಾರೆ.

ರಾಜ್ಯದಲ್ಲಿ ಪ್ರತಿ ದಿನದ ಆಮ್ಲಜನಕ ಬಳಕೆ 24 ಗಂಟೆ ಅವಧಿಯಲ್ಲಿ 470 ಮೆಟ್ರಿಕ್ ಟನ್ ತಲುಪಿದೆ. ಇನ್ನು ಒಂದು ವಾರದಲ್ಲಿ ಇದು 550 ಮೆಟ್ರಿಕ್ ಟನ್ ಆಗಲಿದೆ ಎಂದು ಮಮತಾ ಹೇಳಿದ್ದಾರೆ.

'ವೈದ್ಯಕೀಯ ಆಮ್ಲಜನಕದ ಹಂಚಿಕೆ ಬಗ್ಗೆ ಪರಿಶೀಲಿಸಲು ಮತ್ತು ದಿನಕ್ಕೆ ಕನಿಷ್ಠ 550 ಮೆಟ್ರಿಕ್ ಟನ್‌ಗಳಷ್ಟು ಆಮ್ಲಜನಕವನ್ನು ರಾಜ್ಯಕ್ಕೆ ತಕ್ಷಣ ಹಂಚಿಕೆ ಮಾಡಲು ಸೂಚನೆಗಳನ್ನು ನೀಡಬೇಕು ಎಂದು ನಾನು ನಿಮ್ಮನ್ನು ವಿನಂತಿಸುತ್ತೇನೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬೇಡಿಕೆ ಇಟ್ಟದ್ದರಿಂದ ಕಡಿಮೆ ಹಂಚಿಕೆ ಮಾಡಿದರೆ ಪೂರೈಕೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ. ಜತೆಗೆ ರಾಜ್ಯದ ರೋಗಿಗಳ ಪ್ರಾಣಹಾನಿಗೂ ಕಾರಣವಾಗಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಪಕ್ಷದ ಸಾಧನೆ ನಿರಾಶಾದಾಯಕ'

ಇತ್ತೀಚೆಗೆ ನಡೆದ ವಿಧಾನಸಭೆಗಳ ಚುನಾವಣೆಯಲ್ಲಿ ಪಕ್ಷದ ಸಾಧನೆ ನಿರಾಶದಾಯಕವಾಗಿದೆ. ಪಕ್ಷದ ಸಂಸದರು ಈ ಫಲಿತಾಂಶದಿಂದ ಪಾಠ ಕಲಿಯಬೇಕು ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಹೇಳಿದರು.

ಕಾಂಗ್ರೆಸ್ ಕಾರ್ಯಕಾರಣಿ ಸಭೆಯು (ಸಿಡಬ್ಲ್ಯುಸಿ) ಈ ಫಲಿತಾಂಶಗಳನ್ನು ಶೀಘ್ರವೇ ವಿಶ್ಲೇಷಿಸಲಿದೆ. ಆದರೆ, ಒಂದು ಪಕ್ಷವಾಗಿ ಈ ಫಲಿತಾಂಶದಿಂದ ಸಮಗ್ರವಾಗಿ ಪಾಠ ಕಲಿಯಬೇಕಿದೆ. ಪ್ರಾಮಾಣಿಕತೆ ಮತ್ತು ನಮ್ರತೆಯ ಮರುಸ್ಥಾಪನೆಗೆ ಒತ್ತು ನೀಡಬೇಕಾಗಿದೆ ಎಂದು ಸಲಹೆ ಮಾಡಿದರು.

ಸುದ್ದಿ 2 ನಿಮಿಷ

ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಪತಿ, ಮಕ್ಕಳಿಗೆ ಕೋವಿಡ್

ಬೆಂಗಳೂರು: ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಪತಿ, ಉದ್ಯಮಿ ರಾಜ್ ಕುಂದ್ರ ಅವರಿಗೆ ಕೋವಿಡ್ ದೃಢಪಟ್ಟಿದೆ.

ಈ ಕುರಿತು ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಶಿಲ್ಪಾ ಶೆಟ್ಟಿ, 'ಒಂದು ಕುಟುಂಬವಾಗಿ ಕಳೆದ 10 ದಿನ ನಾವು ತೀವ್ರ ಸಂಕಷ್ಟವನ್ನು ಅನುಭವಿಸಿದೆವು. ನನ್ನ ಅತ್ತೆ–ಮಾವನಿಗೆ ಕೋವಿಡ್ ದೃಢಪಟ್ಟಿತ್ತು. ಇದಾದ ಬಳಿಕ ಮಕ್ಕಳಾದ ಸಮೀಶಾ, ವಿಯಾನ್ ರಾಜ್, ನನ್ನ ಅಮ್ಮ ಹಾಗೂ ರಾಜ್‌ಗೂ ಕೋವಿಡ್ ದೃಢಪಟ್ಟಿದೆ' ಎಂದಿದ್ದಾರೆ.

'ವೈದ್ಯರ ಸಲಹೆ ಮೇಲೆ ಅವರೆಲ್ಲರೂ ಮನೆಯೊಳಗೇ ಪ್ರತ್ಯೇಕ ಕೋಣೆಯಲ್ಲಿದ್ದಾರೆ. ಮನೆಯಲ್ಲಿ ಕೆಲಸಕ್ಕಿದ್ದ ಇಬ್ಬರು ಸಿಬ್ಬಂದಿಗೂ ಕೋವಿಡ್ ದೃಢಪಟ್ಟಿದ್ದು, ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಎಲ್ಲರೂ ಗುಣಮುಖರಾಗುತ್ತಿದ್ದಾರೆ. ನಾನು ಕೂಡ ಕೋವಿಡ್ ಪರೀಕ್ಷೆಗೊಳಪಟ್ಟಿದ್ದು, ನೆಗೆಟಿವ್ ಬಂದಿದೆ. ಅಭಿಮಾನಿಗಳ ಪ್ರೀತಿ, ಬೆಂಬಲಕ್ಕೆ ಧನ್ಯವಾದ. ಎಲ್ಲರೂ ಮಾಸ್ಕ್ ಧರಿಸಿ, ಕೈಗಳನ್ನು ಸ್ವಚ್ಛಗೊಳಿಸಿ ಹಾಗೂ ಸುರಕ್ಷಿತವಾಗಿರಿ. ನಿಮಗೆ ಕೋವಿಡ್ ಪಾಸಿಟಿವ್ ಆಗಲಿ ಆಗದೇ ಇರಲಿ ಮಾನಸಿಕವಾಗಿ ಸದೃಢವಾಗಿರಿ' ಎಂದು ಪೋಸ್ಟ್ ಮಾಡಿದ್ದಾರೆ.

ಕೇರಳ: ಕೋವಿಡ್ ಪರೀಕ್ಷಾ ದರ ಕಡಿತದ ವಿರುದ್ಧ ಅರ್ಜಿ ತಿರಸ್ಕಾರ

ಕೊಚ್ಚಿ (ಪಿಟಿಐ): ಕೋವಿಡ್ ಇರುವಿಕೆಯನ್ನು ದೃಢಪಡಿಸುವ ಆರ್‌ಟಿ–ಪಿಸಿಆರ್ ಪರೀಕ್ಷಾ ದರವನ್ನು ₹ 1,700ರಿಂದ ₹ 500ಕ್ಕೆ ಇಳಿಸುವ ರಾಜ್ಯ ಸರ್ಕಾರದ ಇತ್ತೀಚಿನ ನಿರ್ಧಾರವನ್ನು ಪ್ರಶ್ನಿಸಿ ಖಾಸಗಿ ಲ್ಯಾಬ್‌ಗಳು ಸಲ್ಲಿಸಿದ್ದ ಮನವಿಯನ್ನು ಕೇರಳ ಹೈಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.

ಮಾರುಕಟ್ಟೆಯಲ್ಲಿ ಅಧ್ಯಯನ ನಡೆಸಿಯೇ ಕೇರಳ ಸರ್ಕಾರವು ಆರ್‌ಟಿ–ಪಿಸಿಆರ್ ಪರೀಕ್ಷೆಯ ದರವನ್ನು ನಿಗದಿಪಡಿಸಿದೆ. ಹರಿಯಾಣ, ತೆಲಂಗಾಣ, ಉತ್ತರಾಖಂಡ ಸೇರಿದಂತೆ ದೇಶದ ಇತರ ರಾಜ್ಯಗಳ ವ್ಯಾಪ್ತಿಯಲ್ಲೂ ಇದೇ ರೀತಿಯ ಪರೀಕ್ಷಾ ದರವಿದೆ. ಹಾಗಾಗಿ, ಪರೀಕ್ಷಾ ದರಕ್ಕೆ ಸಂಬಂಧಿಸಿದಂತೆ ಮಧ್ಯಂತರ ಆದೇಶವನ್ನು ನೀಡಲು ಯಾವುದೇ ಕಾರಣವಿಲ್ಲ ಎಂದು ನ್ಯಾಯಮೂರ್ತಿ ಎನ್. ನಾಗರೇಶ್ ಹೇಳಿದ್ದಾರೆ.

ಕೇರಳದಲ್ಲಿರುವ ಆರ್‌ಟಿ–ಪಿಸಿಆರ್ ಕೋವಿಡ್–19 ಪರೀಕ್ಷಾ ದರವು ₹1,700 ದೇಶದ ಇತರೆಡೆಗಳಿಗಿಂತ ಹೆಚ್ಚಾಗಿದೆ ಎಂದು ಹಲವು ದೂರುಗಳು ಬಂದಿದ್ದವು ಎಂದು ಸರ್ಕಾರದ ಪರ ವಕೀಲರು ನ್ಯಾಯಾಲಯಕ್ಕೆ ಮಾಹಿತಿ ನೀಡಿದರು.

ದೆಹಲಿ ಸರ್ಕಾರಕ್ಕೆ ನ್ಯಾಯಾಲಯ ನೋಟಿಸ್

ಕೇಂದ್ರ ಮತ್ತು ದೆಹಲಿ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ದೆಹಲಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ

10,12ನೇ ತರಗತಿ ವಿದ್ಯಾರ್ಥಿಗಳಿಗೆ ಲಸಿಕೆ: ಪಿಐಎಲ್ ಸಲ್ಲಿಕೆ

ನವದೆಹಲಿ (ಪಿಟಿಐ): ಪರೀಕ್ಷೆಗೆ ಹಾಜರಾಗಲಿರುವ 10 ಮತ್ತು 12ನೇ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ ಲಸಿಕೆ ಹಾಕಿಸುವಂತೆ ಕೇಂದ್ರ ಮತ್ತು ದೆಹಲಿ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ದೆಹಲಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಅರೋಗ್ಯ ಮತ್ತು ಶಿಕ್ಷಣ ಸಚಿವಾಲಯ ಹಾಗೂ ದೆಹಲಿ ಸರ್ಕಾರಕ್ಕೆ ನ್ಯಾಯಾಲಯ ನೋಟಿಸ್ ಜಾರಿಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಮತ್ತು ನ್ಯಾಯಮೂರ್ತಿ ಜಸ್ಮೀತ್ ಸಿಂಗ್ ಅವರನ್ನೊಳಗೊಂಡ ಪೀಠವು ನೋಟಿಸ್ ಜಾರಿಗೊಳಿಸಿದೆ.

ಕೋವಿಡ್–19 ಲಸಿಕೆಯನ್ನು 18 ವರ್ಷದ ಕೆಳಗಿನವರಿಗೂ ನೀಡಬಹುದೇ ಎಂದು ಪೀಠವು ಪ್ರಶ್ನಿಸಿದೆ.

ವಕೀಲರಾದ ಜ್ಯೋತಿ ಅಗರವಾಲ್, ಸಂಜೀವಾಣಿ ಅಗರವಾಲ್ ಮತ್ತು ಪ್ರದೀಪ್ ಶೇಖಾವತ್ ಅವರು ಈ ಅರ್ಜಿ ಸಲ್ಲಿಸಿದ್ದರು. '10ನೇ ತರಗತಿಯ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ ಮತ್ತು 12ನೇ ತರಗತಿ ಪರೀಕ್ಷೆಗಳನ್ನು ಮುಂದೂಡಲಾಗಿದೆ' ಎಂದು ದೆಹಲಿ ಸರ್ಕಾರದ ಪರ ವಕೀಲ ಸಂತೋಷ್ ಕೆ. ತ್ರಿಪಾಠಿ ಮಾಹಿತಿ ನೀಡಿದರು.

ಹಾಂಗ್‌ಕಾಂಗ್‌ನಿಂದ ಆಮ್ಲಜನಕ ಕಾನ್ಸಂಟ್ರೇಟರ್

ನವದೆಹಲಿ (ಪಿಟಿಐ): ಹಾಂಗ್‌ಕಾಂಗ್‌ನಿಂದ ದೆಹಲಿಗೆ ಶುಕ್ರವಾರ 2,900 ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ಎ340 ವಿಮಾನದ ಮೂಲಕ ಶುಕ್ರವಾರ ಇಲ್ಲಿಗೆ ತರಲಾಗಿದೆ ಎಂದು ಸ್ಪೈಸ್ ಜೆಟ್ ತಿಳಿಸಿದೆ.

'ಸ್ಪೈಸ್ ಜೆಟ್ ಅಮೆರಿಕ, ಹಾಂಗ್ ಕಾಂಗ್, ಸಿಂಗಾಪುರ ಮತ್ತು ಚೀನಾದಿಂದ ಇದುವರೆಗೆ 13,950ಕ್ಕೂ ಹೆಚ್ಚಿನ ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ವಿಮಾನಗಳ ಮೂಲಕ ತಲುಪಿಸಿದೆ' ಎಂದು ಸಂಸ್ಥೆ ತಿಳಿಸಿದೆ.

ರಾಜ್ಯಕ್ಕೆ ಆಮ್ಲಜನಕ ಹೆಚ್ಚಳ ತಡೆ: ಕೇಂದ್ರದ ಯತ್ನಕ್ಕೆ ಸೋಲು

ಒಂದನೇ ಪುಟದಿಂದ

ಆಮ್ಲಜನಕ ಪೂರೈಕೆ ವಿಚಾರದಲ್ಲಿ ಹೈಕೋರ್ಟ್‌ಗಳು ಕೇಂದ್ರಕ್ಕೆ ನಿರ್ದೇಶನ ನೀಡಲು ಆರಂಭಿಸಿದರೆ, ಅವುಗಳನ್ನು ಕಾರ್ಯರೂಪಕ್ಕೆ ತರಲಾಗದು ಮತ್ತು ಕೊನೆಗೆ ಅದು ಅರಾಜಕ ಸ್ಥಿತಿಗೆ ಕಾರಣವಾಗಬಹುದು ಎಂದು ಕೇಂದ್ರದ ಪರವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. ಆದರೆ ಪೀಠ, ಈ ವಾದಕ್ಕೆ ಮನ್ನಣೆ ಕೊಡಲಿಲ್ಲ.

'ಈ ನಿರ್ದೇಶನ ನೀಡಲು ಹೈಕೋರ್ಟ್ ಸಮರ್ಪಕ ಕಾರಣಗಳನ್ನು ಕೊಟ್ಟಿದೆ. ಈ ನಿರ್ದೇಶನವು ತಾತ್ಕಾಲಿಕ ಎಂಬುದು ಸ್ಪಷ್ಟ. ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರವು ಜತೆಯಾಗಿ ಸಮಸ್ಯೆಯನ್ನು ಪರಿಹರಿಸುವವರೆಗೆ ಮಾತ್ರ ಈ ಲೆಕ್ಕಾಚಾರ (ದಿನಕ್ಕೆ 1,200 ಟನ್ ಆಮ್ಲಜನಕ ಪೂರೈಕೆ) ಜಾರಿಯಲ್ಲಿರುತ್ತದೆ' ಎಂದು ಪೀಠವು ಲಿಖಿತ ಆದೇಶದಲ್ಲಿ ಹೇಳಿದೆ.

> **ಆಮ್ಲಜನಕದ ಅಗತ್ಯದ ಪ್ರಮಾಣ ಅಂದಾಜಿಸಲು ಸಮಿತಿ ಮಾಡುವುದಾಗಿ ಹೇಳಲಾಗಿದೆ. ಆದರೆ, ಸಮಿತಿ ರಚನೆಯ ತನಕ ಕಣ್ಣು ಮುಚ್ಚಿ ಕೂತಿರಿ ಎಂದು ಹೈಕೋರ್ಟ್‌ಗೆ ಹೇಳಲಾಗದು**
>
> **ಸುಪ್ರೀಂ ಕೋರ್ಟ್**

ಏಪ್ರಿಲ್ 30ರಂದು ರಾಜ್ಯದ ಅಗತ್ಯ 802 ಟನ್ ಮಾತ್ರವೇ ಆಗಿತ್ತು. ಮೇ 1ರಂದು ಅದನ್ನು 856 ಟನ್‌ಗೆ ಮತ್ತು ಮೇ 5ರಂದು 965 ಟನ್‌ಗೆ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರವು ಬುಧವಾರ (ಮೇ 5) ಅಂದಾಜಿಸಿದಂತೆ ಆಮ್ಲಜನಕದ ಅಗತ್ಯವು 1162 ಟನ್ ಆಗಿತ್ತು. ಪ್ರಕರಣಗಳು 3.95 ಲಕ್ಷಕ್ಕೆ ಏರಿದರೆ ದಿನಕ್ಕೆ 1,800 ಟನ್ ಆಮ್ಲಜನಕ ಬೇಕಾಗಬಹುದು ಎಂದೂ ಸರ್ಕಾರ ಅಂದಾಜಿಸಿದೆ ಎಂಬುದರತ್ತ ಪೀಠ ಗಮನ ಸೆಳೆಯಿತು.

ಸರ್ಕಾರವು ಅಖಿಲ ಭಾರತ ಮಟ್ಟದ ಧೋರಣೆಯನ್ನು ಈ ವಿಚಾರದಲ್ಲಿ ಅನುಸರಿಸಬೇಕಾಗುತ್ತದೆ. ಕೇಂದ್ರ ಸರ್ಕಾರವು ಕರ್ನಾಟಕದ ಜತೆಗೆ ಸಭೆ ನಡೆಸಿ ಆಮ್ಲಜನಕ ಬೇಡಿಕೆಯ ಸಮಸ್ಯೆ ಪರಿಹರಿಲು ಸಿದ್ಧ ಎಂದು ಮೆಹ್ತಾ ಹೇಳಿದರು.

'ಜನರಿಗೆ ತೀವ್ರ ಅನ್ಯಾಯ ಆಗುವುದು ನಮಗೆ ಬೇಕಿಲ್ಲ. ನ್ಯಾಯಮೂರ್ತಿಗಳು ಕೂಡ ಮನುಷ್ಯರೇ. ಕಲಬುರ್ಗಿ ಮತ್ತು ಇತರೆಡೆಗಳಲ್ಲಿನ ಸಾವನ್ನು ಅವರು ನೋಡಿರಬೇಕು. ಮಾನವೀಯ ಆಯಾಮವನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ' ಎಂದು ಪೀಠವು ಹೇಳಿದೆ.

ಕರ್ನಾಟಕ ಹೈಕೋರ್ಟ್ ರೀತಿಯಲ್ಲಿಯೇ ಇತರ ಹೈಕೋರ್ಟ್‌ಗಳು ಆದೇಶ ನೀಡಿದರೆ ಕೋವಿಡ್–19 ಪಿಡುಗಿನ ವಿರುದ್ಧ ಹೋರಾಡುವ ವ್ಯವಸ್ಥೆಯೇ ಕುಸಿದು ಬೀಳುತ್ತದೆ ಎಂದು ಕೇಂದ್ರದ ಅರ್ಜಿಯಲ್ಲಿ ಹೇಳಲಾಗಿತ್ತು.

ಹೈಕೋರ್ಟ್ ಆದೇಶವು ಸಂಪನ್ಮೂಲದ ಕೆಟ್ಟ ನಿರ್ವಹಣೆಗೆ ಕಾರಣವಾಗಿ, ಈಗಾಗಲೇ ಅತಿಯಾದ ಹೊರೆ ಹೊತ್ತಿರುವ ವ್ಯವಸ್ಥೆಯನ್ನು ಅರಾಜಕಗೊಳಿಸುತ್ತದೆ ಎಂದೂ ಮೆಹ್ತಾ ವಾದಿಸಿದ್ದಾರೆ.

ಕೋವಿಡ್ ಸೋಂಕು ತೀವ್ರವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಊರುಗಳಿಗೆ ತೆರಳುತ್ತಿರುವ ವಲಸಿಗರು ಜಲಂಧರ್ ರೈಲುನಿಲ್ದಾಣದಲ್ಲಿ ಕಂಡು ಬಂದಿದ್ದು ಹೀಗೆ –ಚಿತ್ರ: ಪಿಟಿಐ

ಸಿಬ್ಬಂದಿ ಹಾಜರಾತಿ ನಿರ್ವಹಣೆ: ಇಲಾಖೆ ಮುಖ್ಯಸ್ಥರಿಗೆ ಸೂಚನೆ



ನವದೆಹಲಿ (ಪಿಟಿಐ): ಕೋವಿಡ್ ಹಿನ್ನೆಲೆಯಲ್ಲಿ ಎಲ್ಲ ಸಿಬ್ಬಂದಿಯ ಹಾಜರಾತಿಯನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಬೇಕು ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯವು ವಿವಿಧ ಇಲಾಖೆಗಳ ಕಾರ್ಯದರ್ಶಿಗಳಿಗೆ ಸೂಚಿಸಿದೆ.

ಗರ್ಭಿಣಿಯರು ಮತ್ತು ಅಂಗವಿಕಲ ಸಿಬ್ಬಂದಿಗೆ ಕಚೇರಿಗೆ ಹಾಜರಾಗುವುದರಿಂದ ವಿನಾಯಿತಿ ನೀಡಬೇಕು. ಆದರೆ, ಅವರು ಮನೆಯಿಂದಲೇ ಕಾರ್ಯನಿರ್ವಹಿಸಬಹುದು ಎಂದು ತಿಳಿಸಿದ್ದಾರೆ.

ಸಚಿವಾಲಯಗಳು, ಎಲ್ಲ ಇಲಾಖೆಗಳ ಮುಖ್ಯಸ್ಥರು ತಮ್ಮ ಕೆಳಹಂತದ ಎಲ್ಲ ಸಿಬ್ಬಂದಿ ಹಾಜರಾತಿಯನ್ನು ನಿರ್ವಹಣೆ ಮಾಡಬೇಕು. ಕಚೇರಿಗಳಲ್ಲಿ ದಟ್ಟಣೆ ಆಗದಂತೆ ವಿಭಾಗದ ಮುಖ್ಯಸ್ಥರು ಸೂಚಿಸಿದ ಸಮಯದಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿ ಬದ್ಧರಾಗಬೇಕು. ಕಂಟೇನ್‌ಮೆಂಟ್ ವಲಯದಲ್ಲಿ ಇರುವ ಕಚೇರಿಗಳ ಸಿಬ್ಬಂದಿ ಪರಿಸ್ಥಿತಿ ತಹಬದಿಗೆ ಬರುವವರೆಗೂ ಕಚೇರಿಗೂ ಬರುವುದಕ್ಕೆ ವಿನಾಯಿತಿ ಇದೆ ಎಂದು ತಿಳಿಸಲಾಗಿದೆ.

ಒಂದೇ ದಿನ 592 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮೃತರ ಸಂಖ್ಯೆ ದಿಢೀರ್ ಏರಿಕೆ ಕಂಡಿದೆ. 24 ಗಂಟೆಗಳಲ್ಲಿ ಒಟ್ಟು 592 ಜನ ಸಾವಿಗೀಡಾಗಿದ್ದಾರೆ. ಈ ಪೈಕಿ ಬೆಂಗಳೂರಿನಲ್ಲೇ ಅಧಿಕ (346) ಪ್ರಕರಣಗಳು ದಾಖಲಾಗಿವೆ.

ಶುಕ್ರವಾರ 48,781 ಮಂದಿಗೆ ಸೋಂಕು ತಗುಲಿರುವುದು ಖಚಿತಪಟ್ಟಿದೆ. ಹೀಗಾಗಿ ಸೋಂಕಿತರ ಒಟ್ಟು ಸಂಖ್ಯೆ 18 ಲಕ್ಷದ (18.38) ಗಡಿ ದಾಟಿದೆ. ಸಕ್ರಿಯ ಪ್ರಕರಣಗಳ (5.36 ಲಕ್ಷ) ಸಂಖ್ಯೆಯೂ ಏರಿದೆ. ಸೋಂಕಿತರ ಪೈಕಿ ಒಂದೇ ದಿನ 28,623 ಮಂದಿ ಗುಣಮುಖರಾಗಿರುವುದು ಸ್ವಲ್ಪ ಸಮಾಧಾನ ತರಿಸಿದೆ.

ರಾಜ್ಯದಲ್ಲಿ ಶುಕ್ರವಾರ ಒಟ್ಟು 1.58 ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಸೋಂಕು ದೃಢ ಪ್ರಮಾಣ ಶೇ 30.69ಕ್ಕೆ ಹೆಚ್ಚಿದೆ. ಮರಣ ಪ್ರಮಾಣ ದರ ಶೇ 1.21ಕ್ಕೆ ಏರಿದೆ.

ಬೆಂಗಳೂರಿನಲ್ಲಿ ಹೊಸದಾಗಿ 21,376 ಮಂದಿಗೆ ಸೋಂಕು ತಗುಲಿದೆ. ತುಮಕೂರಿನಲ್ಲೂ (3,040) ಹೆಚ್ಚು ಮಂದಿ ಸೋಂಕಿತರಾಗಿದ್ದಾರೆ. ಬಳ್ಳಾರಿ (1,284), ದಕ್ಷಿಣ ಕನ್ನಡ (1,633), ಹಾಸನ (2,422), ಕಲಬುರ್ಗಿ (1,722), ಮಂಡ್ಯ (1,110), ಮೈಸೂರು (2,246) ಜಿಲ್ಲೆಗಳಲ್ಲೂ ಅಧಿಕ ಪ್ರಕರಣಗಳು ವರದಿಯಾಗಿವೆ.

ಕೋವಿಡ್ ಪೀಡಿತರ ಪೈಕಿ ಬಳ್ಳಾರಿ (24), ಬೆಂಗಳೂರು ಗ್ರಾಮಾಂತರ (12), ಹಾಸನ (20), ಕಲಬುರ್ಗಿ (19), ಕೊಡಗು (10), ಮಂಡ್ಯ (11), ಮೈಸೂರು (22), ರಾಮನಗರ (10), ಶಿವಮೊಗ್ಗ (14), ತುಮಕೂರು (15), ಉತ್ತರ ಕನ್ನಡ (12) ಜಿಲ್ಲೆಗಳಲ್ಲಿ ಹೆಚ್ಚು ಜನ ಸಾವಿಗೀಡಾಗಿದ್ದಾರೆ. ಹೀಗಾಗಿ ಮೃತರ ಒಟ್ಟು ಸಂಖ್ಯೆ 17,804ಕ್ಕೆ ಏರಿಕೆ ಕಂಡಿದೆ. ಈವರೆಗೆ 12.84 ಲಕ್ಷ ಜನ ಚೇತರಿಸಿಕೊಂಡಿದ್ದಾರೆ.

ನಿಧನ ವಾರ್ತೆ

ಹಿರಿಯ ನಟ ಶಂಖನಾದ ಅರವಿಂದ್

ಬೆಂಗಳೂರು: ಶಂಖನಾದ, ಬೆಟ್ಟದ ಹೂವು ಖ್ಯಾತಿಯ ಹಿರಿಯ ನಟ, ನಿರ್ಮಾಪಕ ಶಂಖನಾದ ಅರವಿಂದ್ (70) ಅವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಕೋವಿಡ್ ದೃಢಪಟ್ಟಿದ್ದ ಅರವಿಂದ್ ಅವರನ್ನು 10 ದಿನಗಳ ಹಿಂದೆ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡ ಕಾರಣ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಗುರುವಾರ ರಾತ್ರಿ ಹೃದಯಾಘಾತದಿಂದ ಅವರು ನಿಧನರಾಗಿದ್ದಾರೆ.

'ಅಪರೂಪದ ಅತಿಥಿಗಳು' ಚಿತ್ರದ ಮುಖಾಂತರ ಕನ್ನಡ ಚಿತ್ರರಂಗಕ್ಕೆ ಪ್ರವೇಶಿಸಿದ ಅರವಿಂದ್ ಅವರು 'ಅಪರಿಚಿತ', 'ಅನುಭವ' ಚಿತ್ರದಲ್ಲಿ ನಟಿಸಿದ ಬಳಿಕ ಖ್ಯಾತಿ ಪಡೆದರು. ಖ್ಯಾತ ನಿರ್ದೇಶಕ ದಿವಂಗತ ಕಾಶಿನಾಥ್ ಅವರ ಜೊತೆಗೆ ಹಲವು ಚಿತ್ರಗಳಲ್ಲಿ ಪಾತ್ರಕ್ಕೆ ಬಣ್ಣಹಚ್ಚಿದ್ದರು. ಅವರಿಗೆ ಇಬ್ಬರು ಪುತ್ರಿಯರು ಹಾಗೂ ಒಬ್ಬ ಪುತ್ರ ಇದ್ದಾರೆ. ಖ್ಯಾತ ಸಂಗೀತ ನಿರ್ದೇಶಕಿ ಮಾನಸ ಹೊಳ್ಳ ಅವರು ಅರವಿಂದ್ ಅವರ ಹಿರಿಯ ಪುತ್ರಿ. ಇನ್ನಿಬ್ಬರು ಮಕ್ಕಳಾದ ಪ್ರಾರ್ಥನಾ ಹಾಗೂ ಅಭಿಷೇಕ್ ಅವರೂ ಕಲಾವಿದರಾಗಿದ್ದಾರೆ. ಸುಮಾರು ಮೂರು ತಿಂಗಳ ಹಿಂದೆ ಇವರ ಪತ್ನಿ ರಮಾ ಅರವಿಂದ್ ಅನಾರೋಗ್ಯದಿಂದ ಮೃತಪಟ್ಟಿದ್ದರು.

ಏಳು ರಾಷ್ಟ್ರಪ್ರಶಸ್ತಿ ಬಂದಿರುವ ಸಿನಿಮಾ ಸೇರಿ 200ಕ್ಕೂ ಅಧಿಕ ಚಲನಚಿತ್ರ ಮತ್ತು ಹಲವು ಧಾರಾವಾಹಿಗಳಲ್ಲಿ ಅರವಿಂದ್ ನಟಿಸಿದ್ದರು. ಇವರು ನಾಯಕನಾಗಿ ನಟಿಸಿದ ಶಂಖನಾದ ಚಿತ್ರ ರಾಷ್ಟ್ರಪ್ರಶಸ್ತಿಯನ್ನೂ ಬಾಚಿತ್ತು. 'ಸಿಕ್ಸ್ ಟು ಸಿಕ್ಸ್', 'ಗುಪ್‌ಚುಪ್' ಸಿನಿಮಾವನ್ನು ಇವರು ನಿರ್ಮಾಣ ಮಾಡಿದ್ದರು.

ಮುಂಬೈ: ಕೋವಿಡ್ ಎರಡನೇ ಅಲೆ ನಿಯಂತ್ರಣಕ್ಕೆ 'ವಾರ್ ರೂಂ' ಸಹಕಾರಿ

ಮುಂಬೈ (ಪಿಟಿಐ): ಮಹಾರಾಷ್ಟ್ರದ ರಾಜಧಾನಿ ಮುಂಬೈನಲ್ಲಿ ತೀವ್ರವಾಗಿ ಉಲ್ಬಣಗೊಂಡಿದ್ದ ಕೋವಿಡ್–19 ಅನ್ನು ನಿಯಂತ್ರಿಸಲು ಅಲ್ಲಿನ ಪಾಲಿಕೆಯ ವಾರ್ಡ್ ಮಟ್ಟದ 'ವಾರ್ ರೂಂ'ಗಳು, ರೋಗಿಗಳಿಗೆ ಹಾಸಿಗೆ ಮತ್ತು ಇತರ ವೈದ್ಯಕೀಯ ಸೌಲಭ್ಯ ದೊರಕಿಸಿಕೊಡಲು ನೆರವಾದ ಪಾಲಿಕೆ ಅಧಿಕಾರಿಗಳ ಮುನ್ನೆಚ್ಚರಿಕೆಯೇ ಕಾರಣ ಎನ್ನಲಾಗಿದೆ.

ದೇಶದ ಇತರ ರಾಜ್ಯಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮುಂಬೈನಲ್ಲಿ ಉಂಟಾಗಿದ್ದ ಕೋವಿಡ್ ಬಿಕ್ಕಟ್ಟನ್ನು ನಿರ್ವಹಿಸಲು 'ಮುಂಬೈ ಮಾದರಿ' ಸುಪ್ರೀಂ ಕೋರ್ಟ್‌ನ ಮೆಚ್ಚುಗೆಗೂ ಪಾತ್ರವಾಗಿದೆ.

ಮೇ 1ರಿಂದ ಮುಂಬೈನಲ್ಲಿ ಪ್ರತಿದಿನ 4 ಸಾವಿರಕ್ಕೂ ಕಡಿಮೆ ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ಇದಕ್ಕೂ ಮುನ್ನ ಅಂದರೆ ಏಪ್ರಿಲ್ ಮೊದಲ ವಾರದಲ್ಲಿ ಮುಂಬೈನಲ್ಲಿ ನಿತ್ಯವೂ 8,500 ಪ್ರಕರಣಗಳು ವರದಿಯಾಗುತ್ತಿದ್ದವು. ಏ. 4ರಂದು ಈ ಸಂಖ್ಯೆ 11,163ಕ್ಕೆ ಏರಿತ್ತು. ಆದರೆ ಒಂದೇ ತಿಂಗಳ ಅವಧಿಯಲ್ಲಿ ಅಂದರೆ ಮೇ 6ರ ಹೊತ್ತಿಗೆ ಕೋವಿಡ್ ಪ್ರಕರಣಗಳ ಸಂಖ್ಯೆ 3,056ಕ್ಕೆ ಇಳಿದಿದೆ!.

ದೇಶದ ಆರ್ಥಿಕ ಮೂಲಕ್ಕೆ ಬೆನ್ನೆಲುಬಾಗಿರುವ ಮುಂಬೈನಲ್ಲಿ ಆಕ್ಟೋಬರ್ ನಂತರ ಪ್ರತಿನಿತ್ಯವೂ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯೇ ಕಂಡು ಬಂದಿದೆ. ಅದರಲ್ಲೂ ಅ. 7ರಂದು ಒಂದೇ ದಿನ 2,848 ಪ್ರಕರಣಗಳು ವರದಿಯಾಗಿದ್ದವು.

ಆದರೆ, ಪ್ರಕರಣಗಳ ಸಂಖ್ಯೆಯಲ್ಲಿ ಎಷ್ಟೇ ಏರುಪೇರಾಗಿದ್ದರೂ ಅಲ್ಲಿನ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಾಸಿಗೆಗಳ ಕೊರತೆಯಾಗಲೀ, ಆಮ್ಲಜನಕ ಕೊರತೆಯಾಗಲೀ ಕಂಡು ಬಂದಿಲ್ಲ ಎನ್ನುತ್ತಾರೆ ಬೃಹನ್ಮುಂಬಯಿಯ ಪಾಲಿಕೆ ಅಧಿಕಾರಿಗಳು.

ಸಿನಿಮಾ ಕ್ಷೇತ್ರದ ಕಾರ್ಮಿಕರ ನೆರವಿಗೆ ಆದಿತ್ಯ ಚೋಪ್ರಾ

ಮುಂಬೈ (ಪಿಟಿಐ): ಕೋವಿಡ್ 19 ಎರಡನೇ ಅಲೆಯಿಂದ ಸಂಕಷ್ಟಕ್ಕೆ ಒಳಗಾಗಿರುವ ಚಲನಚಿತ್ರ ಕ್ಷೇತ್ರದ ದಿನಗೂಲಿ ಕಾರ್ಮಿಕರಿಗೆ ಆರ್ಥಿಕ ನೆರವು ನೀಡಲು ಬಾಲಿವುಡ್ ಸಿನಿಮಾ ನಿರ್ಮಾಪಕ ಆದಿತ್ಯ ಚೋಪ್ರಾ ಅವರು 'ಯಶ್ ಚೋಪ್ರಾ ಸಾಥಿ' ಎಂಬ ಯೋಜನೆ ಆರಂಭಿಸಿದ್ದಾರೆ.

'ಯಶ್ ಚೋಪ್ರಾ ಸಾಥಿ' ಕಾರ್ಯಕ್ರಮದ ಅಡಿಯಲ್ಲಿ ಯಶ್ ಚೋಪ್ರಾ ಫೌಂಡೇಷನ್, ಸಿನಿಮಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳಾ ನೌಕರರು ಮತ್ತು ಹಿರಿಯ ನಾಗರಿಕರಿಗೆ ತಲಾ ₹5ಸಾವಿರ ನಗದು ನೀಡಲಿದೆ. ಜತೆಗೆ, ಯೂತ್ ಫೀಡ್ ಇಂಡಿಯಾ ಎಂಬ ಸ್ವಯಂ ಸೇವಾ ಸಂಸ್ಥೆಯ ಪಾಲುದಾರಿಕೆಯೊಂದಿಗೆ ನಾಲ್ವರು ಸದಸ್ಯರಿರುವ ಕಾರ್ಮಿಕರ ಪ್ರತಿ ಕುಟುಂಬಕ್ಕೆ ತಿಂಗಳು ಪೂರ್ತಿ ಉಚಿತ ಪಡಿತರವನ್ನು ವಿತರಿಸಲಿದೆ.

ದಿ ಫೆಡರೇಷನ್ ಆಫ್ ವೆಸ್ಟರ್ನ್ ಇಂಡಿಯಾ ಸಿನಿ ಎಂಪ್ಲಾಯೀಸ್(ಎಫ್‌ಡಬ್ಲ್ಯುಐಸಿಇ) ಒಕ್ಕೂಟದಲ್ಲಿ ಸುಮಾರು 2.5 ಲಕ್ಷ ನೋಂದಾಯಿತ ನೌಕರರಿದ್ದಾರೆ.

ಈ ಸೇವೆಯ ಉಪಯೋಗ ಪಡೆದುಕೊಳ್ಳುವುದಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಿ, ಈ ಸೌಲಭ್ಯ ಪಡೆಯಬಹುದು ಎಂದು ಪ್ರೊಡಕ್ಷನ್ ಹೌಸ್ ಬಿಡುಗಡೆ ಮಾಡಿರುವ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಐವತ್ತು ವರ್ಷಗಳಿಂದ ಹಿಂದಿ ಚಲನಚಿತ್ರೋದ್ಯಮದ ಅವಿಭಾಜ್ಯ ಅಂಗವಾಗಿರುವ ಕಾರ್ಮಿಕರಿಗೆ ನಮ್ಮ ಪ್ರತಿಷ್ಠಾನದಿಂದ ಅಗತ್ಯ ಸೌಲಭ್ಯಗಳನ್ನು ನೀಡುತ್ತಿದ್ದೇವೆ' ಎಂದು ಯಶ್ ರಾಜ್ ಫಿಲ್ಮ್ ಹಿರಿಯ ಉಪಾಧ್ಯಕ್ಷ ಅಕ್ಷಯ್ ವಿಧಾನಿ ಹೇಳಿದ್ದಾರೆ.

ಪ್ರಜಾವಾಣಿ ಕನ್ನಡ ಧ್ವನಿ

ಪ್ರಜಾವಾಣಿ 'ಕನ್ನಡ ಧ್ವನಿ' ಪಾಡ್‌ಕಾಸ್ಟ್ ಚಾನೆಲ್‌ನ

ಪ್ರತಿ ಶನಿವಾರದ 'ಹರಟೆ ಕಟ್ಟೆ'

ಐಪಿಎಲ್ ಕ್ರಿಕೆಟ್ ಮುಂದೂಡಿಕೆ ಮತ್ತು ಬಯೋಬಬಲ್ ಸುತ್ತ

ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ

ವಿ.ಎನ್. ಕುಲಕರ್ಣಿ
ಮಾಜಿ ಅಂತರರಾಷ್ಟ್ರೀಯ ಕ್ರಿಕೆಟ್ ಅಂಪೈರ್, ಅಂಪೈರಿಂಗ್ ಕೋಚ್ ಮತ್ತು ಲೇಖಕರು

ಎಂ.ಎನ್. ವಿಶ್ವನಾಥ್
ಕ್ರೀಡಾ ಮನೋಚಿಕಿತ್ಸಕರು, ಮಾರ್ಗದರ್ಶಕರು

ಮಧ್ಯಾಹ್ನ 4 ಗಂಟೆಗೆ
ನೀವೂ ಆಲಿಸಿರಿ, ಸ್ನೇಹಿತರಿಗೂ ಕೇಳಿಸಿರಿ

https://www.prajavani.net/podcast

ಪ್ರಜಾವಾಣಿ ಸಂವಾದ

facebook LIVE

ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ

ರಾಜ್ಯದಲ್ಲಿ ಒಬಿಸಿ ಮೀಸಲಾತಿ ಶೇ.50ಕ್ಕಿಂತ ಹೆಚ್ಚಿಸುವ ಅಗತ್ಯ ಇದೆಯೆ?

ಸಂವಾದದಲ್ಲಿ ಪಾಲ್ಗೊಳ್ಳುವವರು



ಬಿ.ಕೆ.ಹರಿಪ್ರಸಾದ್
ವಿಧಾನ ಪರಿಷತ್ ಸದಸ್ಯ ಕಾಂಗ್ರೆಸ್

ಎಚ್.ಕಾಂತರಾಜು
ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ



ಬಿ.ಆರ್.ಪಾಟೀಲ್
ಮಾಜಿ ಶಾಸಕ, ಆಳಂದ

ಸೋಮವಾರ, 10- 05-2021 ಸಮಯ: ಮಧ್ಯಾಹ್ನ 12ರಿಂದ 1

fb.com/prajavani.net

ರಾಜ್ಯದಲ್ಲಿ ಬೋಯಿಂಗ್‌ನಿಂದ ಆಸ್ಪತ್ರೆ

ನವದೆಹಲಿ: ಬೋಯಿಂಗ್ ಇಂಡಿಯಾ ಕಂಪನಿಯು ಬೆಂಗಳೂರಿನ ಯಲಹಂಕದಲ್ಲಿ ಆಮ್ಲಜನಕ ಪೂರೈಕೆ ಇರುವ 200 ಹಾಸಿಗೆಯ ಆಸ್ಪತ್ರೆ ಮತ್ತು ಕಲಬುರ್ಗಿಯಲ್ಲಿ 250 ಹಾಸಿಗೆಗಳ ಆಸ್ಪತ್ರೆಯನ್ನು ಸ್ಥಾಪಿಸಲು ಮುಂದೆ ಬಂದಿದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಅಡಿ ಈ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತಿದೆ. ಇದಕ್ಕೆ ನೀವು ಬೆಂಬಲ ನೀಡುವುದನ್ನು ನಿರೀಕ್ಷಿಸಿದ್ದೇವೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಪತ್ರ ಬರೆದಿದ್ದಾರೆ.

ಈ ಪತ್ರಕ್ಕೆ ನಿರ್ಮಲಾ ಸೀತಾರಮನ್ ಅವರು ಟ್ವಿಟರ್‌ನಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಬೋಯಿಂಗ್ ಇಂಡಿಯಾ ಕಂಪನಿಗೆ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಸಂಬಂಧಿತ ನೋಡಲ್ ಅಧಿಕಾರಿಗಳು ಆಸ್ಪತ್ರೆ ಸ್ಥಾಪನೆ ಪ್ರಕ್ರಿಯೆಗೆ ಚುರುಕು ನೀಡಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಸುಶಾಂತ್ ಸಿಂಗ್ ಪ್ರಕರಣ: ಗೋವಾದಲ್ಲಿ ಡ್ರಗ್ಸ್ ಪೆಡ್ಲರ್ ಬಂಧನ

ಮುಂಬೈ (ಪಿಟಿಐ): ಬಾಲಿವುಡ್ ನಟ ಸುಶಾಂತ್ ಸಿಂಗ್ ಸಾವಿಗೆ ತಳಕು ಹಾಕಿಕೊಂಡಿರುವ ಡ್ರಗ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾದಕ ವಸ್ತು ನಿಯಂತ್ರಣ ಸಂಸ್ಥೆ(ಎನ್‌ಸಿಬಿ) ಅಧಿಕಾರಿಗಳು ಗೋವಾದಲ್ಲಿ ಡ್ರಗ್ಸ್ ಪೆಡ್ಲರ್ ಹೇಮಾಲ್ ಷಾ ಎಂಬುವವನನ್ನು ಬಂಧಿಸಿದ್ದಾರೆ.

'ಸುಶಾಂತ್ ಅವರ ಸಾವಿಗೆ ಸಂಬಂಧಿಸಿದ ಡ್ರಗ್ಸ್ ಪ್ರಕರಣದ ತನಿಖೆ ನಡೆಸುವ ವೇಳೆ ಹೇಮಾಲ್ ಷಾ ಹೆಸರು ಕೇಳಿ ಬಂದಿತ್ತು' ಎಂದು ಅವರು ಹೇಳಿದರು.

ಖಚಿತ ಮಾಹಿತಿ ಮೇರೆಗೆ ಬಲೆ ಬೀಸಿದ ಅಧಿಕಾರಿಗಳು ಗೋವಾದಲ್ಲಿ ಷಾನನ್ನು ಬಂಧಿಸಿದರು. ಬಂಧಿತ ಷಾನನ್ನು ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದರು.

ಕಳೆದ ವರ್ಷ ಮುಂಬೈನಲ್ಲಿ ನಟ ಸುಶಾಂತ್ ಸಿಂಗ್ ಸಾವಿನ ನಂತರ, ಮನರಂಜನಾ ಕ್ಷೇತ್ರದಲ್ಲಿ ಮಾದಕ ವಸ್ತುಗಳ ಬಳಕೆ ಮಾಡುತ್ತಿರುವ ಬಗ್ಗೆ ಮಾಹಿತಿ ಲಭ್ಯವಾದ ನಂತರ ಎನ್‌ಸಿಬಿ ತನಿಖೆ ಆರಂಭಿಸಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

Nelamangala

FARMLAND FOR Sale 5/10 Guntas Near Nelamangala. Suitable for Dairy Farming and Farm House Contact 9448119275/ 7829134000

Sites

Hesaraghatta

CNR DEVELOPERS and Builders BMRDA Sites Available.Contact 9448119275 / 7829134000

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE JOB NOTICE NAME CHANGE ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassifieds@deccanherald.co.in

ವ್ಯಾಪಾರ

Business to Business

Hotel & Restaurant

BUSINESS PARTNER Required, 4 Lakhs Investment, Daily Attractive Income (Nonveg Hotel). Contact: 8892501007/9606701007

ಭವಿಷ್ಯ

Astrology

ಸ್ತ್ರೀ ವಶೀ ಸ್ತ್ರೀ ವಶೀಕರಣ, ಪುರುಷ ವಶೀಕರಣ, ಮಾಟ ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11 ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ||.ವಿವೇಕಾನಂದಜೋಶಿ. 9008968867

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸ್ಟಾಲಿನ್ ಅಧಿಕಾರ ಸ್ವೀಕಾರ: ಸಂಪುಟ ಅಸ್ತಿತ್ವಕ್ಕೆ • ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ

₹2,000 ಕೋವಿಡ್ ಪ್ಯಾಕೇಜ್

ಚೆನ್ನೈ (ಪಿಟಿಐ): ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಡಿಎಂಕೆ ಮುಖ್ಯಸ್ಥ ಎಂ.ಕೆ.ಸ್ಟಾಲಿನ್ ಅವರು ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು. ಕೋವಿಡ್ ನಿಯಮಗಳಿಗೆ ಬದ್ಧವಾಗಿ ನಡೆದ ಕಾರ್ಯಕ್ರಮದಲ್ಲಿ, 33 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಇಲ್ಲಿನ ರಾಜಭವನದಲ್ಲಿ ಸರಳವಾಗಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಬನ್ವರಿಲಾಲ್ ಪುರೋಹಿತ್ ಅವರು ನೂತನ ಮುಖ್ಯಮಂತ್ರಿ ಮತ್ತು ನೂತನ ಸಚಿವರಿಗೆ ಪ್ರಮಾಣವಚನ ಬೋಧಿಸಿದರು. 33 ಶಾಸಕರಲ್ಲಿ 15 ಮಂದಿ ಇದೇ ಮೊದಲ ಬಾರಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಉಳಿದಂತೆ ಸ್ಟಾಲಿನ್ ಸಂಪುಟಕ್ಕೆ ಸೇರ್ಪಡೆಯಾದ 18 ಶಾಸಕರಿಗೆ ಈ ಹಿಂದೆ ಸಚಿವ ಸ್ಥಾನ ನಿಭಾಯಿಸಿದ ಅನುಭವ ಇದೆ.

ಸ್ಟಾಲಿನ್ ಅವರೂ ಸೇರಿ 34 ಮಂದಿ ಇರುವ ಸಂಪುಟದಲ್ಲಿ ಮಹಿಳೆಯರ ಸಂಖ್ಯೆ ಎರಡು ಮಾತ್ರ. ಪಿ.ಗೀತಾ ಜೀವನ್ ಅವರಿಗೆ ಸಮಾಜ ಕಲ್ಯಾಣ ಮತ್ತು ಮಹಿಳಾ ಸಬಲೀಕರಣ ಇಲಾಖೆ ಮತ್ತು ಎನ್.ಕಾಯಲ್‌ವಿಳಿ ಸೆಲ್ವರಾಜ್ ಅವರಿಗೆ ಆದಿ ದ್ರಾವಿಡ ಕಲ್ಯಾಣ ಇಲಾಖೆಯ ಹೊಣೆಗಾರಿಕೆ ನೀಡಲಾಗಿದೆ. ಇವರಲ್ಲಿ ಗೀತಾ ಅವರು ಈ ಹಿಂದಿನ ಡಿಎಂಕೆ ಸರ್ಕಾರದಲ್ಲಿ ಸಚಿವೆಯಾಗಿದ್ದರು. ಕಾಯಲ್‌ವಿಳಿ ಸೆಲ್ವರಾಜ್ ಅವರು ಇದೇ ಮೊದಲ ಬಾರಿ ಸಂಪುಟ ಪ್ರವೇಶಿಸಿದ್ದಾರೆ.

ಸ್ಟಾಲಿನ್ ಅವರು ಕೆಲವು ಪ್ರಮುಖ ಖಾತೆಗಳ ಹೆಸರುಗಳನ್ನು ಬದಲಿಸಿದ್ದಾರೆ. ಒಂದು ಹೊಸ ಇಲಾಖೆಯನ್ನು ರಚಿಸಿದ್ದಾರೆ. ಕೃಷಿ ಇಲಾಖೆಯನ್ನು, 'ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ' ಎಂದು ಮರುನಾಮಕರಣ ಮಾಡಲಾಗಿದೆ. ಪರಿಸರ ಇಲಾಖೆಯನ್ನು, 'ಪರಿಸರ ಮತ್ತು ಹವಾಮಾನ ವೈಪರೀತ್ಯ ಇಲಾಖೆ' ಎಂದು ಮರುನಾಕರಣ ಮಾಡಲಾಗಿದೆ. ಅನಿವಾಸಿ ತಮಿಳರ ಕಲ್ಯಾಣ ಇಲಾಖೆಯನ್ನು ಹೊಸದಾಗಿ ರಚಿಸಲಾಗಿದೆ. ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಿ.ಕೆ.ಎಸ್.ಮಸ್ತಾನ್ ಅವರು ಅನಿವಾಸಿ ತಮಿಳರ ಕಲ್ಯಾಣ ಇಲಾಖೆಯ ಹೊಣೆಯನ್ನೂ ಹೊತ್ತಿದ್ದಾರೆ.

₹2,000 ಕೋವಿಡ್ ಪ್ಯಾಕೇಜ್: ಉಚಿತ ಅಕ್ಕಿ ಪಡೆಯುವ ಅರ್ಹತೆ ಇರುವ ರಾಜ್ಯದ ಎಲ್ಲಾ ಪಡಿತರ ಚೀಟಿದಾರರಿಗೆ ₹2,000 ನಗದು ಕೋವಿಡ್ ಪ್ಯಾಕೇಜ್ ಅನ್ನು ಮುಖ್ಯಮಂತ್ರಿ ಸ್ಟಾಲಿನ್ ಘೋಷಿಸಿದ್ದಾರೆ.

'ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ₹4,000 ನಗದು ಕೋವಿಡ್ ಪ್ಯಾಕೇಜ್ ನೀಡುವುದಾಗಿ ಘೋಷಿಸಿದ್ದೆವು. ಅದರಲ್ಲಿ ಮೊದಲ ಕಂತಿನ ಭಾಗವಾಗಿ ₹2,000ವನ್ನು ಮೇ ತಿಂಗಳ ಒಳಗೇ ನೀಡಲಾಗುತ್ತದೆ. 2.07 ಕೋಟಿ ಪಡಿತರ ಚೀಟಿದಾರರು ಈ ಪ್ಯಾಕೇಜ್ ಪಡೆಯಲಿದ್ದಾರೆ. ಇದಕ್ಕಾಗಿ ₹4,153 ಕೋಟಿ ವೆಚ್ಚ ಮಾಡಲಾಗುತ್ತದೆ' ಎಂದು ಸ್ಟಾಲಿನ್ ತಮ್ಮ ಆದೇಶದಲ್ಲಿ ವಿವರಿಸಿದ್ದಾರೆ.

ಪ್ರಣಾಳಿಕೆಯಲ್ಲಿ ಘೋಷಿಸಿದ್ದಂತೆ ರಾಜ್ಯ ಹಾಲು ಉತ್ಪಾದಕರ ಸಹಕಾರ ಮಂಡಳಿಯ ಹಾಲಿನ ದರವನ್ನು, ಪ್ರತಿ ಲೀಟರ್‌ಗೆ ₹3ರಂತೆ ಕಡಿಮೆ ಮಾಡಿದ್ದಾರೆ. ರಾಜ್ಯದ ಎಲ್ಲೆಡೆ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಸಂಚಾರವನ್ನು ಘೋಷಿಸಿದ್ದಾರೆ. ಇದು ನಗರ ಸಂಚಾರ ಬಸ್‌ಗಳಿಗೆ ಮಾತ್ರ ಅನ್ವಯವಾಗಲಿದ್ದು, ಶನಿವಾರದಿಂದಲೇ ಜಾರಿಯಾಗಲಿದೆ.

ಅಧಿಕಾರಕ್ಕೆ ಬಂದ 100 ದಿನದಲ್ಲಿ ಎಲ್ಲರ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಘೋಷಿಸಲಾಗಿತ್ತು. ಇದಕ್ಕಾಗಿ, 'ನಿಮ್ಮ ಕ್ಷೇತ್ರದಲ್ಲಿ ಮುಖ್ಯಮಂತ್ರಿ' ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದನ್ನು ಜಾರಿಗೆ ತರುವ ಉದ್ದೇಶದಿಂದ ಐಎಎಸ್ ಅಧಿಕಾರಿ ನೇತೃತ್ವದ ಪ್ರತ್ಯೇಕ ವಿಭಾಗವೊಂದನ್ನು ರಚಿಸಲು ಸರ್ಕಾರವು ಅನುಮತಿ ನೀಡಿದೆ. ಈ ವಿಭಾಗದ ಹೊಣೆಯನ್ನು ಕರ್ನಾಟಕ ಮೂಲಕ ಐಎಸ್ ಅಧಿಕಾರಿ ಶಿಲ್ಪಾ ಪ್ರಭಾಕರ್ ಅವರಿಗೆ ವಹಿಸಲಾಗಿದೆ.

ನೂತನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರಿಗೆ ರಾಜ್ಯಪಾಲ ಬನ್ವರಿಲಾಲ್ ಪುರೋಹಿತ್ ಅವರು ಹೂಗುಚ್ಛ ನೀಡಿದರು –ಪಿಟಿಐ ಚಿತ್ರ

ರಂಗಸ್ವಾಮಿ ಅಧಿಕಾರ ಸ್ವೀಕಾರ

ಪುದುಚೇರಿ (ಪಿಟಿಐ): ಪುದುಚೇರಿ ಕೇಂದ್ರಾಡಳಿತ ಪ್ರದೇಶದ ನೂತನ ಮುಖ್ಯಮಂತ್ರಿಯಾಗಿ ಎನ್.ಆರ್. ಕಾಂಗ್ರೆಸ್ ಮುಖ್ಯಸ್ಥ ಎನ್.ರಂಗಸ್ವಾಮಿ ಅವರು ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು. ಎನ್.ಆರ್. ಕಾಂಗ್ರೆಸ್ ಮತ್ತು ಬಿಜೆಪಿ ಸಮ್ಮಿಶ್ರ ಸರ್ಕಾರದ ಸಂಪುಟದ ಸದಸ್ಯರನ್ನು ಒಂದೆರಡು ದಿನಗಳಲ್ಲಿ ಆಯ್ಕೆ ಮಾಡಲಾಗುತ್ತದೆ.

ಸಮ್ಮಿಶ್ರ ಸರ್ಕಾರದಲ್ಲಿ ಎನ್.ಆರ್. ಕಾಂಗ್ರೆಸ್‌ನ ಮೂವರು ಮತ್ತು ಬಿಜೆಪಿಯ ಮೂವರು ಸಚಿವರು ಇರಲಿದ್ದಾರೆ. ಉಪಮುಖ್ಯಮಂತ್ರಿ ಹುದ್ದೆಯನ್ನು ಬಿಜೆಪಿಗೆ ಬಿಟ್ಟುಕೊಡಲಾಗುತ್ತದೆ ಎಂದು ಕೇಂದ್ರ ಸಚಿವ ಕಿಶನ್ ರೆಡ್ಡಿ ಹೇಳಿದ್ದಾರೆ.

ಗಾಂಧಿ, ನೆಹರೂ ಮತ್ತು ಸ್ಟಾಲಿನ್

ತಮಿಳುನಾಡಿನ ನೂತನ ವಿಧಾನಸಭೆಯಲ್ಲಿ ಇಬ್ಬರು ಗಾಂಧಿಗಳಿದ್ದಾರೆ. ಒಬ್ಬ ನೆಹರೂ ಇದ್ದಾರೆ. ಒಬ್ಬ ಸ್ಟಾಲಿನ್ ಸಹ ಇದ್ದಾರೆ. ಇವರಲ್ಲಿ ಒಬ್ಬ ಗಾಂಧಿಯನ್ನು ಹೊರತುಪಡಿಸಿ ಉಳಿದವರೆಲ್ಲರೂ ಸಂಪುಟದ ಸದಸ್ಯರಾಗಿದ್ದಾರೆ.

ರಾಜಕೀಯ ಸಿದ್ಧಾಂತ, ಸಾಮಾಜಿಕ ಚಳವಳಿಗಳ ನೇತಾರರ ಕಡೆಗಿನ ತಮಿಳರ ಒಲವು, ಅವರ ಹೆಸರಿನಲ್ಲೂ ಪ್ರತಿಬಿಂಬಿಸುತ್ತದೆ. ಇದು ಬಹಳ ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯ. ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ, ತಮಿಳುನಾಡಿನಲ್ಲಿ 'ಬೋಸ್' ಎಂಬ ಹೆಸರು ಜನಪ್ರಿಯವಾಗಿತ್ತು. ನೇತಾಜಿ ಸುಭಾಷ್ ಚಂದ್ರ ಬೋಸ್ ಸ್ಮರಣೆಗಾಗಿ ಸಾವಿರಾರು ಜನರು ತಮ್ಮ ಮಕ್ಕಳಿಗೆ ಬೋಸ್ ಎಂದು ಹೆಸರಿಟ್ಟಿದ್ದರು. ಇದೇ ರೀತಿ ತಮಿಳರು ತಮ್ಮ ಮಕ್ಕಳಿಗೆ ಗಾಂಧಿ, ನೆಹರೂ ಮತ್ತು ಜವಾಹರ್ ಎಂದೂ ಹೆಸರಿಟ್ಟ ಸಾವಿರಾರು ಉದಾಹರಣೆಗಳಿವೆ.

ತಮ್ಮ ಮಗನಿಗೆ ಸ್ಟಾಲಿನ್ ಎಂದು ಹೆಸರು ಇರಿಸಲು ಕಮ್ಯುನಿಸ್ಟ್ ಸಿದ್ಧಾಂತದ ಬಗೆಗಿನ ತಮ್ಮ ಒಲವೇ ಕಾರಣ ಎಂದು ಡಿಎಂಕೆಯ ಹಿಂದಿನ ಮುಖ್ಯಸ್ಥ ಎಂ.ಕರುಣಾನಿಧಿ ಅವರು ಹೇಳಿದ್ದರು. ಈಗಿನ ಮುಖ್ಯಮಂತ್ರಿ ಸ್ಟಾಲಿನ್ ಜನಿಸಿದ್ದು 1953ರ ಮಾರ್ಚ್ 1ರಂದು. ಯುಎಸ್‌ಎಸ್‌ಆರ್ ಅಧ್ಯಕ್ಷ ಜೋಸೆಫ್ ಸ್ಟಾಲಿನ್ ಅವರು 1953ರ ಮಾರ್ಚ್ 5ರಂದು ನಿಧನರಾಗಿದ್ದರು. ಹೀಗಾಗಿ ತಮ್ಮ ಮಗನಿಗೆ ಸ್ಟಾಲಿನ್ ಎಂದು, ಕರುಣಾನಿಧಿ ಅವರು ನಾಮಕರಣ ಮಾಡಿದ್ದರು.

ಡಿಎಂಕೆ ಶಾಸಕರಾದ ಆರ್.ಗಾಂಧಿ ಅವರು ಈ ಸಂಪುಟದಲ್ಲಿ ಕೈಮಗ್ಗ ಮತ್ತು ಜವಳಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಮಹಾತ್ಮ ಗಾಂಧಿ ಅವರ ಸ್ಮರಣೆಗಾಗಿಯೇ ಅವರಿಗೆ ಗಾಂಧಿ ಎಂದು ನಾಮಕರಣ ಮಾಡಲಾಗಿತ್ತಂತೆ. ಪಕ್ಷದ ಹಿರಿಯ ಮತ್ತು ಪ್ರಭಾವಿ ನಾಯಕರಾದ ಕೆ.ಎನ್.ನೆಹರೂ ಅವರು ನಗರಾಡಳಿತ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

'ಗಾಂಧಿ ಮತ್ತು ನೆಹರೂ ಅವರು ಈಗ ಸ್ಟಾಲಿನ್ (ರಷ್ಯಾ ಕಮ್ಯುನಿಸ್ಟ್) ಅವರ ಅಡಿಯಲ್ಲಿ ಕೆಲಸ ಮಾಡಬೇಕಿದೆ' ಎಂಬ ಮೀಮ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇನ್ನು ತಮಿಳುನಾಡು ವಿಧಾನಸಭೆಗೆ ರಾಜ್ಯದ ಮತ್ತೊಬ್ಬ ಪ್ರಭಾವಿ ನಾಯಕ ಎಂ.ಆರ್.ಗಾಂಧಿ ಅವರು ಬಿಜೆಪಿಯಿಂದ ಆಯ್ಕೆಯಾಗಿದ್ದಾರೆ.

ಮತ್ತಿಬ್ಬರ ಹತ್ಯೆ: ಬಿಜೆಪಿ ಆರೋಪ

ಪಶ್ಚಿಮ ಬಂಗಾಳ ಚುನಾವಣೋತ್ತರ ಹಿಂಸಾಚಾರ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: 'ಟಿಎಂಸಿ ಗೂಂಡಾಗಳು ಶುಕ್ರವಾರ ಬಿಜೆಪಿಯ ಇಬ್ಬರು ಕಾರ್ಯಕರ್ತರನ್ನು ಹತ್ಯೆ ಮಾಡಿದ್ದಾರೆ. ರಾಜ್ಯದ ಹಲವೆಡೆ ಬಿಜೆಪಿ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ' ಎಂದು ಬಿಜೆಪಿ ಆರೋಪಿಸಿದೆ.

'ಮಾಲ್ಡಾ ಜಿಲ್ಲೆಯ ಮೋತಾಬರಿ ವಿಧಾನಸಭಾ ಕ್ಷೇತ್ರದಲ್ಲಿ ಒಂದೇ ಕುಟುಂಬದವರಾದ ಮನೋಜ್ ಮಂಡಲ್ (21) ಮತ್ತು ಚೈತನ್ಯ ಮಂಡಲ್ (19) ಎಂಬ ಬಿಜೆಪಿ ಕಾರ್ಯಕರ್ತರನ್ನು ಹತ್ಯೆ ಮಾಡಲಾಗಿದೆ. ಇಬ್ಬರನ್ನೂ ಹತ್ಯೆ ಮಾಡಿ, ಆನಂತರ ಮರಕ್ಕೆ ನೇಣುಹಾಕಲಾಗಿದೆ. ಉತ್ತರ 24 ಪರಗಣ ಜಿಲ್ಲೆಯಲ್ಲಿ ಟಿಎಂಸಿ ಗೂಂಡಾಗಳಿಂದ ಹಲ್ಲೆಗೆ ಒಳಗಾಗಿದ್ದ ಪಕ್ಷದ ಇನ್ನೊಬ್ಬ ಕಾರ್ಯಕರ್ತ ಶುಕ್ರವಾರ ಮೃತಪಟ್ಟಿದ್ದಾನೆ' ಎಂದೂ ಬಿಜೆಪಿ ಹೇಳಿದೆ.

ಪೂರ್ವ ವರ್ಧಮಾನ್, ಕೂಚ್‌ಬಿಹಾರ್ ಮತ್ತು ಉತ್ತರ 24 ಪರಗಣ ಜಿಲ್ಲೆಯಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಟಿಎಂಸಿ ಗೂಂಡಾಗಳು ಹಲ್ಲೆ ನಡೆಸಿದ್ದಾರೆ. ಎಬಿವಿಪಿ ಕಾರ್ಯಕರ್ತರು ಮತ್ತು ನಾಯಕರ ಮೇಲೆಯೂ ಹಲ್ಲೆ ನಡೆಸಲಾಗಿದೆ ಎಂದು ಬಿಜೆಪಿ ಆರೋಪಿಸಿದೆ.

ಈ ಆರೋಪಗಳನ್ನು ಟಿಎಂಸಿ ಅಲ್ಲಗಳೆದಿದೆ.

ಪ್ರಮಾಣ ಪತ್ರ ಸಲ್ಲಿಸಿ: ರಾಜ್ಯದಲ್ಲಿನ ಚುನಾವಣೋತ್ತರ ಹಿಂಸಾಚಾರ, ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿ ಎಂದು ಕೋಲ್ಕತ್ತ ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಐವರು ನ್ಯಾಯಮೂರ್ತಿಗಳ ಪೀಠವು ಈ ಸೂಚನೆ ನೀಡಿದೆ. 'ಎಲ್ಲಿ ಹಿಂಸಾಚಾರ ನಡೆಯಿತು ಮತ್ತು ಅದನ್ನು ನಿಯಂತ್ರಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು ಸೋಮವಾರದ ಒಳಗೆ ನೀಡಿ' ಎಂದು ಹೈಕೋರ್ಟ್ ಸೂಚಿಸಿದೆ.

ಪ. ಬಂಗಾಳದ ನೂತನ ಶಾಸಕರಲ್ಲಿ 140 ಮಂದಿ ಶುಕ್ರವಾರ ವಿಧಾನಸಭೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಕೋವಿಡ್‌ನ ಕಾರಣದಿಂದ ಹಲವು ಹಂತಗಳಲ್ಲಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಆಯೋಜಿಸಲಾಗಿದೆ –ಪಿಟಿಐ ಚಿತ್ರ

ಟಿಎಂಸಿ ವಿರುದ್ಧ ಅಪಪ್ರಚಾರ: ಶಿವಸೇನಾ

ಮುಂಬೈ (ಪಿಟಿಐ): 'ದೆಹಲಿ ಚುನಾವಣೆಯಲ್ಲಿ ಬಿಜೆಪಿ ಸೋತ ನಂತರ ಹಿಂಸಾಚಾರ ನಡೆದಿತ್ತು. ಈಗ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸೋತ ನಂತರ ಹಿಂಸಾಚಾರ ನಡೆದಿದೆ. ಟಿಎಂಸಿ ಗೂಂಡಾಗಳು ಈ ದಾಳಿಗಳನ್ನು ನಡೆಸಿದ್ದಾರೆ ಎಂದು ಪ್ರಚಾರ ನಡೆಸಲಾಗುತ್ತಿದೆ' ಎಂದು ಶಿವಸೇನಾ ಆಶ್ಚರ್ಯ ವ್ಯಕ್ತಪಡಿಸಿದೆ.

ಶಿವಸೇನಾ ಮುಖವಾಣಿ ಸಾಮ್ನಾದ ಸಂಪಾದಕೀಯದಲ್ಲಿ ಪಶ್ಚಿಮ ಬಂಗಾಳದಲ್ಲಿನ ಚುನಾವಣೋತ್ತರ ಹಿಂಸಾಚಾರದ ಬಗ್ಗೆ ಬರೆಯಲಾಗಿದೆ. 'ಇವುಗಳ ಹಿಂದೆ ಯಾರ ಕೈವಾಡವಿದೆ? ಈ ವಿಷಯಗಳು ಸ್ಪಷ್ಟವಾಗಬೇಕು. ಈ ಚುನಾವಣೆಯಲ್ಲಿ ಬಿಜೆಪಿ ಸೋತ ತಕ್ಷಣವೇ, ಹಿಂಸಾಚಾರ ಭುಗಿಲೇಳುತ್ತಿದೆ ಎಂದು ಮಾಧ್ಯಮಗಳು ವರದಿ ಮಾಡಿದವು. ಬಿಜೆಪಿ ಕಾರ್ಯಕರ್ತರ ಮೇಲೆ ಟಿಎಂಸಿ ಕಾರ್ಯಕರ್ತರು ಹಲ್ಲೆ ನಡೆಸುತ್ತಿದ್ದಾರೆ ಎಂದು ವರದಿ ಮಾಡಲಾಗುತ್ತಿದೆ. ಆದರೆ ಇದೆಲ್ಲವೂ ಅಪಪ್ರಚಾರ' ಎಂದು ಶಿವಸೇನಾ ಹೇಳಿದೆ.

'ಬಂಗಾಳದ ರಾಜ್ಯಪಾಲರಿಗೆ ಕರೆ ಮಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ಹಿಂಸಾಚಾರದ ಬಗ್ಗೆ ಮಾಹಿತಿ ಪಡೆದುಕೊಂಡರು. ಅದರ ಬೆನ್ನಲ್ಲೇ ಬಿಜೆಪಿ ರಾಜ್ಯ ನಾಯಕರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೆ ತರುವಂತೆ ಕೋರಿದ್ದಾರೆ. ಬಿಜೆಪಿಯೇ ಹೀಗೆ ಕಳ್ಳಾಟವಾಡುತ್ತಿದೆ' ಎಂದು ಶಿವಸೇನಾ ಆರೋಪಿಸಿದೆ.

ರಾಜ್ಯಪಾಲರ ವರದಿಗೆ ಮನವಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರದ ಬಗ್ಗೆ ಪರಿಶೀಲನೆ ನಡೆಸಲು ಬಂದಿರುವ ಕೇಂದ್ರ ಗೃಹ ಸಚಿವಾಲಯದ ತಂಡವು ರಾಜ್ಯಪಾಲ ಜಗದೀಪ್ ಧನಕರ್ ಅವರನ್ನು ಶುಕ್ರವಾರ ಭೇಟಿ ಮಾಡಿದೆ. ಮೇ 3ರಂದು ನಡೆದ ಹಿಂಸಾಚಾರ, ರಾಜ್ಯದಲ್ಲಿನ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ವರದಿ ನೀಡಿ ಎಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ.

ಪ್ರಧಾನಿ ಮೋದಿ ವಿರುದ್ಧ ಜಾರ್ಖಂಡ್ ಸಿ.ಎಂ ಟೀಕೆ

ಹೇಮಂತ್ ಸೊರೇನ್ ವಿರುದ್ಧ ಜಗನ್‌ಮೋಹನ್‌ರೆಡ್ಡಿ ವಾಗ್ದಾಳಿ

ಅಮರಾವತಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ವಿರುದ್ಧ ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಶುಕ್ರವಾರ ವಾಗ್ದಾಳಿ ನಡೆಸಿದರು.

'ಆತ್ಮೀಯ ಹೇಮಂತ್ ಸೊರೇನ್ ಅವರೇ ನಿಮ್ಮ ಬಗ್ಗೆ ನನಗೆ ಅಪಾರ ಗೌರವ ಇದೆ. ಒಬ್ಬ ಸಹೋದರನಾಗಿ ನಾನು ನಿಮಗೆ ಹೇಳಬಯಸುವುದೇನೆಂದರೆ, ನಮ್ಮ ಭಿನ್ನಾಭಿಪ್ರಾಯಗಳು ಏನೇ ಇರಬಹುದು, ರಾಜಕಾರಣದಲ್ಲಿ ಈ ಮಟ್ಟಕ್ಕೆ ಇಳಿಯುವುದರಿಂದ ನಾವೇ ನಮ್ಮ ದೇಶವನ್ನು ದುರ್ಬಲಗೊಳಿಸಿದಂತಾಗುತ್ತದೆ' ಎಂದು ಜಗನ್‌ಮೋಹನ್ ರೆಡ್ಡಿ ಟ್ವೀಟ್ ಮಾಡಿದ್ದಾರೆ.

ಜಗನ್‌ಮೋಹನ್ ರೆಡ್ಡಿ

ಕೋವಿಡ್‌–19 ಪರಿಸ್ಥಿತಿ ನಿರ್ವಹಣೆ ಕುರಿತು ಮಾಹಿತಿ ಪಡೆಯುವ ಸಲುವಾಗಿ ಪ್ರಧಾನಿ ಮೋದಿ ಗುರುವಾರ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ದೂರವಾಣಿ ಮೂಲಕ ಸಮಾಲೋಚನೆ ನಡೆಸಿದ್ದರು.

ಈ ಕುರಿತು ಪ್ರತಿಕ್ರಿಯಿಸಿದ್ದ ಜಾರ್ಖಂಡ್ ಮುಖ್ಯಮಂತ್ರಿ ಸೊರೇನ್, 'ಪ್ರಧಾನಿ ರಾಜ್ಯದಲ್ಲಿನ ಕೋವಿಡ್ ಬಿಕ್ಕಟ್ಟಿನ ಗಂಭೀರತೆಯನ್ನು ಅರಿಯುವ ಬದಲು 'ಮನ್ ಕಿ ಬಾತ್' ಆಡುತ್ತಿದ್ದರು' ಎಂದು ಟ್ವೀಟ್ ಮಾಡಿದ್ದರು. ಈ ಟ್ವೀಟ್ ಆಕ್ಷೇಪಿಸಿರುವ ಜಗನ್‌ಮೋಹನ್ ರೆಡ್ಡಿ, ಸೊರೇನ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ದೂರುತ್ತಾ ಕೂರುವುದು ಸರಿಯಲ್ಲ. ಕೋವಿಡ್ ವಿರುದ್ಧದ ಹೋರಾಟದಲ್ಲಿ ಎಲ್ಲರೂ ಪ್ರಧಾನಿಯವರ ಕೈಬಲಪಡಿಸುವುದು ಮುಖ್ಯ' ಎಂದೂ ಅವರು ಹೇಳಿದ್ದಾರೆ. ಆದರೆ, ಈ ಬಗ್ಗೆ ಸೊರೇನ್ ಪ್ರತಿಕ್ರಿಯೆ ನೀಡಿಲ್ಲ.

ಸಂತೋಷ್ ವಾಗ್ದಾಳಿ: ಇದೇ ವಿಷಯವಾಗಿ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಸೇರಿದಂತೆ ಹಲವು ಮುಖಂಡರು ಸೊರೇನ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಇದು ಕೆಲವು ರಾಜಕೀಯ ಮುಖಂಡರು ಯಾವ ಮಟ್ಟಕ್ಕೆ ಇಳಿಯಬಲ್ಲರು ಎಂಬುದನ್ನು ಇದು ತೋರಿಸುತ್ತದೆ. ಮುಖ್ಯಮಂತ್ರಿ ಸ್ಥಾನದಲ್ಲಿರುವ ಇವರಿಗೆ ಕನಿಷ್ಠ ವಿನಯವೂ ಇಲ್ಲ' ಎಂದು ಸಂತೋಷ್ ಟ್ವೀಟ್ ಮಾಡಿದ್ದಾರೆ.

ಕೋವಿಡ್: ವಿಕಾಸ್ ಖನ್ನಾ ಸಹಾಯ

ನ್ಯೂಯಾರ್ಕ್ (ಪಿಟಿಐ): ಭಾರತದ ಖ್ಯಾತ ಬಾಣಸಿಗ ವಿಕಾಸ್ ಖನ್ನಾ ಅವರು ಕೋವಿಡ್‌–19ಗೆ ಸಂಬಂಧಿಸಿದಂತೆ ಆಮ್ಲಜನಕ ಕಾನ್ಸಂಟ್ರೇಟರ್‌ಗಳು ಮತ್ತು ಪಿಪಿಇ ಕಿಟ್‌ಗಳು ಸೇರಿದಂತೆ ಹಲವು ವೈದ್ಯಕೀಯ ಉಪಕರಣಗಳನ್ನು ಭಾರತಕ್ಕೆ ಕಳುಹಿಸಿದ್ದಾರೆ.

ಕಳೆದ ವರ್ಷ ಕೋವಿಡ್‌–19 ಮೊದಲ ಅಲೆಯ ಸಂದರ್ಭದಲ್ಲೂ ಭಾರತದಲ್ಲಿನ ಲಕ್ಷಾಂತರ ಮಂದಿಗೆ ಊಟ ಮತ್ತು ಅಗತ್ಯ ವಸ್ತುಗಳನ್ನು ವಿತರಿಸಿದ್ದರು.

ಈ ಬಾರಿ ಸುಮಾರು 10 ಸಾವಿರ ಆಮ್ಲಜನಕ ಕಾನ್ಸ್‌ಂಟ್ರೇಟರ್‌ಗಳು ಮತ್ತು 50 ಸಾವಿರ ಅಗ್ನಿನಿರೋಧಕ ಪಿಪಿಇ ಕಿಟ್‌ಗಳನ್ನು ಸಂಗ್ರಹಿಸಿ ಭಾರತಕ್ಕೆ ಕಳುಹಿಸುವುದು ಅವರ ಉದ್ದೇಶವಾಗಿದೆ.

'ಕೆಲವೇ ದಿನಗಳಲ್ಲಿ 5.25 ಲಕ್ಷ ಡಾಲರ್ (ಸುಮಾರು ₹4ಕೋಟಿ) ದೇಣಿಗೆ ಸಂಗ್ರಹವಾಗಿದೆ. 650 ಆಮ್ಲಜನಕ ಕಾನ್ಸಂಟ್ರೇಟರ್‌ಗಳು ಮತ್ತು 5000 ಪಿಪಿಇ ಕಿಟ್‌ಗಳು ಈಗಾಗಲೇ ಭಾರತ ತಲುಪಿವೆ' ಎಂದು ಖನ್ನಾ ಟ್ವೀಟ್ ಮಾಡಿದ್ದಾರೆ.

'ನಮ್ಮ ತಾಯ್ನಾಡಿನಲ್ಲಿನ ಪರಿಸ್ಥಿತಿ ಹೃದಯವಿದ್ರಾವಕವಾಗಿದೆ. ಸಾಧ್ಯವಾದಷ್ಟು ಜೀವಗಳನ್ನು ಉಳಿಸಬೇಕು ಎನ್ನುವುದು ನನ್ನ ಆಶಯ' ಎಂದು ಅವರು ಹೇಳಿದ್ದಾರೆ.

ಭಾರತಕ್ಕೆ 10 ಸಾವಿರ ಆಮ್ಲಜನಕ ಕಾನ್ಸಂಟ್ರೇಟರ್‌ಗಳ ನೆರವು

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಹಲವು ಅಂಗಸಂಸ್ಥೆಗಳು ಸುಮಾರು 10 ಸಾವಿರ ಆಮ್ಲಜನಕ ಕಾನ್ಸಂಟ್ರೇಟರ್‌ಗಳು ಮತ್ತು ಒಂದು ಕೋಟಿ ವೈದ್ಯಕೀಯ ಮಾಸ್ಕ್‌ಗಳು ಮತ್ತು 15 ಲಕ್ಷ ಫೇಸ್‌ಶೀಲ್ಡ್‌ಗಳನ್ನು ಭಾರತಕ್ಕೆ ಕಳುಹಿಸಿವೆ.

'ಕೋವಿಡ್‌–19 ನಿಯಂತ್ರಿಸುವ ನಿಟ್ಟಿನಲ್ಲಿ ವಿಶ್ವಸಂಸ್ಥೆಯು ಭಾರತಕ್ಕೆ ಎಲ್ಲ ರೀತಿಯ ನೆರವು ನೀಡುತ್ತಿದೆ. ಇದರ ಭಾಗವಾಗಿ ಹಲವು ವೈದ್ಯಕೀಯ ಉಪಕರಣಗಳನ್ನು ಒದಗಿಸಲಾಗಿದೆ' ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಅವರ ವಕ್ತಾರ ಸ್ಟೆಫನ್ ದುಜಾರ್ರಿಕ್ ತಿಳಿಸಿದ್ದಾರೆ.

'ಭಾರತದಲ್ಲಿ ಸ್ಥಳೀಯವಾಗಿ ಮತ್ತು ರಾಷ್ಟ್ರಮಟ್ಟದಲ್ಲಿ ವಿಶ್ವಸಂಸ್ಥೆಯ ವಿವಿಧ ತಂಡಗಳು ಕಾರ್ಯನಿರ್ವಹಿಸುತ್ತಿವೆ. ವೆಂಟಿಲೇಟರ್‌ಗಳು ಮತ್ತು ಆಮ್ಲಜನಕ ಉತ್ಪಾದನೆ ಘಟಕಗಳನ್ನು ಸಹ ವಿಶ್ವಸಂಸ್ಥೆ ತಂಡ ಖರೀದಿಸಿದೆ' ಎಂದಿದ್ದಾರೆ.

ಪರಿಹಾರ ಸಾಮಗ್ರಿ ಹೊತ್ತು ತಂದ ಅಮೆರಿಕದ ಆರು ವಿಮಾನಗಳು

ವಾಷಿಂಗ್ಟನ್ (ಪಿಟಿಐ): ಕೋವಿಡ್‌–19 ಪಿಡುಗಿನ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ನೆರವಿನ ಹಸ್ತ ಚಾಚಿರುವ ಅಮೆರಿಕ, ಕಳೆದ ಆರು ದಿನಗಳಲ್ಲಿ ಔಷಧಿ ಸೇರಿದಂತೆ ವಿವಿಧ ವೈದ್ಯಕೀಯ ಪರಿಕರಗಳನ್ನು ಆರು ವಿಮಾನಗಳ ಮೂಲಕ ಕಳುಹಿಸಿದೆ.

1,25,000 ವಯಲ್ ರೆಮ್‌ಡಿಸಿವಿರ್ ಔಷಧ, 1,500 ಆಮ್ಲಜನಕ ಸಿಲಿಂಡರ್‌ಗಳು, 10 ಲಕ್ಷ ರ‍್ಯಾಪಿಡ್ ಪರೀಕ್ಷಾ ಕಿಟ್‌ಗಳು ಸೇರಿದಂತೆ ವಿವಿಧ ವೈದ್ಯಕೀಯ ಪರಿಕರಗಳು ಇದರಲ್ಲಿ ಸೇರಿವೆ. ಈ ಆಮ್ಲಜನಕ ಸಿಲಿಂಡರ್‌ಗಳನ್ನು ಮರುಪೂರಣ ಮಾಡಬಹುದಾಗಿದೆ ಎಂದು ಮೂಲಗಳು ಹೇಳಿವೆ.

550 ಮೊಬೈಲ್ ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ಕಳುಹಿಸಲಾಗಿದೆ. ಇವುಗಳು ವಾತಾವರಣದಲ್ಲಿನ ಆಮ್ಲಜನಕವನ್ನು ಸಂಸ್ಕರಿಸಿ, ಸಂಗ್ರಹಿಸುವ ಸಾಮರ್ಥ್ಯ ಹೊಂದಿವೆ. ಇವುಗಳನ್ನು ಐದು ವರ್ಷಗಳಿಗೂ ಹೆಚ್ಚು ಅವಧಿಗೆ ಬಳಸಬಹುದಾಗಿದೆ.

25 ಲಕ್ಷ ಎನ್‌–95 ಮಾಸ್ಕ್‌ಗಳು, ಒಟ್ಟಿಗೆ 20ಕ್ಕೂ ಹೆಚ್ಚು ರೋಗಿಗಳಿಗೆ ಆಮ್ಲಜನಕ ಪೂರೈಕೆ ಮಾಡುವ ಸಾಮರ್ಥ್ಯ ಇರುವ 'ಆಕ್ಸಿಜನ್ ಕಾನ್ಸ್‌ಟ್ರೇಶನ್ ಸಿಸ್ಟಮ್'ಗಳು, 210 ಪಲ್ಸ್ ಆಕ್ಸಿಮೀಟರ್‌ಗಳನ್ನು ಸಹ ಭಾರತಕ್ಕೆ ಕಳುಹಿಸಲಾಗಿದೆ ಎಂದು ಇವೇ ಮೂಲಗಳು ಹೇಳಿವೆ.

ಯುಎಸ್‌ಎಐಡಿ ಸಂಸ್ಥೆ ಈ ಪರಿಹಾರ ಸಾಮಗ್ರಿಗಳನ್ನು ಭಾರತಕ್ಕೆ ಕಳುಹಿಸುವ ವ್ಯವಸ್ಥೆ ಮಾಡಿದೆ. ರಕ್ಷಣಾ ಇಲಾಖೆ, ಆರೋಗ್ಯ ಮತ್ತು ಮಾನವ ಸೇವಾ ಇಲಾಖೆ, ಟ್ರಾವಿಸ್ ಏರ್ ಫೋರ್ಸ್ ಬೇಸ್ ಹಾಗೂ ಕ್ಯಾಲಿಫೋರ್ನಿಯಾ ರಾಜ್ಯದ ಆಡಳಿತ, ನ್ಯಾಷನಲ್ ಏರ್‌ಲೈನ್ಸ್, ಯುನೈಟೆಡ್ ಏರ್‌ಲೈನ್ಸ್ ಈ ಕಾರ್ಯಕ್ಕೆ ಕೈಜೋಡಿಸಿವೆ ಎಂದು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಭಾರತದಿಂದ ಬರುವ ಆಸ್ಟ್ರೇಲಿಯನ್ನರಿಗೆ ನಿಷೇಧ ಮೇ 15ಕ್ಕೆ ಹಿಂತೆಗೆತ

ಮೆಲ್ಬರ್ನ್ (ಪಿಟಿಐ): ಕೋವಿಡ್ ಪೀಡಿತ ಭಾರತದಿಂದ ಸ್ವದೇಶಕ್ಕೆ ಬರುವ ಆಸ್ಟ್ರೇಲಿಯಾದ ನಾಗರಿಕರಿಗೆ ಹೇರಿದ್ದ ನಿಷೇಧವನ್ನು ಶನಿವಾರ (ಮೇ 15) ಹಿಂತೆಗೆದುಕೊಳ್ಳಲಾಗುವುದು ಎಂದು ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್ ಶುಕ್ರವಾರ ತಿಳಿಸಿದ್ದಾರೆ.

ಸ್ಕಾಟ್ ಮಾರಿಸನ್

ಮೇ 15ರಂದು ಭಾರತದಿಂದ ಬರುವ ಮೊದಲ ವಿಮಾನ ಡಾರ್ವಿನ್ ನಗರ ವಿಮಾನ ನಿಲ್ದಾಣದಲ್ಲಿ ಇಳಿಯಲಿದೆ. ವಿಮಾನ ಪ್ರಯಾಣಿಕರಿಗೆ ಕೋವಿಡ್ ಪರೀಕ್ಷೆ ಕಡ್ಡಾಯ ಎಂದೂ ಅವರು ಹೇಳಿದ್ದಾರೆ.

ಆಸ್ಟ್ರೇಲಿಯಾ ಸರ್ಕಾರವು ಇದೇ ಮೊದಲ ಬಾರಿಗೆ ತನ್ನ ನಾಗರಿಕರಿಗೆ ಸ್ವದೇಶಕ್ಕೆ ಹಿಂತಿರುಗಲು ತಾತ್ಕಾಲಿಕ ನಿಷೇಧವನ್ನು ವಿಧಿಸಿತ್ತು. ಆಸ್ಟ್ರೇಲಿಯಾಕ್ಕೆ ಬರುವ ಮುನ್ನ ನಾಗರಿಕರು 14 ದಿನ ಭಾರತದಲ್ಲಿದ್ದರೆ ಅಂಥವರು ಸ್ವದೇಶಕ್ಕೆ ಹಿಂತಿರುಗುವಂತಿಲ್ಲ. ಒಂದು ವೇಳೆ ಈ ನಿಷೇಧವನ್ನು ಮೀರಿದರೆ ಅವರಿಗೆ 5 ವರ್ಷಗಳ ಜೈಲುಶಿಕ್ಷೆ ಹಾಗೂ ಭಾರಿ ಮೊತ್ತದ ದಂಡ ವಿಧಿಸುವುದಾಗಿಯೂ ತಿಳಿಸಿತ್ತು.

ಜೋಧ್‌ಪುರ: ಕೊಳವೆ ಬಾವಿಗೆ ಬಿದ್ದಿದ್ದ ಬಾಲಕನ ರಕ್ಷಣೆ

ಜೋಧ್‌ಪುರ (ರಾಜಸ್ಥಾನ) (ಪಿಟಿಐ): ಇಲ್ಲಿಯ ಜಲೋರ್ ಜಿಲ್ಲೆಯ ಹಳ್ಳಿಯೊಂದರಲ್ಲಿ ಸುಮಾರು 90 ಅಡಿಗಳಷ್ಟು ಆಳದ ಕೊಳವೆ ಬಾವಿಯೊಂದರಲ್ಲಿ ಸಿಲುಕಿದ್ದ ನಾಲ್ಕು ವರ್ಷದ ಬಾಲಕನನ್ನು 16 ಗಂಟೆಗಳ ಕಾರ್ಯಾಚರಣೆ ಬಳಿಕ ಶುಕ್ರವಾರ ರಕ್ಷಿಸಲಾಗಿದೆ.

ಅನಿಲ್ ದೇವಾಸಿ ಎಂಬ ಬಾಲಕ ಗುರುವಾರ ಆಟವಾಡುವಾಗ ಕೊಳವೆ ಬಾವಿಗೆ ಬಿದ್ದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ ವಾರ್ತೆ

ಖ್ಯಾತ ಸಂಗೀತ ನಿರ್ದೇಶಕ ವನರಾಜ್ ಭಾಟಿಯಾ

ಮುಂಬೈ (ಪಿಟಿಐ): ಖ್ಯಾತ ಸಂಗೀತ ನಿರ್ದೇಶಕ ವನರಾಜ್ ಭಾಟಿಯಾ(94) ಅವರು ಅಲ್ಪಕಾಲದ ಅನಾರೋಗ್ಯದಿಂದ ಶುಕ್ರವಾರ ಮುಂಬೈನ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ ಎಂದು ಅವರ ಸಹೋದ್ಯೋಗಿಯೊಬ್ಬರು ತಿಳಿಸಿದ್ದಾರೆ.

ಭಾಟಿಯಾ ಅವರು ಮುಂಬೈನ ನೇಪಿಯನ್ ಸೀ ರಸ್ತೆಯ ರುಂಗ್ಟಾ ಹೌಸಿಂಗ್ ಕಾಲೊನಿಯಲ್ಲಿರುವ ಅಪಾರ್ಟ್‌ಮೆಂಟ್‌ವೊಂದರಲ್ಲಿ ಒಬ್ಬರೇ ವಾಸಿಸುತ್ತಿದ್ದರು.

ಸುಮಾರು 6 ಸಾವಿರ ಜಿಂಗಲ್ಸ್‌ಗಳಿಗಾಗಿ ಅವರು ಕೆಲಸ ಮಾಡಿದ್ದಾರೆ. ಸಿನಿಮಾ ರಂಗ ಪ್ರವೇಶಿಸಿದ ವನರಾಜ ಅವರು, ಖ್ಯಾತ ನಿರ್ದೇಶಕ ಶ್ಯಾಮ್ ಬೆನಗಲ್ ಅವರ ನಿರ್ದೇಶನದ 'ಅಂಕುರ್' ಮತ್ತು 'ಭೂಮಿಕಾ' ಸಿನಿಮಾಗಳಿಗೆ ಹಾಗೂ ದೂರದರ್ಶನದ ಪ್ರಸಿದ್ಧ ಧಾರಾವಾಹಿ 'ಭಾರತ್ ಏಕ್ ಖೋಜ್(ಡಿಸ್ಕವರಿ ಆಫ್ ಇಂಡಿಯಾ)'ಗೆ ಸಂಗೀತ ಸಂಯೋಜನೆ ಮಾಡಿದ್ದಾರೆ.

ಅವರಿಗೆ ಪದ್ಮಶ್ರೀ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಗೋವಿಂದ್ ನಿಹಲಾನಿಯವರ 'ತಾಮಸ್' ದೂರದರ್ಶನ ಸರಣಿಗೆ ನೀಡಿದ್ದ ಸಂಗೀತ ಸಂಯೋಜನೆಗಾಗಿ ರಾಷ್ಟ್ರ ಪ್ರಶಸ್ತಿ ಲಭಿಸಿತ್ತು.

ಸಿತಾರ್ ವಾದಕ ಪ್ರತೀಕ್ ಚೌಧರಿ

ನವದೆಹಲಿ (ಪಿಟಿಐ): ಖ್ಯಾತ ಸಿತಾರ್ ವಾದಕ ಪ್ರತೀಕ್ ಚೌಧರಿ(49) ಅವರು ಕೊರೊನಾ ಸಂಬಂಧಿ ಆರೋಗ್ಯ ಸಮಸ್ಯೆಯಿಂದಾಗಿ ಶುಕ್ರವಾರ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಪುತ್ರರಿದ್ದಾರೆ.

ಪ್ರತೀಕ್ ತಂದೆ ಖ್ಯಾತ ಸಿತಾರ್ ವಾದಕ ಪಂಡಿತ್ ದೇವವ್ರತ ಚೌಧರಿ ಕಳೆದ ಶನಿವಾರ ನಿಧನರಾಗಿದ್ದರು.

'ಪ್ರತೀಕ್ ಚೌಧರಿ, ಭರವಸೆಯ ಪ್ರತಿಭೆ. ಗುರುವಾರ ಅವರು ತಮ್ಮ ತಂದೆಯೊಂದಿಗೆ ಅನಂತ ದೆಡೆಗೆ ಸಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ' ಎಂದು ಸಂಗೀತ ಕ್ಷೇತ್ರದ ಇತಿಹಾಸಕಾರ ಪವಾಜ್ ಝಾ ಟ್ವೀಟರ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಸಂಘ, ಎನ್.ಹೆಚ್.ಎಂ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ.

ದೂರವಾಣಿ ಸಂಖ್ಯೆ : 228700, E-Mail ID: rchomandya@gmail.com

ಸಂಖ್ಯೆ: NHM/RCH/HR/ 33 /2021-22 ದಿನಾಂಕ :06.05.2021

ನೇಮಕಾತಿ ಪ್ರಕಟಣೆ

ವಿಷಯ : ಮಂಡ್ಯ ಜಿಲ್ಲೆಯಲ್ಲಿ 2021–22 ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ವಿವಿಧ ಹುದ್ದೆಗಳನ್ನು ಮೆರಿಟ್ ಕಂ ರೋಸ್ಟರ್ ಆಧಾರದಲ್ಲಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳು **ದಿ: 21.05.2021 ರಂದು ಅರ್ಜಿಯನ್ನು 10 ರಿಂದ ಮಧ್ಯಾಹ್ನ 02.00 ರೊಳಗೆ** ಪಡೆದು ಭರ್ತಿ ಮಾಡಿ ಸಂಬಂಧಿಸಿದ ದಾಖಲಾತಿಗಳೊಂದಿಗೆ **ಮಧ್ಯಾಹ್ನ 03.00 ರೊಳಗೆ** ಸಲ್ಲಿಸುವುದು. ನಂತರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು **ದಿನಾಂಕ: 24.05.2021 ರಂದು ಬೆಳಗ್ಗೆ:10.00 ರಿಂದ 1.30 ಘಂಟೆಯೊಳಗೆ** ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರ್.ಸಿ.ಹೆಚ್. ಕಛೇರಿ **08232–228700** ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ. **08232–224027** ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

ಕ್ರ ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಕಾರ್ಯಕ್ರಮ/ನೇಮಕ ಮಾಡುವ ಸ್ಥಳ	ವಿದ್ಯಾರ್ಹತೆ	ವಯೋಮಿತಿ	ಮಾಸಿಕ ಸಂಚಿತ ವೇತನ
1	ಪ್ರಸೂತಿ ತಜ್ಞರು	1	ತಾಯಿ ಆರೋಗ್ಯ (ಎಫ್.ಆರ್.ಯು)	ಎಂ.ಡಿ ಓ.ಬಿ.ಜಿ/ಡಿ.ಎನ್.ಬಿ/ಡಿ.ಜಿ.ಓ ಹಾಗೂ ಕೆ.ಎಂ.ಸಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಹಾಗೂ ತಜ್ಞತೆಯನ್ನು ಕರ್ನಾಟಕದ ಮೆಡಿಕಲ್ ಕೌನ್ಸಿಲ್‌ನಲ್ಲಿ ನೊಂದಾಯಿಸಿರಬೇಕು.	70 ವರ್ಷದ ಒಳಗಿರಬೇಕು ಹಾಗೂ ದೈಹಿಕವಾಗಿ ಎಲ್ಲಾ ಕರ್ತವ್ಯ ನಿರ್ವಹಿಸಲು ಸದೃಢರಾಗಿರಬೇಕು	ರೂ. 110000/–
2	ಅರವಳಿಕೆ ತಜ್ಞರು	1	ತಾಯಿ ಆರೋಗ್ಯ (ಎಫ್.ಆರ್.ಯು)	ಎಂ.ಡಿ ಅನಸ್ತೀಷಿಯ/ಡಿ.ಎನ್.ಬಿ/ಡಿ.ಎ ಹಾಗೂ ಕೆ.ಎಂ.ಸಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಹಾಗೂ ತಜ್ಞತೆಯನ್ನು ಕರ್ನಾಟಕದ ಮೆಡಿಕಲ್ ಕೌನ್ಸಿಲ್‌ನಲ್ಲಿ ನೊಂದಾಯಿಸಿರಬೇಕು	70 ವರ್ಷದ ಒಳಗಿರಬೇಕು ಹಾಗೂ ದೈಹಿಕವಾಗಿ ಎಲ್ಲಾ ಕರ್ತವ್ಯ ನಿರ್ವಹಿಸಲು ಸದೃಢರಾಗಿರಬೇಕು	ರೂ. 110000/–
3	ವೈದ್ಯರು	1	ತಾಯಿ ಆರೋಗ್ಯ	ಎಂ.ಬಿ.ಬಿ.ಎಸ್ ಉತ್ತೀರ್ಣರಾಗಿರಬೇಕು ಹಾಗೂ ಕೆ.ಎಂ.ಸಿ ನೋಂದಣಿ ಹೊಂದಿರಬೇಕು, ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಕಾನ್ವೋಕೇಷನ್ / ಪದವಿ ಪ್ರಮಾಣ ಪತ್ರ ಕಡ್ಡಾಯವಾಗಿ ಹೊಂದಿರಬೇಕು.	70 ವರ್ಷದ ಒಳಗಿರಬೇಕು ಹಾಗೂ ದೈಹಿಕವಾಗಿ ಎಲ್ಲಾ ಕರ್ತವ್ಯ ನಿರ್ವಹಿಸಲು ಸದೃಢರಾಗಿರಬೇಕು	ರೂ. 45000/–
4	ವೈದ್ಯರು	5	ಎಸ್.ಎನ್.ಸಿ.ಯು ಕೆ.ಆರ್.ಪೇಟೆ–03 ಹುದ್ದೆ ಹಾಗೂ ಮಿಮ್ಸ್– 02 ಹುದ್ದೆ,	ಎಂ.ಬಿ.ಬಿ.ಎಸ್ ಪದವಿ ಹೊಂದಿರಬೇಕು ಹಾಗೂ ಕೆ.ಎಂ.ಸಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಹೊಂದಿರಬೇಕು, ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಕಾನ್ವೋಕೇಷನ್ / ಪದವಿ ಪ್ರಮಾಣ ಪತ್ರ ಕಡ್ಡಾಯವಾಗಿ ಹೊಂದಿರಬೇಕು.	45 ವರ್ಷದ ಒಳಗಿರಬೇಕು	ರೂ. 45000/–
5	ವೈದ್ಯರು	1	ಆರ್.ಎನ್.ಟಿ.ಸಿ.ಪಿ ಕಾರ್ಯಕ್ರಮ (ಏಮ್ಸ್ ನಾಗಮಂಗಲ)	ಎಂ.ಬಿ.ಬಿ.ಎಸ್ ಅಥವಾ ಸಮಾನ ಪದವಿಯನ್ನು, ಭಾರತ ಸರ್ಕಾರದ ವೈದ್ಯಕೀಯ ಮಂಡಳಿ (ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ)ಯಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಪಡೆದಿರಬೇಕು ಆರ್.ಎನ್.ಟಿ.ಸಿ.ಪಿ– (1) ಡಿಪ್ಲೋಮಾ/ಎಂ.ಡಿ ಪಬ್ಲಿಕ್ ಹೆಲ್ತ್/ ಪಿ.ಎಸ್.ಎಂ/ಕಮ್ಯುನಿಟಿ ಮೆಡಿಸಿನ್/ ಸಿ.ಹೆಚ್.ಎ/ ಟ್ಯುಬರ್‌ಕ್ಯುಲೋಸಿಸ್&ಚೆಸ್ಟ್‌ಡಿಸೀಸಸ್. (2) ಆರ್.ಎನ್.ಟಿ.ಸಿ.ಪಿ ಕಾರ್ಯಕ್ರಮದ ಅಡಿಯಲ್ಲಿ ಒಂದು ವರ್ಷದ ಸೇವಾನುಭವ. (3) ಬೇಸಿಕ್ ಕಂಪ್ಯೂಟರ್ ಜ್ಞಾನ ಕಡ್ಡಾಯ.	45 ವರ್ಷ ವಯಸ್ಸಿನೊಳಗಿನವರಿಗೆ ಮೊದಲ ಆದ್ಯತೆ, ಸದರಿ ವಯಸ್ಸಿನವರು ಲಭ್ಯವಿಲ್ಲದಿದ್ದಲ್ಲಿ 60 ವರ್ಷದ ವಯೋಮಾನದೊಳಗಿನವರನ್ನು ಪರಿಗಣಿಸಲಾಗುವುದು. (ದೈಹಿಕವಾಗಿ ಎಲ್ಲಾ ಕರ್ತವ್ಯ ನಿರ್ವಹಿಸಲು ಸದೃಢರಾಗಿರಬೇಕು)	ರೂ. 45000/–
6	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	6	ನಗರ ಪ್ರಾ.ಆ ಕೇಂದ್ರ–03 ಹುದ್ದೆ ಹಾಗೂ ತಾಯಿ ಆರೋಗ್ಯ ಕಾರ್ಯಕ್ರಮ–03 ಹುದ್ದೆ	ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಜಿ.ಎನ್.ಎಂ/ ಬಿ.ಎಸ್‌ಸಿ ನರ್ಸಿಂಗ್ ಪದವಿ ಹೊಂದಿರಬೇಕು ಹಾಗೂ ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೋಂದಣಿ (ಕೆ.ಎನ್.ಸಿ) ಹೊಂದಿರಬೇಕು.	45 ವರ್ಷದ ಒಳಗಿರಬೇಕು	ರೂ. 11500/–
7	ನೇತ್ರ ಸಹಾಯಕರು	1	ಆರ್.ಬಿ.ಎಸ್.ಕೆ ಕಾರ್ಯಕ್ರಮ (ಕೆ.ಆರ್.ಪೇಟೆ ತಾಲ್ಲೂಕು)	ಡಿಪ್ಲೋಮಾ ಇನ್ ಆಪ್ಟೋಮೆಟ್ರಿ ಹಾಗು ಎನ್.ಪಿ.ಸಿ.ಬಿ ತರಬೇತಿ ಮತ್ತು ಕಂಪ್ಯೂಟರ್ ತರಬೇತಿ ಪ್ರಮಾಣ ಪತ್ರ	45 ವರ್ಷದ ಒಳಗಿರಬೇಕು	ರೂ. 12600/–
8	ಇ–ಹಾಸ್ಪಿಟಲ್ ಪ್ರೋಗ್ರಾಮರ್/ ಆಪರೇಶನ್ ಮ್ಯಾನೇಜರ್	1	ಇ–ಹಾಸ್ಪಿಟಲ್ ಕಾರ್ಯಕ್ರಮ	ಬಿ.ಇ/ ಬಿ.ಟೆಕ್ ಇನ್ ಸಿ.ಎಸ್‌ಇ/ಐ.ಎಸ್.ಇ/ಐ.ಟಿ ಅಥವಾ ಎಂ.ಟೆಕ್ (ಸಿ.ಎಸ್/ಐ.ಟಿ) ಅಥವಾ ಎಂ.ಸಿ.ಎ, **ಸೇವಾನುಭವ:** ಐ.ಟಿ ಇಂಡಸ್ಟ್ರಿಯಲ್ಲಿ ಸಾಫ್ಟ್‌ವೇರ್ ಪ್ರೋಗ್ರಾಮರ್/ ಡೆವೆಲಪರ್ ಆಗಿ 3 ವರ್ಷ ಸೇವೆ ಸಲ್ಲಿಸಿರಬೇಕು. ಹೆಚ್.ಟಿ.ಎಂ.ಎಲ್, ಎಕ್ಸ್.ಎಂ.ಎಲ್, ಜಾವಾಸ್ಕ್ರಿಪ್ಟ್, ಎಎಸ್‌ಪಿ, ನೆಟ್, ಜಾವಾ, ಪೋಸ್ಟ್‌ಗ್ರೀ ಎಸ್.ಕ್ಯೂ.ಎಲ್ ಇತ್ಯಾದಿ ಸೇವಾನುಭವ ಇರಬೇಕು.	45 ವರ್ಷದ ಒಳಗಿರಬೇಕು	ರೂ. 29000/–

ವಿಶೇಷ ಸೂಚನೆ : (1) ಕ್ರಮ ಸಂಖ್ಯೆ 01 ರಿಂದ 05 ರ ಹುದ್ದೆಯು ರೋಲಿಂಗ್ ಪ್ರಕಟಣೆಯಾಗಿದ್ದು, ಪ್ರಕಟಣಾ ದಿನದಿಂದ 31 ಮಾರ್ಚ್ 2022ರ ವರೆಗೆ ಚಾಲ್ತಿಯಲ್ಲಿರುತ್ತದೆ ಆದ್ದರಿಂದ ರೋಸ್ಟರ್ ಅನ್ವಯವಾಗುವುದಿಲ್ಲ. (2) ಸದರಿ ನೇಮಕಾತಿ ಪ್ರಕ್ರಿಯೆಯು ಜಿಲ್ಲಾ ಆರೋಗ್ಯ ಸಂಘದ ಆದೇಶಕ್ಕೆ ಅನುಗುಣವಾಗಿ ಮುಂದಿನ ಮಾರ್ಪಾಡುಗಳಿಗೆ ಒಳಪಟ್ಟಿರುತ್ತದೆ.

ಸಹಿ/–ಸದಸ್ಯ ಕಾರ್ಯದರ್ಶಿ, ಜಿಲ್ಲಾ ಆರೋಗ್ಯ ಸಂಘ, ಎನ್.ಹೆಚ್.ಎಂ ಹಾಗೂ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು, ಮಂಡ್ಯ

DIPR/AD-MDY/MCA/071/2021-22

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಭಾರತ ತಂಡ: ಮರಳಿದ ರವೀಂದ್ರ ಜಡೇಜ, ಹನುಮವಿಹಾರಿ

ವಿರಾಟ್ ಬಳಗದಲ್ಲಿ ಮಯಂಕ್, ಪ್ರಸಿದ್ಧ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ಇಂಗ್ಲೆಂಡ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡುವ ಭಾರತ ತಂಡಕ್ಕೆ 20 ಆಟಗಾರರನ್ನು ಆಯ್ಕೆ ಮಾಡಲಾಗಿದೆ.

ಶುಕ್ರವಾರ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಡಬ್ಲ್ಯುಟಿಸಿ ಫೈನಲ್ ಮತ್ತು ಇಂಗ್ಲೆಂಡ್ ವಿರುದ್ಧದ ಸರಣಿಗೆ ತಂಡವನ್ನು ಪ್ರಕಟಿಸಲಾಯಿತು. ವಿರಾಟ್ ಕೊಹ್ಲಿ ನಾಯಕತ್ವದ ತಂಡದಲ್ಲಿ ಕರ್ನಾಟಕದ ಮಯಂಕ್ ಅಗರವಾಲ್ ಸ್ಥಾನ ಉಳಿಸಿಕೊಂಡಿದ್ದಾರೆ. ರಾಜ್ಯದ ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ಕಾಯ್ದಿಟ್ಟ ಆಟಗಾರರಾಗಿ ಸ್ಥಾನ ಪಡೆದುಕೊಂಡಿದ್ದಾರೆ. ಕಳೆದ ಮಾರ್ಚ್‌ನಲ್ಲಿ ಭಾರತದಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಪದಾರ್ಪಣೆ ಮಾಡಿದ್ದರು. ಮೂರು ಪಂದ್ಯಗಳನ್ನು ಆಡಿ ಆರು ವಿಕೆಟ್‌ಗಳನ್ನು ಗಳಿಸಿದ್ದರು.

ಈಚೆಗೆ ಮುಂಬೈನಲ್ಲಿ ಅಪೆಂಡಿಸೈಟಿಸ್ ಶಸ್ತ್ರಚಿಕಿತ್ಸೆಗೊಳಗಾಗಿರುವ ಕೆ.ಎಲ್. ರಾಹುಲ್ ಮತ್ತು ಕೋವಿಡ್ ಸೋಂಕಿಗೊಳಗಾಗಿರುವ ವೃದ್ಧಿಮಾನ್ ಸಹಾ ಅವರನ್ನೂ ಆಯ್ಕೆಗೆ ಪರಿಗಣಿಸಲಾಗಿದೆ. ಆದರೆ ಅವರು ಫಿಟ್‌ನೆಸ್ ಟೆಸ್ಟ್‌ನಲ್ಲಿ ಉತ್ತೀರ್ಣರಾದರೆ ತಂಡಕ್ಕೆ ಸೇರ್ಪಡೆಯಾಗುವರು.

ಹೋದ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾ ಪ್ರವಾಸದ ಸಂದರ್ಭದಲ್ಲಿ ಗಾಯಗೊಂಡಿದ್ದ ರವೀಂದ್ರ ಜಡೇಜ ಮತ್ತು ಹನುಮವಿಹಾರಿ ಅವರೂ ತಂಡಕ್ಕೆ ಮರಳಿದ್ದಾರೆ. ಸ್ವದೇಶದಲ್ಲಿಯೇ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಇವರಿಬ್ಬರೂ ಆಡಿರಲಿಲ್ಲ. ಐಪಿಎಲ್‌ನಲ್ಲಿ ಜಡೇಜ ಮಿಂಚಿದ್ದರು.

ತಂಡದಲ್ಲಿ ಪ್ರಸಿದ್ಧ ಕೃಷ್ಣ ಮತ್ತು ಆವೇಶ್ ಖಾನ್ ಸೇರಿ ಒಟ್ಟು ಎಂಟು ಮಧ್ಯಮವೇಗಿಗಳಿಗೆ ಅವಕಾಶ ನೀಡಲಾಗಿದೆ. ಅನುಭವಿ ಸ್ಪಿನ್ನರ್ ಆರ್.ಅಶ್ವಿನ್ ಮತ್ತು ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಇದ್ದಾರೆ.

ಲಯದಲ್ಲಿರದ ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ಮಧ್ಯಮವೇಗಿ ನವದೀಪ್ ಸೈನಿ ಸ್ಥಾನ ಪಡೆದಿಲ್ಲ.

ಜೂನ್ 18ರಿಂದ ಸೌತಾಂಪ್ಟನ್‌ನಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಭಾರತವು ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಆ ಬಳಿಕ ಇಂಗ್ಲೆಂಡ್ ಎದುರು ನಾಲ್ಕು ಟೆಸ್ಟ್‌ಗಳ ಸರಣಿಯಲ್ಲಿ ತಂಡವು ಆಡಲಿದೆ.

ಪ್ರಸಿದ್ಧ ಕೃಷ್ಣ

ಮಯಂಕ್ ಅಗರವಾಲ್

ತಂಡ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ, ಶುಭಮನ್ ಗಿಲ್, ಮಯಂಕ್ ಅಗರವಾಲ್, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ (ಉಪನಾಯಕ), ಹನುಮವಿಹಾರಿ, ರಿಷಭ್ ಪಂತ್ (ವಿಕೆಟ್‌ಕೀಪರ್), ಆರ್. ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಜಸ್‌ಪ್ರೀತ್ ಬೂಮ್ರಾ, ಇಶಾಂತ್ ಶರ್ಮಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್, ಉಮೇಶ್ ಯಾದವ್. ಕೆ.ಎಲ್. ರಾಹುಲ್ ಮತ್ತು ವೃದ್ಧಿಮಾನ್ ಸಹಾ (ಫಿಟ್‌ನೆಸ್ ಪರೀಕ್ಷೆಯ ನಂತರ ಖಚಿತ)

ಕಾಯ್ದಿಟ್ಟ ಆಟಗಾರರು: ಅಭಿಮನ್ಯು ಈಶ್ವರನ್, ಪ್ರಸಿದ್ಧ ಕೃಷ್ಣ, ಆವೇಶ್ ಖಾನ್, ಅರ್ಜನ್ ನಾಗವಾಸವಲ್ಲಾ.

ಸುದ್ದಿ 2 ನಿಮಿಷ

‘ದಕ್ಷಿಣ ಆಫ್ರಿಕಾ ಆಟಗಾರರಿಗೆ ಬಯೋಬಬಲ್ ಸುರಕ್ಷಿತವಾಗಿತ್ತು’

ಜೋಹಾನ್ಸ್‌ಬರ್ಗ್ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ರಚಿಸಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಬಯೋಬಬಲ್‌ನಲ್ಲಿ ನಮ್ಮ ದೇಶದ ಆಟಗಾರರು ಸುರಕ್ಷಿತ ಭಾವ ಅನುಭವಿಸಿದ್ದರು ಎಂದು ದಕ್ಷಿಣ ಆಫ್ರಿಕಾ ಕ್ರಿಕೆಟ್ ಮಂಡಳಿಯ ನಿರ್ದೇಶಕ ಗ್ರೇಮ್ ಸ್ಮಿತ್ ಹೇಳಿದ್ದಾರೆ.

ಬಯೋಬಬಲ್‌ನಲ್ಲಿ ಕೆಲವು ಆಟಗಾರರಿಗೆ ಕೋವಿಡ್ ಪ್ರಕರಣಗಳು ದೃಢಪಟ್ಟ ಹಿನ್ನೆಲೆಯಲ್ಲಿ, ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯನ್ನು ಮೇ 4ರಂದು ಮುಂದೂಡಲಾಗಿತ್ತು. ಲೀಗ್‌ನಲ್ಲಿ ಭಾಗವಹಿಸಿದ್ದ ದಕ್ಷಿಣ ಆಫ್ರಿಕಾದ 11 ಮಂದಿ ಈಗಾಗಲೇ ಜೋಹಾನ್ಸ್‌ಬರ್ಗ್‌ಗೆ ತೆರಳಿದ್ದಾರೆ.

‘ನಮ್ಮ ಆಟಗಾರರಿಗೆ ಐಪಿಎಲ್ ಬಯೋಬಬಲ್ ಸುರಕ್ಷಿತ ಎನಿಸಿತ್ತು. ಭಾರತದಲ್ಲಿನ ಜೀವಸುರಕ್ಷಾ ವಾತಾವರಣ ಒಂದು ಉತ್ತಮ ಅನುಭವ. ಕೋವಿಡ್ ಬಿಕ್ಕಟ್ಟಿನಲ್ಲಿ ಅವರು ಅಪಾಯಕ್ಕೆ ಸಿಲುಕಲಿಲ್ಲ’ ಎಂದು ಸುದ್ದಿಗೋಷ್ಠಿಯಲ್ಲಿ ಸ್ಮಿತ್ ನುಡಿದರು. ‘ಕೊರೊನಾ ಸೋಂಕು ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿರುವಾಗ ಅಪಾಯ ಸಾಮಾನ್ಯವಾಗಿ ಇರುತ್ತದೆ. ಇದಕ್ಕೆ ಸಂಘಟಕರನ್ನು ದೂಷಿಸುವಂತಿಲ್ಲ. ಒಂದೇ ವೇಳೆ ವೈರಸ್ ಬಯೋಬಬಲ್ ಪ್ರವೇಶಿಸಿದರೆ ಏನಾಗಲಿದೆ ಎಂದು ಹೇಳುವುದು ಕಷ್ಟ’ ಎಂದೂ ಸ್ಮಿತ್ ಪ್ರತಿಪಾದಿಸಿದರು. ಟೂರ್ನಿಯಲ್ಲಿ ಭಾಗವಹಿಸಿದ್ದ ದಕ್ಷಿಣ ಆಫ್ರಿಕಾದ ಎಲ್ಲ ಆಟಗಾರರಿಗೆ ಸುರಕ್ಷಿತ ಪ್ರಯಾಣ ಖಚಿತಪಡಿಸಿದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯನ್ನು (ಬಿಸಿಸಿಐ) ಸ್ಮಿತ್ ಇದೇ ವೇಳೆ ಶ್ಲಾಘಿಸಿದರು. ‘ನಮ್ಮ ಆಟಗಾರರ ದೃಷ್ಟಿಯಿಂದ ನಮ್ಮ ಗಡಿಗಳನ್ನು ಇನ್ನೂ ಬಂದ್ ಮಾಡಿಲ್ಲ. ಹೀಗಾಗಿ ಅವರ ಮರಳುವಿಕೆ ಸುಲಭವಾಯಿತು’ ಎಂದು ಸ್ಮಿತ್ ನುಡಿದರು.

ವಿಶ್ವಕಪ್‌ಗೆ ಭಾರತದ ಶೂಟರ್‌ಗಳು

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ಗೂ ಮೊದಲು ಕ್ರೊವೇಷ್ಯಾದಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಶೂಟರ್‌ಗಳು ಪಾಲ್ಗೊಳ್ಳಲಿದ್ದಾರೆ.

ಜೂನ್ 22ರಿಂದ ಜುಲೈ 3ರವರೆಗೆ ಕ್ರೊವೇಷ್ಯಾದ ಒಸಿಜೆಕ್‌ನಲ್ಲಿ ಟೂರ್ನಿ ನಡೆಯಲಿದ್ದು, ಈ ಸಂದರ್ಭದಲ್ಲಿ ಶೂಟರ್‌ಗಳು ಯೂರೋಪ್‌ನಲ್ಲಿ ತರಬೇತಿಯಲ್ಲಿ ಪಾಲ್ಗೊಳ್ಳಲಿರುವುದರಿಂದ ಈ ಅವಕಾಶ ಸಿಗಲಿದೆ.

ಈ ಟೂರ್ನಿಯನ್ನು ಈ ಹಿಂದೆ ಅಜರ್‌ಬೈಜಾನ್‌ನ ಬಾಕುವಿನಲ್ಲಿ (ಜೂನ್ 21ರಿಂದ ಜುಲೈ 2ರವರೆಗೆ) ಆಯೋಜಿಸಲು ನಿರ್ಧರಿಸಲಾಗಿತ್ತು. ಆದರೆ ಕೋವಿಡ್ ಸೋಂಕು ಪ್ರಕರಣಗಳ ಏರಿಕೆಯಿಂದಾಗಿ ರದ್ದು ಮಾಡಲಾಗಿತ್ತು.

ಭಾರತದ 15 ಶೂಟರ್‌ಗಳ ತಂಡವು ಮೇ 11ರಂದು ಯೂರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಕ್ರೊವೇಷ್ಯಾದ ಜಾಗ್ರೆಬ್‌ಗೆ ತೆರಳಲಿದೆ. ಅದಾದ ಬಳಿಕ ಒಸಿಜೆಕ್‌ನಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಯಲ್ಲಿ ಪದಕಗಳಿಗೆ ಗುರಿಯಿಡಲಿದ್ದಾರೆ. ನಂತರ ಟೋಕಿಯೊ ಒಲಿಂಪಿಕ್ ಕೂಟಕ್ಕೆ ತೆರಳಲಿದ್ದಾರೆ.

ನವೀನ್‌ಗೆ ಕೋವಿಡ್

ಸೋಫಿಯಾ, ಬಲ್ಗೇರಿಯಾ (ಪಿಟಿಐ): ಭಾರತದ ಕುಸ್ತಿಪಟು ನವೀನ್ ಕುಮಾರ್ ಅವರಲ್ಲಿ ಕೋವಿಡ್ ಇರುವುದು ದೃಢಪಟ್ಟಿದೆ. ಹೀಗಾಗಿ ಇಲ್ಲಿ ನಡೆಯುತ್ತಿರುವ ವಿಶ್ವ ಒಲಿಂಪಿಕ್ಸ್ ಅರ್ಹತಾ ಟೂರ್ನಿಯಿಂದ ಅವರು ಹಿಂದೆ ಸರಿದಿದ್ದಾರೆ.

ಗ್ರೀಕೊ ರೋಮನ್ ವಿಭಾಗದಲ್ಲಿ ಸ್ಪರ್ಧಿಸುವ ನವೀನ್ (97 ಕೆಜಿ ವಿಭಾಗ) ಅವರಿಗೆ ಕೊರೊನಾ ಸೋಂಕು ತಗಲಿರುವುದು ಇದು ಎರಡನೇ ಬಾರಿ. ಕೆಲವು ತಿಂಗಳ ಹಿಂದೆ ಅವರು ಕೋವಿಡ್‌ನಿಂದ ಚೇತರಿಸಿಕೊಂಡಿದ್ದರು.

‘ಪರೀಕ್ಷೆಗಾಗಿ ಬುಧವಾರ ಮಾದರಿಗಳನ್ನು ಸಂಗ್ರಹಿಸಲಾಗಿತ್ತು. ನಮ್ಮೆಲ್ಲರ ವರದಿ ‘ನೆಗೆಟಿವ್’ ಬಂದಿದ್ದು, ನವೀನ್‌ಗೆ ಸೋಂಕು ಖಚಿತಪಟ್ಟಿದೆ. ನಾವು ತಂಗಿದ್ದ ಹೋಟೆಲ್‌ನಲ್ಲೇ ಅವರೂ ಇದ್ದರು. ಆದರೆ ಸೋಂಕಿನ ಯಾವುದೇ ಲಕ್ಷಣಗಳಿಲ್ಲ’ ಎಂದು ಗ್ರೀಕೊ ರೋಮನ್ ವಿಭಾಗದ ರಾಷ್ಟ್ರೀಯ ಕೋಚ್ ಹರಗೋವಿಂದ್ ಸಿಂಗ್ ತಿಳಿಸಿದ್ದಾರೆ. ಗ್ರೀಕೊ ರೋಮನ್ ಸ್ಪರ್ಧೆಗಳು ಶನಿವಾರ ಆರಂಭವಾಗಲಿವೆ. ನವೀನ್ ಹಿಂದೆ ಸರಿದಿರುವುದರಿಂದ 97 ವಿಭಾಗದಲ್ಲಿ ಭಾರತದ ಪ್ರಾತಿನಿಧ್ಯವಿಲ್ಲ. ಈ ವಿಭಾಗದಲ್ಲಿ ಭಾರತದ ಯಾವುದೇ ಪೈಲ್ವಾನರು ಇನ್ನೂ ಒಲಿಂಪಿಕ್ಸ್ ಟಿಕೆಟ್ ಪಡೆದಿಲ್ಲ.

ವಿಶ್ವ ಅರ್ಹತಾ ಕುಸ್ತಿ ಟೂರ್ನಿಯಲ್ಲಿ ಭಾರತದ ನಿಶಾ, ಪೂಜಾಗೆ ನಿರಾಸೆ

ಒಲಿಂಪಿಕ್ಸ್‌ಗೆ ಸೀಮಾ; ಸುಮಿತ್‌ಗೆ ಬೆಳ್ಳಿ

ಸೋಫಿಯಾ, ಬಲ್ಗೇರಿಯ (ಪಿಟಿಐ): ಭಾರತದ ಕುಸ್ತಿಪಟು ಸೀಮಾ ಬಿಸ್ಲಾ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಇಲ್ಲಿ ನಡೆಯುತ್ತಿರುವ ವಿಶ್ವ ಅರ್ಹತಾ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸುವುರೊಂದಿಗೆ ಈ ಸಾಧನೆ ಮಾಡಿದ್ದಾರೆ.

ಪುರುಷರ ವಿಭಾಗದಲ್ಲಿ ಸುಮಿತ್ ಮಲಿಕ್ ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡಿದ್ದಾರೆ. ಮಹಿಳಾ ವಿಭಾಗದಲ್ಲಿ ನಿಶಾ ಮತ್ತು ಪೂಜಾ ನಿರಾಸೆಗೊಂಡಿದ್ದಾರೆ.

50 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಸೀಮಾ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಪೋಲೆಂಡ್‌ನ ಅನಾ ಲುಕಾಸಿಯಾಕ್ ಅವರನ್ನು 2–1ರಲ್ಲಿ ಮಣಿಸಿದರು.

ಸೀಮಾ ಬಿಸ್ಲಾ –ಟ್ವಿಟರ್ ಚಿತ್ರ

ಫೈನಲ್‌ನಲ್ಲಿ ಇಕ್ವಡೋರ್‌ನ ಲೂಸಿಯಾ ಯಮಿಲೆತ್ ಯೆಪೆಜ್ ವಿರುದ್ಧ 29 ವರ್ಷದ ಸೀಮಾ ಸೆಣಸುವರು. ಈ ಬೌಟ್ ಶನಿವಾರ ನಡೆಯಲಿದೆ.

68 ಕೆಜಿ ವಿಭಾಗದಲ್ಲಿ ನಿಶಾ, ಬಲ್ಗೇರಿಯದ ಮಿಮಿ ಹ್ರಿಸ್ಟೋವಗೆ ಮಣಿದರು. ಪ್ರಬಲ ಪಟ್ಟುಗಳನ್ನು ಪ್ರಯೋಗಿಸಿದ ಮಿಮಿ ರಕ್ಷಣಾತ್ಮಕ ಆಟದಲ್ಲೂ ಪಾರಮ್ಯ ಮೆರೆದರು. ಹೀಗಾಗಿ ಪಾಯಿಂಟ್ ಗಳಿಸಲು ಭಾರತದ ಕುಸ್ತಿಪಟು ಪರದಾಡಿದರು. ತಾಂತ್ರಿಕವಾಗಿ ಮೇಲುಗೈ ಸಾಧಿಸುವ ಮೂಲಕ ಮಿಮಿ ಸೆಮಿಫೈನಲ್ ಪ್ರವೇಶಿಸಿದರು. ಮೊದಲ ಸುತ್ತಿನಲ್ಲಿ ನಿಶಾ ಗೆಲುವು ಸಾಧಿಸಿದ್ದರು.

ಆದರೆ ಕ್ವಾರ್ಟರ್ ಫೈನಲ್ ಬೌಟ್‌ನಲ್ಲಿ ಪೋಲೆಂಡ್‌ನ ನತಾ ಲಿಯಾ ಇವೋನಾ ಎದುರು ಸೋತರು.

76 ಕೆಜಿ ವಿಭಾಗದಲ್ಲಿ ಪೂಜಾ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು. ಅವರನ್ನು ಲಿಥುವೇನಿಯಾದ ಕಮಿಲೆ ಗೌಜೇಟ್ 4–3ರಲ್ಲಿ ಮಣಿಸಿದರು.

ಮಹಿಳಾ ವಿಭಾಗದಲ್ಲಿ ನಾಲ್ವರು ಜೊತೆಯಾಗಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿರುವುದು ಇದೇ ಮೊದಲು. 2016ರಲ್ಲಿ ಮೂವರು ಸ್ಪರ್ಧಿಸಿದ್ದರು. ಈ ಬಾರಿ ವಿನೇಶಾ ಪೋಗಟ್ (53 ಕೆಜಿ), ಅನ್ಶು ಮಲಿಕ್ (57 ಕೆಜಿ) ಮತ್ತು ಸೋನಂ ಮಲಿಕ್ (62 ಕೆಜಿ) ಈಗಾಗಲೇ ಅರ್ಹತೆ ಗಳಿಸಿದ್ದಾರೆ.

ಪುರುಷರ ವಿಭಾಗದಲ್ಲಿ ಗುರುವಾರ ಫೈನಲ್ ಪ್ರವೇಶಿಸುವುದರೊಂದಿಗೆ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿಕೊಂಡಿದ್ದ ಸುಮಿತ್ ಮಲಿಕ್ ಶುಕ್ರವಾರ ಪದಕದ ಸುತ್ತಿನ ಬೌಟ್‌ನಲ್ಲಿ ಕಾಲುನೋವಿನಿಂದ ಬಳಲಿ ಎದುರಾಳಿಗೆ ಚಿನ್ನ ಬಿಟ್ಟು ಕೊಟ್ಟರು. ಅವರು ಒಲಿಂಪಿಕ್ಸ್‌ಗೆ ಟಿಕೆಟ್ ಗಿಟ್ಟಿಸಿಕೊಂಡ ಪುರುಷರ ವಿಭಾಗದ ನಾಲ್ಕನೇ ಕುಸ್ತಿಪಟು ಆಗಿದ್ದಾರೆ.

ಜ್ವೆರೆವ್‌ಗೆ ಮಣಿದ ರಫೆಲ್ ನಡಾಲ್

ಮ್ಯಾಡ್ರಿಡ್ (ಎಎಫ್‌ಪಿ): ದಿಗ್ಗಜ ಆಟಗಾರ ರಫೆಲ್ ನಡಾಲ್ ಅವರನ್ನು ಸುಲಭವಾಗಿ ಮಣಿಸಿದ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರು ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಶುಕ್ರವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಜ್ವೆರೆವ್ 6-4, 6-4ರಲ್ಲಿ ಜಯ ಗಳಿಸಿದರು.

ಇದು ನಡಾಲ್ ವಿರುದ್ಧ ಜ್ವೆರೆವ್‌ಗೆ ಸತತ ಮೂರನೇ ಜಯವಾಗಿದೆ. ಆದರೆ ಆವೆಮಣ್ಣಿನ ಅಂಗಣದಲ್ಲಿ ಮೊದಲ ಜಯ. ರಫೆಲ್ ನಡಾಲ್ ಕಳೆದ ತಿಂಗಳು ನಡೆದ ಮಾಂಟೆ ಕಾರ್ಲೊ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಸೋತಿದ್ದರು. ಈ ಎರಡು ಸೋಲಿನೊಂದಿಗೆ ಅವರ ಫ್ರೆಂಚ್ ಓಪನ್ ಅಭಿಯಾನದ ಬಗ್ಗೆ ಸಂದೇಹ ಮೂಡಿದೆ. ಟೂರ್ನಿ ಈ ತಿಂಗಳ ಕೊನೆಯಲ್ಲಿ ಆರಂಭವಾಗಲಿದೆ.

ಹಸ್ಸಿ ಗುಣಮುಖ

ನವದೆಹಲಿ (ಪಿಟಿಐ): ಐಪಿಎಲ್ ಫ್ರಾಂಚೈಸ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ಕೋಚ್ ಮೈಕೆಲ್ ಹಸ್ಸಿ ಅವರ ಕೋವಿಡ್ ವರದಿ ‘ನೆಗೆಟಿವ್’ ಬಂದಿದೆ. ಆದರೆ ಚೆನ್ನೈ ಹೋಟೆಲ್‌ನಲ್ಲಿ ಅವರಿಗೆ ಕ್ವಾರಂಟೈನ್ ಮುಂದುವರಿಸಲಾಗಿದೆ. ತಂಡದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಾಶಿ ವಿಶ್ವನಾಥನ್ ಈ ವಿಷಯ ತಿಳಿಸಿದ್ದಾರೆ.

ಹಸ್ಸಿ ಅವರ ಮತ್ತೊಂದು ಪರೀಕ್ಷಾ ವರದಿ ‘ನೆಗೆಟಿವ್’ ಬಂದರೆ ಅವರು ಸಹವರ್ತಿಗಳೊಂದಿಗೆ ಮಾಲ್ಡೀವ್ಸ್‌ಗೆ ತೆರಳಬಹುದು ಎಂದು ಆಸ್ಟ್ರೇಲಿಯಾ ಮಾಧ್ಯಮಗಳು ವರದಿ ಮಾಡಿವೆ.

ಕ್ರಿಕೆಟ್: ಅಬಿದ್, ಅಜರ್ ಶತಕ

ಹರಾರೆ: ಅಬಿದ್ ಅಲಿ (ಬ್ಯಾಟಿಂಗ್ 118, 246ಎಸೆತ, 17ಬೌಂಡರಿ) ಮತ್ತು ಅಜರ್ ಅಲಿ (126; 240ಎ, 17ಬೌಂ) ಇಬ್ಬರ ದ್ವಿಶತಕದ ಜೊತೆಯಾಟದ ಬಲದಿಂದ ಪಾಕಿಸ್ತಾನ ತಂಡವು ಜಿಂಬಾಬ್ವೆ ಎದುರಿನ ಟೆಸ್ಟ್‌ನಲ್ಲಿ ದೊಡ್ಡ ಮೊತ್ತ ಕಲೆಹಾಕುವ ನಿರೀಕ್ಷೆ ಮೂಡಿಸಿದೆ.

ಜಿಂಬಾಬ್ವೆ ವಿರುದ್ಧ ಶುಕ್ರವಾರ ಆರಂಭವಾದ ಎರಡನೇ ಟೆಸ್ಟ್‌ನಲ್ಲಿ ಟಾಸ್ ಗೆದ್ದ ಪಾಕಿಸ್ತಾನ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 12 ರನ್‌ಗಳಾಗುವಷ್ಟರಲ್ಲಿ ರಿಚರ್ಡ್ ನಗರ್ವಾ ಬೌಲಿಂಗ್‌ನಲ್ಲಿ ಇಮ್ರಾನ್ ಬಟ್ ಔಟಾದರು.

ಈ ಸಂದರ್ಭದಲ್ಲಿ ಜೊತೆಗೂಡಿದ ಅಬಿದ್ ಮತ್ತು ಅಜರ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 236 ರನ್ ಸೇರಿಸಿದರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ 90 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 268 ರನ್ ಗಳಿಸಿತು.

ಮೊದಲ ದಿನದಾಟ ಮುಗಿಯುವ ಸ್ವಲ್ಪ ಹೊತ್ತು ಮುಂಚೆ ಅಜರ್ ಅಲಿ ಔಟಾದರು. ಈ ವಿಕೆಟ್ ಪಡೆದ ಮಧ್ಯಮವೇಗಿ ಬ್ಲೆಸಿಂಗ್ ಮುಜರಾಬಾನಿ ಬಾಬರ್ ಅಜಮ್ ಮತ್ತು ಫವಾದ್ ಆಲಂ ಅವರ ವಿಕೆಟ್‌ಗಳನ್ನೂ ಕಬಳಿಸಿದರು.



ಅಬಿದ್ ಅಲಿ ಶತಕದ ಸಂಭ್ರಮ

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 90 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 268 (ಅಬಿದ್ ಅಲಿ ಬ್ಯಾಟಿಂಗ್ 118, ಅಜರ್ ಅಲಿ 126, ಬ್ಲೆಸಿಂಗ್ ಮುಜರಾಬಾನಿ 41ಕ್ಕೆ3) ಜಿಂಬಾಬ್ವೆ ವಿರುದ್ಧದ ಟೆಸ್ಟ್.

ಒಲಿಂಪಿಕ್ಸ್: ಮಿಂಚಿದ ಜೋಡಿ; ಜಕರ್‌ಗೆ ನಾಲ್ಕನೇ ಸ್ಥಾನ

ರೋಯಿಂಗ್: ಅರ್ಜುನ್, ಅರವಿಂದ್‌ಗೆ ಅರ್ಹತೆ

ನವದೆಹಲಿ (ಪಿಟಿಐ): ಭಾರತದ ರೋಯಿಂಗ್ ಸ್ಪರ್ಧಿಗಳಾದ ಅರ್ಜುನ್ ಲಾಲ್ ಜಾಟ್ ಹಾಗೂ ಅರವಿಂದ್ ಸಿಂಗ್ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಟಿಕೆಟ್ ಗಿಟ್ಟಿಸಿದ್ದಾರೆ.

ಟೋಕಿಯೊದಲ್ಲಿ ನಡೆದ ಏಷ್ಯಾ ಒಷಿನಿಯಾ ಅರ್ಹತಾ ಟೂರ್ನಿಯ ಪುರುಷರ ಲೈಟ್‌ವೇಟ್ ಡಬಲ್ ಸ್ಕಲ್ ವಿಭಾಗದಲ್ಲಿ ಈ ಜೋಡಿಯು ಎರಡನೇ ಸ್ಥಾನ ಗಳಿಸುವ ಮೂಲಕ ಕೂಟಕ್ಕೆ ಅರ್ಹತೆ ಪಡೆಯಿತು.

ಪುರುಷರ ವೈಯಕ್ತಿಕ ಸಿಂಗಲ್ಸ್ ಫೈನಲ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ ಭಾರತದ ಜಕರ್ ಖಾನ್ ಒಲಿಂಪಿಕ್ಸ್ ಅವಕಾಶ ತಪ್ಪಿಸಿಕೊಂಡರು. ಏಕೆಂದರೆ ಸ್ಕಲ್ ವಿಭಾಗದಲ್ಲಿ ಒಂದು ದೇಶಕ್ಕೆ ಒಂದು ಅರ್ಹತಾ ಸ್ಥಾನ ಮಾತ್ರ ಮೀಸಲಾಗಿಡಲಾಗಿದೆ.

ಪುರುಷರ ಲೈಟ್‌ವೇಟ್ ಡಬಲ್ ಸ್ಕಲ್‌ನಲ್ಲಿ ಅಗ್ರ ಮೂರು ಸ್ಥಾನ ಗಳಿಸಿದವರು ಟೋಕಿಯೊ ಟಿಕೆಟ್ ಗಳಿಸಿದರು.

‘ಈ ಸ್ಪರ್ಧೆಯಲ್ಲಿ ಪ್ರತಿ ದೇಶಕ್ಕೆ ಒಂದು ಅರ್ಹತಾ ಸ್ಥಾನ ಮಾತ್ರ ಗಳಿಸುವ ಅವಕಾಶವಿತ್ತು. ಅರವಿಂದ್ ಹಾಗೂ ಅರ್ಜುನ್ ಇಲ್ಲಿ ಎರಡನೇ ಸ್ಥಾನ ಪಡೆದು ಅರ್ಹತೆ ಪಡೆದರು. ವೈಯಕ್ತಿಕ ವಿಭಾಗದಲ್ಲಿ ಜಕರ್ ಖಾನ್ ನಾಲ್ಕನೇ ಸ್ಥಾನ ಗಳಿಸಿದರು. ಆದರೆ ದುರದೃಷ್ಟವಶಾತ್ ಅವರಿಗೆ ಅವಕಾಶ ಕೈ ತಪ್ಪಿತು’ ಎಂದು ಭಾರತ ರೋಯಿಂಗ್ ಫೆಡರೇಷನ್ ಅಧ್ಯಕ್ಷೆ ರಾಜಲಕ್ಷ್ಮೀ ಸಿಂಗ್ ದೇವ್ ತಿಳಿಸಿದರು. ಜುಲೈ 23ರಂದು ಆರಂಭವಾಗುವ ಒಲಿಂಪಿಕ್ಸ್‌ಗೆ ರೋಯಿಂಗ್‌ನಲ್ಲಿ ಭಾರತ ದಿಂದ ಅರ್ಜುನ್ ಲಾಲ್ ಮತ್ತು ಅರವಿಂದ್ ಮಾತ್ರ ಸ್ಪರ್ಧಿಸಲಿದ್ದಾರೆ. ಕೋವಿಡ್ ಹಿನ್ನೆಲೆಯಲ್ಲಿ ಇತರ ಅರ್ಹತಾ ಟೂರ್ನಿಗಳಲ್ಲಿ ಭಾರತದವರು ಪಾಲ್ಗೊಳ್ಳುತ್ತಿಲ್ಲ.

‘ಇಟಲಿಯಲ್ಲಿ ಮತ್ತೊಂದು ಒಲಿಂಪಿಕ್ಸ್ ಅರ್ಹತಾ ಟೂರ್ನಿ ನಡೆಯಲಿದೆ. ಆದರೆ ಕೋವಿಡ್ ಹಿನ್ನೆಲೆಯಲ್ಲಿ ನಾವು ಸ್ಪರ್ಧಿಗಳನ್ನು ಕಳುಹಿಸುತ್ತಿಲ್ಲ. ಹೀಗಾಗಿ ಟೋಕಿಯೊದಲ್ಲಿ ನಡೆಯುತ್ತಿರುವುದೇ ನಮಗೆ ಕೊನೆಯ ಅರ್ಹತಾ ಸ್ಪರ್ಧೆಯಾಗಿದೆ’ ಎಂದು ರಾಜಲಕ್ಷ್ಮೀ ತಿಳಿಸಿದರು. ಟೋಕಿಯೊದ ‘ಸೀ ಫಾರೆಸ್ಟ್ ವಾಟರ್‌ವೇ’ಯಲ್ಲಿ ನಡೆದ ಈ ಟೂರ್ನಿಯಲ್ಲಿ ಭಾರತದ 14 ಮಂದಿ ಭಾಗವಹಿಸಿದ್ದರು.

ಸ್ಪರ್ಧೆಯಲ್ಲಿ ಮುನ್ನುಗ್ಗಿದ ಅರ್ಜುನ್ ಹಾಗೂ ಅರವಿಂದ್ ಸಿಂಗ್– ಎಎಫ್‌ಪಿ ಚಿತ್ರ

ಒಲಿಂಪಿಕ್ಸ್ ಅರ್ಹತೆ: ಸೈನಾ, ಕಿದಂಬಿ ಶ್ರೀಕಾಂತ್‌ಗೆ ಹಿನ್ನಡೆ

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ಪ್ರವೇಶ ಪಡೆಯಲು ಕೊನೆಯ ಎರಡು ಟೂರ್ನಿಗಳಲ್ಲಿ ಒಂದಾಗಿದ್ದ ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್‌ಅನ್ನು ಕೋವಿಡ್ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ. ಇದರಿಂದಾಗಿ ಟೋಕಿಯೊ ಟಿಕೆಟ್ ಕನಸು ಹೊತ್ತಿರುವ ಭಾರತದ ಸೈನಾ ನೆಹ್ವಾಲ್ ಹಾಗೂ ಕಿದಂಬಿ ಶ್ರೀಕಾಂತ್ ಅವರಿಗೆ ತೀವ್ರ ಹಿನ್ನಡೆಯಾಗಿದೆ.

ಸುಮಾರು ₹ 4 ಕೋಟಿ ನಲವತ್ತು ಲಕ್ಷ ಬಹುಮಾನ ಮೊತ್ತದ ಟೂರ್ನಿಯು ಕ್ವಾಲಾಲಂಪುರದಲ್ಲಿ ಇದೇ 25ರಿಂದ 30ರವರೆಗೆ ನಿಗದಿಯಾಗಿತ್ತು.

‘ಟೂರ್ನಿಗೆ ಸುರಕ್ಷಿತ ವಾತಾವರಣದಲ್ಲಿ ಕಲ್ಪಿಸಲು ಸಂಘಟಕರು ಹಾಗೂ ನಮ್ಮ ಫೆಡರೇಷನ್ ಎಲ್ಲ ಪ್ರಯತ್ನಗಳನ್ನು ಮಾಡಿದ್ದವು. ಆದರೆ ಕೋವಿಡ್ ಪ್ರಕರಣಗಳಲ್ಲಿ ಇತ್ತೀಚೆಗೆ ಕಂಡುಬಂದ ಏರಿಕೆಯ ಹಿನ್ನೆಲೆಯಲ್ಲಿ ಟೂರ್ನಿಯನ್ನು ಮುಂದೂಡದೇ ಬೇರೆ ದಾರಿಯಿರಲಿಲ್ಲ’ ಎಂದು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಪ್ರಕಟಣೆಯಲ್ಲಿ ತಿಳಿಸಿದೆ.

‘ಒಲಿಂಪಿಕ್ಸ್‌ಗೆ ನಿಗದಿಪಡಿಸಿದ ಅರ್ಹತಾ ಅವಧಿಯೊಳಗೆ ಟೂರ್ನಿ ನಡೆಯುವುದಿಲ್ಲ. ಮುಂದಿನ ವೇಳಾಪಟ್ಟಿಯನ್ನು ಶೀಘ್ರ ನಿಗದಿಪಡಿಸಲಾಗುವುದು’ ಎಂದು ಬಿಡಬ್ಲ್ಯುಎಫ್ ಹೇಳಿದೆ.

ಮೇ 11ರಿಂದ 16ರವರೆಗೆ ನಡೆಯಬೇಕಿದ್ದ ಇಂಡಿಯಾ ಓಪನ್ ಟೂರ್ನಿಯನ್ನು ಮುಂದೂಡಲಾಗಿತ್ತು. ಈಗ ಮಲೇಷ್ಯಾ ಓಪನ್ ಸರದಿ. ಸೈನಾ ಹಾಗೂ ಶ್ರೀಕಾಂತ್ ಇನ್ನು ಜೂನ್ ಒಂದರಿಂದ ಆರರವರೆಗೆ ನಿಗದಿಯಾಗಿರುವ ಸಿಂಗಪುರ ಓಪನ್‌ನಲ್ಲಿ ಅದೃಷ್ಟ ಪರೀಕ್ಷಿಸಬೇಕಿದೆ.

ಸೈನಾ ನೆಹ್ವಾಲ್–ಎಎಫ್‌ಪಿ ಚಿತ್ರ

ಈ ಬೆಳವಣಿಗೆ ಕುರಿತು ಭಾರತ ಬ್ಯಾಡ್ಮಿಂಟನ್ ಸಂಸ್ಥೆಯು (ಬಿಎಐ), ಬಿಡಬ್ಲ್ಯುಎಫ್‌ಅನ್ನು ಸಂಪರ್ಕಿಸಿದ್ದು, ತನ್ನ ಬ್ಯಾಡ್ಮಿಂಟನ್ ಪಟುಗಳ ಅರ್ಹತಾ ಸ್ಥಿತಿಯ ಕುರಿತು ಸ್ಪಷ್ಟತೆ ನೀಡುವಂತೆ ಕೋರಿದೆ.

‘ನಿರ್ಣಾಯಕವಾಗಿದ್ದ ಅರ್ಹತಾ ಟೂರ್ನಿಯು ಮುಂದೂಡಿಕೆಯಾಗಿದ್ದು ದುರದೃಷ್ಟಕರ. ಆದರೆ ಅಂತಹ ಸ್ಥಿತಿಯಲ್ಲೇ ನಾವಿದ್ದೇವೆ. ನಮ್ಮ ನಾಲ್ವರು ಆಟಗಾರರು ಈಗಾಗಲೇ ಒಲಿಂಪಿಕ್ಸ್ ಟಿಕೆಟ್ ಗಳಿಸಿದ್ದಾರೆ. ಸೈನಾ, ಶ್ರೀಕಾಂತ್ ಸೇರಿದಂತೆ ಇನ್ನೂ ಕೆಲವರು ಅರ್ಹತೆಯ ನಿರೀಕ್ಷೆಯಲ್ಲಿದ್ದಾರೆ. ಈ ಕುರಿತು ಮುಂದಿನ ಕ್ರಮಗಳ ಬಗ್ಗೆ ಬಿಡಬ್ಲ್ಯುಎಫ್ ಕಾರ್ಯದರ್ಶಿ ಥಾಮಸ್ ಲುಂಡ್ ಅವರ ಜೊತೆ ಚರ್ಚೆ ನಡೆಸಿದ್ದೇನೆ’ ಎಂದು ಬಿಎಐ ಕಾರ್ಯದರ್ಶಿ ಅಜಯ್ ಸಿಂಘಾನಿಯಾ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,724
ಇಂದಿನ ಅಂತ್ಯ	14,823
▼	98
ದಿನದ ಗರಿಷ್ಠ	14,863

ವಿನಿಮಯ ದರ

$ ಡಾಲರ್	73.51
£ ಪೌಂಡ್	102.31
€ ಯುರೊ	88.77
¥ ಯೆನ್ (100ಕ್ಕೆ)	67.52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹430

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1580)
ಸೋಯಾ (ರಿಫೈನ್ಡ್)	₹1447 (1440)
ಸೂರ್ಯಕಾಂತಿ (ರಿಫೈನ್ಡ್)	₹1730 (1730)
ಪಾಮೋಲಿನ್	₹1365 (1360)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1000-1200
ಮಧ್ಯಮ	₹800-1000
ಸಣ್ಣ	₹500-800

ಕೇಂದ್ರ ಹಣಕಾಸು ಸಚಿವಾಲಯದ ಮಾಸಿಕ ವರದಿಯಲ್ಲಿ ವಿವರಣೆ

‘ಎರಡನೆಯ ಅಲೆಯ ಪರಿಣಾಮ ಸೌಮ್ಯ’

ನವದೆಹಲಿ (ಪಿಟಿಐ): ಕೋವಿಡ್–19ರ ಎರಡನೆಯ ಅಲೆಯು ಅರ್ಥ ವ್ಯವಸ್ಥೆಯ ಮೇಲೆ ಬೀರಲಿರುವ ಪರಿಣಾಮವು, ಮೊದಲ ಅಲೆ ಬೀರಿದಷ್ಟು ತೀವ್ರವಾಗಿರುವ ಸಾಧ್ಯತೆ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯವು ತನ್ನ ಮಾಸಿಕ ವರದಿಯಲ್ಲಿ ಹೇಳಿದೆ.

ಹಾಲಿ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಆರ್ಥಿಕ ಚಟುವಟಿಕೆಗಳು ಕುಸಿತ ಕಾಣುವ ಅಪಾಯವನ್ನು ಎರಡನೆಯ ಅಲೆಯು ತಂದಿತ್ತಿದೆ ಎಂಬುದನ್ನು ವರದಿಯು ಉಲ್ಲೇಖಿಸಿದೆ. ‘ಎರಡನೆಯ ಅಲೆಯ ಪರಿಣಾಮವು ಹಿಂದಿನಂತೆ ತೀವ್ರವಾಗಿ ಇರುವುದಿಲ್ಲ ಎಂದು ಭಾವಿಸಲು ಕಾರಣಗಳು ಇವೆ. ಕೋವಿಡ್–19ರ ನಡುವೆಯೂ ಕಾರ್ಯ ನಿರ್ವಹಿಸಲು ಕಲಿಯುವುದು ಆಸೆಯ ಬೆಳ್ಳಿ ರೇಖೆಯೊಂದನ್ನು ಮೂಡಿಸಿದೆ’ ಎಂದು ವರದಿ ಹೇಳಿದೆ.

2020–21ನೇ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಆರ್ಥಿಕ ಚಟುವಟಿಕೆಗಳು ಚೇತರಿಕೆ ಕಂಡ ಪರಿಣಾಮವಾಗಿ ಕೇಂದ್ರ ಸರ್ಕಾರದ ಆರ್ಥಿಕ ಸ್ಥಿತಿಯು ಈಚಿನ ತಿಂಗಳುಗಳಲ್ಲಿ ಉತ್ತಮಗೊಂಡಿದೆ ಎಂದು ವರದಿ ಹೇಳಿದೆ.

ತಾತ್ಕಾಲಿಕ ಅಂಕಿ–ಅಂಶಗಳ ಪ್ರಕಾರ ನೇರ ತೆರಿಗೆಯ ನಿವ್ವಳ ಸಂಗ್ರಹವು 2020–21ರಲ್ಲಿ ಪರಿಷ್ಕೃತ ಅಂದಾಜಿಗಿಂತ ಶೇಕಡ 4.5ರಷ್ಟು ಹೆಚ್ಚಾಗಿದೆ. 2019–20ರಲ್ಲಿ ಆಗಿದ್ದ ಸಂಗ್ರಹಕ್ಕಿಂತ ಶೇ 5ರಷ್ಟು ಜಾಸ್ತಿ ಆಗಿದೆ. 2019–20ರಲ್ಲಿ ಆದ ಸಂಗ್ರಹಕ್ಕಿಂತ ಗಣನೀಯ ಹೆಚ್ಚಳ ತೆರಿಗೆ ಸಂಗ್ರಹದಲ್ಲಿ ಆಗಿರುವುದು, ಕೊರೊನಾ ಮೊದಲ ಅಲೆಯ ನಂತರ ಆರ್ಥಿಕ ಚೇತರಿಕೆ ಕಂಡುಬಂದಿದೆ ಎಂಬುದನ್ನು ಸೂಚಿಸುತ್ತಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಕಳೆದ ಆರು ತಿಂಗಳುಗಳಲ್ಲಿ ಪ್ರತಿ ತಿಂಗಳೂ ಜಿಎಸ್‌ಟಿ ಸಂಗ್ರಹ ಮೊತ್ತವು ₹ 1 ಲಕ್ಷ ಕೋಟಿಗಿಂತ ಜಾಸ್ತಿ ಇದೆ. ಏಪ್ರಿಲ್‌ನಲ್ಲಿ ದಾಖಲೆಯ ₹ 1.41 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ ಆಗಿರುವುದು ಆರ್ಥಿಕ ಪುನಶ್ಚೇತನ ತಡೆಯಿಲ್ಲದೆ ಆಗುತ್ತಿದೆ ಎಂಬುದನ್ನು ಹೇಳುತ್ತಿದೆ ಎಂದು ವರದಿ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಹೊಸತು	23500-40000
ಹಳತು	42500-50000
ಪುತ್ತೂರು	
ಹೊಸತು	28000-39500
ಹಳತು	39500-49500
ಶಿವಮೊಗ್ಗ	
ಬೆಟ್ಟೆ	41799-43699
ಗೊರಬಲು	24809-31899
ರಾಶಿ	36099-41889
ಸಿದ್ದಾಪುರ	
ಬಿಳಿಗೋಟು	25689-30808
ಚಾಲಿ	32899-36509
ಕೋಕ	17699-28609
ಕೆಂಪುಗೋಟು	22699-28709
ರಾಶಿ	36099-41099
ತಟ್ಟಿಬೆಟ್ಟೆ	32089-36899
ಶಿರಸಿ	
ಬೆಟ್ಟೆ	22069-39039
ಬಿಳಿಗೋಟು	13801-32209
ಚಾಲಿ	33899-37088
ರಾಶಿ	38999-40898
ಸುಳ್ಯ	
ಹೊಸತು	23500-40000
ಹಳತು	40000-49500

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	700- 800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500

ಕಾಳು ಮೆಣಸು	340
ರೇಷ್ಮೆಗೂಡು	
ರಾಮನಗರ	
ಮಿಶ್ರ ತಳಿ (ಸಿ.ಬಿ)	150-356
ದ್ವಿತಳಿ (ಬಿ.ವಿ)	260-442
ಕೊಬ್ಬರಿ	
ಅರಸೀಕೆರೆ	15500-15800

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,625	10,400	10,550	154.30
ಎಸಿ	4,255	4000	4100	
ಆರ್‌ಪಿ	5,100	5100	5,200	
ಆರ್‌ಸಿ	3,000	3000	3010	1547 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

7-5-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9400
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1590)
ಒಂದು ವಾರದ ಡೆಲಿವರಿ	1605 (1585)
ಸೋಯಾ ಕಚ್ಚಾ	1442 (1420)
ಪಾಮ್ ವಾರದ ಡೆಲಿವರಿ	1363 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1680 (1680)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ

47,500 (46,800)

ಬೆಳ್ಳಿ ಕೆ.ಜಿ

70,900 (69,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಟಾಟಾ ವಾಹನಗಳ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ಬೆಲೆಯನ್ನು ಸರಾಸರಿ ಶೇಕಡ 1.8ರಷ್ಟು ಹೆಚ್ಚಳ ಮಾಡುವುದಾಗಿ ಟಾಟಾ ಮೋಟರ್ಸ್ ಹೇಳಿಕೆಯಲ್ಲಿ ಶುಕ್ರವಾರ ತಿಳಿಸಿದೆ.

ಬೆಲೆ ಹೆಚ್ಚಳವು ಶನಿವಾರದಿಂದಲೇ ಅನ್ವಯ ಆಗಲಿದೆ. ಕಚ್ಚಾ ವಸ್ತುಗಳ ಬೆಲೆ ಹೆಚ್ಚಳ ಆಗಿರುವ ಕಾರಣ ವಾಹನಗಳ ಬೆಲೆ ಏರಿಕೆ ಮಾಡಲಾಗುತ್ತಿದೆ ಎಂದು ಕಂಪನಿ ತಿಳಿಸಿದೆ. ಮೇ 7ರಂದು ಅಥವಾ ಅದಕ್ಕೂ ಮೊದಲು ವಾಹನ ಬುಕ್ ಮಾಡಿದವರಿಗೆ ಬೆಲೆ ಏರಿಕೆಯ ಪರಿಣಾಮ ಉಂಟಾಗದಂತೆ ನೋಡಿಕೊಳ್ಳಲಾಗುವುದು ಎಂದು ಕಂಪನಿ ಹೇಳಿದೆ.

ಚಿನ್ನ, ಬೆಳ್ಳಿ ಧಾರಣೆ ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 474ರಷ್ಟು ಹೆಚ್ಚಳ ಆಗಿ, ₹ 47,185ಕ್ಕೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಖರೀದಿ ಹೆಚ್ಚಾಗಿರುವ ಕಾರಣ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಜಾಸ್ತಿ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಬೆಳ್ಳಿ ಬೆಲೆಯು ಕೆ.ಜಿ.ಗೆ ₹ 1,050ರಷ್ಟು ಜಾಸ್ತಿ ಆಗಿದೆ ₹ 70,791ಕ್ಕೆ ತಲುಪಿದೆ.

ಎಲ್‌ಐಸಿ: ಪ್ರಮಾಣಪತ್ರ ಸಲ್ಲಿಕೆಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ, ಸಾವಿಗೆ ಸಂಬಂಧಿಸಿದ ವಿಮಾ ಕ್ಲೇಮ್ ಜೊತೆ ಸಲ್ಲಿಸಬೇಕಿರುವ ದಾಖಲೆಯ ವಿಚಾರದಲ್ಲಿ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಕೆಲವು ರಿಯಾಯಿತಿ ಕಲ್ಪಿಸಿದೆ.

ವ್ಯಕ್ತಿಯು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದರೆ, ಸ್ಥಳೀಯ ಆಡಳಿತ ನೀಡುವ ಮರಣ ಪ್ರಮಾಣಪತ್ರವನ್ನೇ ಸಲ್ಲಿಸಬೇಕು ಎಂಬ ನಿಯಮಕ್ಕೆ ವಿನಾಯಿತಿ ನೀಡಲಾಗಿದೆ. ಮರಣದ ಕುರಿತು ಆಸ್ಪತ್ರೆ ನೀಡುವ ವಿವರದ ಪ್ರತಿಯನ್ನು ಕ್ಲೇಮ್ ಜೊತೆ ಸಲ್ಲಿಸಬಹುದು. ಈ ದಾಖಲೆಗೆ ಎಲ್‌ಐಸಿಯ ಮೊದಲ ದರ್ಜೆ ಅಧಿಕಾರಿಯ ಸಹಿ ಇರಬೇಕು ಎಂದು ಪ್ರಕಟಣೆ ತಿಳಿಸಿದೆ. ಆಸ್ಪತ್ರೆ ನೀಡುವ ಮರಣದ ವಿವರದಲ್ಲಿ ಮರಣದ ತಾರೀಕು ಹಾಗೂ ಸಮಯ ಸ್ಪಷ್ಟವಾಗಿ ನಮೂದಾಗಿರಬೇಕು. ಶವ ಸಂಸ್ಕಾರದ ಪ್ರಮಾಣಪತ್ರ ಕೂಡ ಸಲ್ಲಿಸಬೇಕು.

ಅಕ್ಟೋಬರ್ 31ರವರೆಗೆ ಅವಧಿ ಇರುವ ಆನ್ಯುಯಿಟಿ ಯೋಜನೆಗಳಿಗೆ ಸಂಬಂಧಿಸಿದಂತೆ ಜೀವಿತ ಪ್ರಮಾಣಪತ್ರ ಸಲ್ಲಿಸಲೇಬೇಕು ಎಂಬ ನಿಯಮದಲ್ಲಿ ವಿನಾಯಿತಿ ನೀಡಲಾಗಿದೆ. ವಿಡಿಯೊ ಕರೆ ಮೂಲಕ ಜೀವಿತ ಪ್ರಮಾಣಪತ್ರ ಪಡೆದುಕೊಳ್ಳುವ ವ್ಯವಸ್ಥೆಗೆ ಚಾಲನೆ ನೀಡಿದೆ.

ಜಾಗತಿಕ ಮಟ್ಟದಲ್ಲಿ ಸಕಾರಾತ್ಮಕ ವಹಿವಾಟು

ಮೂರನೆಯ ದಿನವೂ ಸೆನ್ಸೆಕ್ಸ್ ಏರಿಕೆ

ಮುಂಬೈ (ಪಿಟಿಐ): ಕಾರ್ಪೊರೇಟ್ ಕಂಪನಿಗಳ ಫಲಿತಾಂಶ ಉತ್ತಮವಾಗಿರುವುದು ಹಾಗೂ ಜಾಗತಿಕ ಮಟ್ಟದಲ್ಲಿ ಸಕಾರಾತ್ಮಕ ವಹಿವಾಟು ನಡೆದಿದ್ದು ದೇಶದ ಷೇರುಪೇಟೆಗಳಲ್ಲಿ ಉತ್ಸಾಹದ ವಾತಾವರಣ ಸೃಷ್ಟಿಸಿತು. ಇದರ ಪರಿಣಾಮವಾಗಿ ದೇಶಿ ಷೇರುಪೇಟೆ ಸಂವೇದಿ ಸೂಚ್ಯಂಕಗಳು ಶುಕ್ರವಾರ ಏರಿಕೆ ದಾಖಲಿಸಿದವು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ 27 ಪೈಸೆಯಷ್ಟು ಏರಿಕೆ ಆಗಿದ್ದು ಕೂಡ ಷೇರುಪೇಟೆಗಳ ಉತ್ಸಾಹ ಹೆಚ್ಚಿಸಿತು ಎಂದು ವರ್ತಕರು ಹೇಳಿದ್ದಾರೆ. ಸೆನ್ಸೆಕ್ಸ್ 256 ಅಂಶ, ನಿಫ್ಟಿ 98 ಅಂಶ ಏರಿಕೆ ಕಂಡವು.

ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದ ಲಾಭದಲ್ಲಿ ಶೇ 31ರಷ್ಟು ಏರಿಕೆ ದಾಖಲಿಸಿರುವ ಎಚ್‌ಡಿಎಫ್‌ಸಿಯ ಷೇರುಗಳ ಮೌಲ್ಯದಲ್ಲಿ ಶೇ 2.7ರಷ್ಟು ಏರಿಕೆ ಕಂಡುಬಂತು. ಮಹೀಂದ್ರ ಆ್ಯಂಡ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ಎನ್‌ಟಿಪಿಸಿ, ಭಾರ್ತಿ ಏರ್‌ಟೆಲ್, ಐಟಿಸಿ, ಒಎನ್‌ಜಿಸಿ ಮತ್ತು ಅಲ್ಟ್ರಾಟೆಕ್ ಷೇರುಗಳು ಏರಿಕೆ ಕಂಡವು.

ಬಜಾಜ್ ಆಟೊ, ಬಜಾಜ್ ಫೈನಾನ್ಸ್, ಇನ್ಫೊಸಿಸ್, ಕೋಟಕ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಷೇರುಗಳು ಇಳಿಕೆ ಕಂಡವು.

ಹಿಮಾ ದಾಸ್‌ಪಿಟಿಐ ಚಿತ್ರ

ಕೋವಿಡ್ ಲಸಿಕೆ ಪಡೆದ ಹಿಮಾ ದಾಸ್

ನವದೆಹಲಿ (ಪಿಟಿಐ): ಭಾರತದ ವೇಗದ ಓಟಗಾರ್ತಿ ಹಿಮಾ ದಾಸ್ ಗುರುವಾರ ಕೋವಿಡ್–19 ಲಸಿಕೆಯ ಮೊದಲ ಡೋಸ್ ಪಡೆದುಕೊಂಡರು.

21 ವರ್ಷದ ಹಿಮಾ ಅವರು ಈ ವಿಷಯವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಸದ್ಯ ಅವರು ಪಟಿಯಾಲದ ಎನ್‌ಐಎಸ್‌ನಲ್ಲಿ ಪಡೆಯುತ್ತಿದ್ದಾರೆ.

‘ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದಿದ್ದೇನೆ. ನೀವು ಕೂಡ ಪಡೆಯಿರಿ’ ಎಂದು ಹಿಮಾ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ಲಸಿಕೆ ಪಡೆದ ಭಾರತದ ಮೊದಲ ಪ್ರಮುಖ ಟ್ರ್ಯಾಕ್ ಆ್ಯಂಡ್ ಫೀಲ್ಡ್ ಅಥ್ಲೀಟ್ ಆಗಿದ್ದಾರೆ ಅವರು. ಪ್ರತಿ ಅಥ್ಲೀಟ್‌ಗಳು ತಾವಾಗಿಯೇ ನೋಂದಾಯಿಸಿಕೊಂಡು ಲಸಿಕೆ ಪಡೆಯಬೇಕೆಂದು ಭಾರತ ಅಥ್ಲೆಟಿಕ್ಸ್ ಫೆಡರೇಷನ್ ತಿಳಿಸಿದೆ.